REGISTERED NO. M. 1393. ೩೨ ಪುಟಗಳು ಬಿಡಿ ಸಂಚಿಕೆ ಒಂದಾಣೆ




ಶ್ರೀಮದ್ಭೂಮಿತಲೇಷು ಭಾರತಮಹೀಭಾಗಃ ಪ್ರಶಾಸನ್ಮಹೀ
ಪಾಲೇಷ್ವಾಂಗಲನಾಯಕೋ ನರಕುಲವ್ರಾತೇಷು ಚಾರ್ಯಾನ್ವಯಃ।
ಶಸ್ತ್ರಸ್ತದ್ವದವಿಷು ಸಂಯ್ಯವಹೃತಿಪ್ರಾಗಲ್ಭ್ಯಮಾತ್ತೋಽನ್ವಹಂ
ಜೀಯಾದ್ವಿಶ್ವಜನೀನವೃತ್ತಿಚತುರಶ್ಶ್ರೀಕಂಠಕಂಠೀರವಃ ॥

ಪ್ರತಿ ಮಂಗಳವಾರ ಪ್ರಕಟವಾಗುವ ಶ್ರೇಷ್ಯವರ್ಗದ
ಕನ್ನಡ
ವಾರ್ತಾಪತ್ರಿಕೆ.

ನರರ ಕುಲಗಳೊಳಾರ್ಯವಂಶವು, ಧರೆಯ ದೇಶಗಳೊಳಗೆ ಭಾರತ
ವರ ಸುತನಗಳೊಳಾಂಗ್ಲರೊಡೆತನ, ನುಡಿಗಳೊಳು ಮೆರೆವಾ ॥
ತಿರುಳಗನ್ನಡವೊಂದಕೊಂದೊ । ಪ್ಪಿರುವ ತೆರ, ಕಂಠೀರವನು ಮೆರೆ
ದಿರಲಿ ವಂಶಕೆ ಧರೆಗೆ ನೃಪತಿಗೆ ನುಡಿಗೆ ಸೊಬಗೆನಿಸೀ! ॥

ಸಂಪುಟ ೧೭ ಮಂಗಳೂರು ೧೯೩೫ನೇ ಇಸವಿ ದಶಂಬರ ತಾರೀಕು ೨೪ನೇ ಮಂಗಳವಾರ ಸಂಚಿಕೆ ೩೪.

ಅಮೃತಾಂಜನ

(Regd.)

# ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು.

ಇಲ್ಲಿಯ ವರೆಗಿನ ನಮ್ಮ ವಿಲ್ಲಿಯಮ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ "ಕಿಂಗ್ ಎಂಡ್ ಕ್ವೀನ್" ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ.

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅರಿಕೆಮಾಡಿಕೊಳ್ಳುತ್ತೇವೆ. ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೊ

ಬೊಂಬಾಯಿ——————ಮದ್ರಾಸ್——————ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಅಮೃತಾಂಜನ

## Messrs. Kochikar Brothers, Udipi.

## SILVER JUBILEE CELEBRATIONS' ACKNOWLEDGMENT.

We beg to acknowledge with grateful thanks the hundreds of congratulatory telegrams and letters received from Policyholders, Shareholders, friends and well-wishers from the occasion of our Silver We extremely regret it is ledge them individually just e to do so shortly.

OCHIKAR BROTHERS.

ಮೆಸರ್ಸ್. ಕೊಚ್ಚಿಕಾರ್ ಬ್ರದರ್ಸ್, ಉಡುಪಿ.

## ಸಿಲ್ವರ್ ಜುಬಿಲಿ ಮಹೋತ್ಸವದ ಪ್ರಕಟಣೆ.

ನಮ್ಮ ರಜತಮಹೋತ್ಸವದ ಸಮಾರಂಭಕಾಲದಲ್ಲಿ, ಇಂಡಿಯದ ಎಲ್ಲ ಭಾಗಗಳಿಂದಲೂ, ನಮ್ಮ ಪಾಲಿಸಿದಾರರು, ಪಾಲುಗಾರರು, ಮೆಡಿಕಲ್ ಪರೀಕ್ಷಕರು, ಸ್ನೇಹಿತರು ಮತ್ತೂ ಹಿತೈಷಿಗಳಿಂದ ನಮಗೆ ಬಂದಿರುವ ನೂರಾರು ಅಭಿನಂದನಪತ್ರ ಮತ್ತು ತಂತಿಗಳನ್ನು, ನಾವು ಆದರದಿಂದ ಸ್ವೀಕರಿಸಿ, ಅವುಗಳಿಗಾಗಿ ಅವರೆಲ್ಲರಿಗೂ ನಮ್ಮ ಕೃತಜ್ಞತೆಯ ವಂದನೆಗಳನ್ನು ಸಮರ್ಪಿಸುತ್ತೇವೆ. ಈ ಕಾಗದ ತಂತಿಗಳನ್ನು ಪ್ರತ್ಯಪ್ರತ್ಯೇಕವಾಗಿ ಅಂಗೀಕರಿಸಲು, ಪ್ರಕೃತ ಸಾಧ್ಯವಲ್ಲವೆಂದು ನಾವು ವಿಷಾದಿಸುವೆವಾದರೂ, ಮುಂದೆ ಸದ್ಯದಲ್ಲಿಯೇ ಅವೆಲ್ಲವುಗಳನ್ನೂ ಸ್ವೀಕರಿಸಲು ನಮಗೆ ಸಾಧ್ಯವಾಗದಿರದೆಂದು ನಾವು ಕೋರುತ್ತೇವೆ.

ಉಡುಪಿ,
16—12—1935. }

ಕೊಚ್ಚಿಕಾರ್ ಬ್ರದರ್ಸ್.

# KOCHIKAR BROTHERS

| Branch Secretaries For South India including Indian States. | (ESTD. 1910.) | Chief Agents for Bombay City and Suburbs. |
|---|---|---|

OF

## THE BOMBAY LIFE ASSURANCE CO., LTD.

(ESTD. 1908.)

Chairman:- SIR LALUBHAI SAMALDAS, KT., C. I. E., J. P.

## *HAVE JUST CELEBRATED THE SILVER JUBILEE.*

IT MARKS OUR 25 YEARS' "DEVOTED SERVICE" TO POLICY-HOLDERS AND "EXCLUSIVE SERVICE" TO "BOMBAY LIFE".

## Wanted Influential And Honest Agents On Decent Commission.

*For particulars write to or call at our*

MADRAS OFFICE,
POST BOX 337,
MOUNT ROAD, MADRAS.

**or to any of our following offices:-**

CHURNI ROAD, GIRGAUM BOMBAY 4.
VISHVESHWARAPURAM CIRCLE, BANGALORE CITY.
HAZUR ROAD, CALICUT, CAR STREET, MANGALORE.
UDIPI, SOUTH INDIA.

---

# ದಿ ಬೊಂಬೆ ಲ್ಯಾಫ್ ಎಶ್ಯುರೆನ್ಸ್ ಕಂಪೆನಿ, ಲಿಮಿಟೆಡ್

(1908ರಲ್ಲಿ ಸ್ಥಾಪಿತವಾದುದು)

# ಕೊಚ್ಚಿಕಾರ್ ಬ್ರದರ್ಸ್‌ರವರು

| ಆಶ್ರಿತ ಸಂಸ್ಥಾನಗಳು ಕೂಡ ಇಡೀ ದಕ್ಷಿಣ ಹಿಂದುಸ್ಥಾನದ ಬ್ರಾಂಚ್ ಸೆಕ್ರಟರಿಗಳು. | (1910ರಲ್ಲಿ ಸ್ಥಾಪಿತವಾದುದು) | ಬೊಂಬಯಿ ನಗರಕ್ಕೂ, ಸುತ್ತು ಮುತ್ತಲಿನ ಪ್ರದೇಶಗಳಿಗೂ ಚೀಫ್ ಏಜಂಟರು. |
|---|---|---|

ಚೆಯರ್‌ಮ್ಯಾನ್:— ಸರ್ ಲಲ್ಲುಭಾಯ್ ಶಾಮಲದಾಸ್, ಕೆಟಿ., ಸಿ. ಐ. ಇ., ಜೆ. ಪಿ.

## ಇದೇ ದಶಂಬರದಲ್ಲಿ ಸಿಲ್ವರ್ ಜುಬಿಲಿಯನ್ನು ಜರುಗಿಸಿದ ಸಂಸ್ಥೆ.

ಇದು 25 ವರ್ಷ ಕಾಲದ ಪಾಲಿಸಿದಾರರ ಕುರಿತಾದ ನಮ್ಮ ಭಕ್ತಿಪೂರ್ವಕವಾದ ಸೇವೆಯನ್ನೂ 'ಬೊಂಬೆ ಲ್ಯಾಫಿ'ನ ಕುರಿತಾದ ನಮ್ಮ ಶ್ರದ್ಧಾಪೂರ್ವಕವಾದ ಪರಿಶ್ರಮವನ್ನೂ ಗುರುತಿಸಿಕೊಡುವುದಾಗಿದೆ.

**ಜೀವವಿಮೆಯ ಪದ್ಧತಿಯಲ್ಲಿ ಅತ್ಯುತ್ಕೃಷ್ಟವಾಗಿರುವ ಎಲ್ಲ ಸಾಕಲ್ಯಗಳನ್ನೂ ಈ ಸಂಸ್ಥೆಯು ಒದಗಿಸಿಕೊಡುತ್ತಿದೆ.**
**ಕಾಲೋಚಿತವಾದ ಆವಶ್ಯಕತೆಗಳಿಗೊಪ್ಪುವ ಸರ್ವೋತ್ತಮವಾದ ಯೋಜನೆಗಳು.**
**ಸ್ತ್ರೀಯರ ಜೀವವಿಮೆಯನ್ನೂ ಸ್ವೀಕರಿಸಲಾಗುತ್ತದೆ.**
**ಸಂಯುಕ್ತ ಜೀವನ ವಿಮಾಪದ್ಧತಿಯು ಇದರದೊಂದು ವೈಶಿಷ್ಟ್ಯವೇ.**

ಉದಾರವಾದ ಧೋರಣೆಯು ಕಮೀಶನಿನ ಮೇಲೆ ವ್ಯಾಪಕರೂ, ಪ್ರಮಾಣಿಕರೂ ಆಗಿರುವ

## ಏಜೆಂಟರು ಬೇಕಾಗಿದ್ದಾರೆ.

**ವಿಶೇಷ ವಿವರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—**

**ಮದ್ರಾಸ್ ಆಫೀಸ್,**
ಪೋಸ್ಟ್ ಬಾಕ್ಸ್ 337, ಮೌಂಟ್ ರೋಡ್, ಮದ್ರಾಸ್.

ಅಥವಾ ಈ ಕೆಳಗಿನ ನಮ್ಮ ಯಾವುದಾದರೂ ಕಾರ್ಯಾಲಯಗಳಲ್ಲಿಗೆ ಬರೆಯಲೂ ಬಹುದು:—

1. **ಚರ್ಣಿ ರೋಡ್, ಗಿರಗಾಂ, ಬೊಂಬಯಿ 4.**
2. **ವಿಶ್ವೇಶ್ವರಪುರಂ ಸರ್ಕಲ್, ಬೆಂಗಳೂರು ಸಿಟಿ.**
3. **ಹುಜೂರ್ ರೋಡ್, ಕಲ್ಲಿಕೋಟೆ.**
4. **ಕಾರ್ ಸ್ಟೀಟ್, ಮಂಗಳೂರು.**
5. **ಉಡುಪಿ, ದಕ್ಷಿಣ ಇಂಡಿಯ.**

# 1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಿಗಳು.

## (1) ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಅತ್ಯಾವಶ್ಯಕವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವದು, ಮಲಬದ್ಧತೆ, ಒಳಜ್ವರ, ಆಶಕ್ತತೆ ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನೂ ಜೀರ್ಣಶಕ್ತಿಯನ್ನೂ ಹೆಚ್ಚಿಸುವದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ ಸಂಭೋಗಶಕ್ತಿಯನ್ನೂ ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವದು. ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವದು.

ಬಾಟ್ಲಿ 1ರ ರೂ. 2—8—0. ಬಾಟ್ಲಿ 3ರ ರೂ. 7—0—0.

## (2) ಅಶೋಕಾರಿಷ್ಟ ಮತ್ತು ಮಾತ್ರೆ

ಇದು ಸ್ತ್ರೀಯರಿಗೆ ಉತ್ತಮವಾದ ಟಾನಿಕ್. ಋತುಶೂಲೆ, ಕ್ರಮತಪ್ಪಿ ಮುಟ್ಟಾಗುವಿಕೆ, ಅತಿರೇಕ ಅಥವಾ ಅತ್ಯಲ್ಪ ಸ್ರಾವ, ಮುಟ್ಟು ಸಂಪೂರ್ಣವಾಗಿ ನಿಲ್ಲುವದು, ಬಿಳಿದು ಹೋಗುವಿಕೆ, ಬಂಜೆತನ, ನಡುವಿನ ನೋವು, ರಕ್ತಹೀನತೆ, ಒಳಜ್ವರ, ಮಲಬದ್ಧತೆ, ಕೈಕಾಲು ಬಚ್ಚಿಬರುವುದು, ಮತ್ತು ಸ್ತ್ರೀಯರಿಗೆ ಸಂಬಂಧಪಟ್ಟ ಇತರ ಎಲ್ಲಾ ದೋಷಗಳನ್ನು ಹೋಗಲಾಡಿಸಿ, ಸೌಂದರ್ಯವನ್ನೂ ತೇಜಸ್ಸನ್ನೂ ಉಂಟುಮಾಡುತ್ತದೆ.

ಬಾಟ್ಲಿ 1ರ ರೂ. 2—4—0.

## (3) ಮೇಹಕುಠಾರ

ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರ ದ್ವಾರದಿಂದ ಕೀವು ಬರುವದು, ಮೂತ್ರದಲ್ಲಿ ಧಾತು ಹೋಗುವದು, ಸೊಂಟನೋವು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವದು, ಮೂತ್ರವು ತೊಟ್ಟುತೊಟ್ಟಾಗಿ ಬೀಳುವಿಕೆ, ಆಡಿಗಡಿಗೂ ಮೂತ್ರವಿಸರ್ಜನೆ ಮುಂತಾದ್ದನ್ನು ನಿವರ್ತಿಸಿ 20 ನಮೂನೆಯ ಮೇಹರೋಗಗಳನ್ನು ಗುಣಪಡಿಸುವುದು.

ಕ್ರಯ ಡಬ್ಬಿ 1ರ ರೂಪಾಯಿ 2—8—0.

## (4) ಮಲೇರಿಯಾ ನಿವಾರಿಣಿ

ಚಳಿಜ್ವರ, ದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಗೆಡ್ಡೆ ಬಂದ ಜ್ವರ, ಪುರಾಣ ಜ್ವರ, ವಾಯಿದೆ ಜ್ವರ, ಇನ್‌ಫ್ಲುಯೆಂಜಾ, ನಿಮೊನಿಯಾ ಜ್ವರ, ಕಫಜ್ವರ, ಜ್ವರಗೆಡ್ಡೆ, ಮಲಬದ್ಧತೆ ಇವುಗಳ ಸ್ನೆಲ್ಲಾ ಹೋಗಲಾಡಿಸುವದು. ಮಲೇರಿಯಾ ಜ್ವರ ಇರತಕ್ಕ ಪ್ರಾಂತ್ಯಗಳಲ್ಲಿ ವಾಸಿಸುವವರಿಗೆ ಇದಕ್ಕಿಂತಲೂ ಉತ್ತಮವಾದ ಔಷಧಿ ಬೇರೊಂದಿಲ್ಲ.

ಬಾಟ್ಲಿ 1ರ ರೂಪಾಯಿ 1—8—0. ಸಣ್ಣ ಬಾಟ್ಲಿ 1ರ ಆಣೆ 13.

## (5) ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅತ್ಯಾವಶ್ಯಕವಾದ ಶಕ್ತಿವರ್ಧಕ ರಸಾಯನ. ಇದು ಪ್ರಸವಿಸಿದ ನಂತರ ಉಂಟಾದ ಆಯಾಸವನ್ನು ಹೋಗಲಾಡಿಸುವದು. ಗರ್ಭಕೋಶದ ವೇದನೆಗಳನ್ನು ಸಮಾಧಾನಪಡಿಸಿ, ನಂಜಿನ ಜ್ವರಕ್ಕೆ ಅವಕಾಶ ಕೊಡದಂತೆ ಮಾಡುವುದು. ಉದರ ದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವದು. ಜೀರ್ಣವನ್ನೂ ಹಸಿವನ್ನೂ ನಿದ್ರೆಯನ್ನೂ ಕ್ರಮದಂತೆ ನಡೆಸುವದು. ಇದರ ಸೇವನೆಯಿಂದ ರಕ್ತಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವರಲ್ಲದೆ ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವದು. ಇದನ್ನು ಎರಡು ತಿಂಗಳುಗಳ ತನಕ ಸೇವಿಸಿದಲ್ಲಿ ಬೇರೆ ಔಷಧಿಗಳ ಆಗತ್ಯವಿರುವುದಿಲ್ಲ.

ಬಾಟ್ಲಿ 1ರ ರೂಪಾಯಿ 1—8—0.
2 ಬಾಟ್ಲಿಗಳಿಗೆ ರೂಪಾಯಿ 3.

**ಬಾಣಂತಿಯರಿಗೆ, ಮಗುವಿಗೆ ಬೇಕಾದ ತೈಲಗಳು ದೊರೆಯುತ್ತವೆ.**

ಕಾಯಿಲೆ ಸಂಗತಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು. ಮಹಾ ಮದನಕಾಮೇಶ್ವರಿ ಲೇಹ ಡಬ್ಬಿಗೆ ರೂ. 3—0—0.

**ಇದಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.**

**ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ, ನಂಬ್ರ 12, ಮಂಗಳೂರು, ದ. ಕ.**

ನಮ್ಮ ಔಷಧಿ ಸಿಕ್ಕುವ ಸ್ಥಳ:—

1. **ಮೆಸರ್ಸ್. ಕಾಮತ್ ಎಂಡ್ ಕೋ.**, ತಾರಾಹೌಸ್, ಗಿರ್‌ಗಾಂವ್ ಬೇಕ್‌ರೋಡ್, ಮುಂಬಾಯಿ, ನಂ. 4.
2. **ಡಾಕ್ಟರ್ ಬಿ. ಎಚ್. ಪದ್ಮನಾಭ ಹೈ,** ಚಿಕ್ಕಮಗಳೂರು.
3. **ಡಾ। ಶ್ರೀನಿವಾಸ ಹೈ,** ಪುತ್ತೂರು, ದ. ಕ.
4. **ಶ್ರೀರಾಮಾ ಸ್ವೀಶನರಿ ಹೌಸ್,** ಶ್ರೀರಾಮಪೇಟೆ, ಕಾಸರಗೋಡು.
5. **ಮುಲ್ಲರಪೇಟನ ಬ್ರದರ್ಸ,** 91 ಚಿಕ್ಕಪೇಟೆ, ಬೆಂಗಳೂರು ಸಿಟಿ.
6. **ವೆರ್ಯಾಟಿ ಹೋಲ್,** ನುಡಿಕೇರಿ.

---

## NEDUNGADI BANK, LIMITED, CALICUT.

# ನೆಡುಙ್ಙಾಡಿ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು:—ಕಲ್ಲಿಕೋಟೆ.

1899ರಲ್ಲಿ ಸ್ಥಾಪಿತವಾದದ್ದು. 1913ರಲ್ಲಿ ರಿಜಿಸ್ಟ್ರಿಯಾದದ್ದು.

| | | | |
|---|---|---|---|
| ಅಧಿಕೃತವಾದ ಮೂಲಧನ | ರೂ. 42,17,980 | ಕಂತು ವೇರೆಗೆ ತೆತ್ತ ಪಾಲುಗಾರರು ಇನ್ನೂ ತೆರಲು ಬಾಕಿ ಇರುವ ಮೊತ್ತ ಮಿಕ್ಕಿದೆ | ರೂ. 9,00,000 |
| ಆಪ್ಪಿಸಿದ ಮತ್ತೂ ಚೆಂದಾ ಕೊಟ್ಟ ಮೂಲಧನ | ರೂ. 17,17,980 | | |
| ತೆತ್ತು ಬಂದ ಮೂಲಧನ ಮಿಕ್ಕಿದೆ | ರೂ. 7,50,000 | ಕ್ಷೇಮನಿಧಿ ಮಿಕ್ಕಿದೆ | ರೂ. 5,00,000 |

ಶಾಖೆಗಳು:—ಅಲಪ್ಪಿ, ಬಡಗರ, ಕಲ್ಲಿಕೋಟೆ, ಕೊಚ್ಚಿನ್, ಕೊಯಮುತ್ತೂರು, ಎರ್ನಾಕುಳಂ, ಮದ್ರಾಸ್, ಮಂಗಳೂರು, ಮಂಜೇರಿ, ಒಟ್ಟಪಾಲಂ, ಪಾಲ್ಘಾಟ್, ಟೆಲಿಚೆರಿ, ತಿರೂರು, ತ್ರಿಚೂರು ಮತ್ತೂ ತ್ರಿವೆಂಡ್ರಂ.

ಡೈರೆಕ್ಟರ್ ಸಭೆಯ ಚೆಯರ್‌ಮ್ಯಾನ್:

**ರಾವ್ ಬಹದೂರ್ ಡಾಕ್ಟರ್ ಪಿ. ಕೆ. ವಾರಿಯರ್,** ಮದ್ರಾಸಿನ ಸರ್ಜನ್ ಜನರಲರ ಮಾಜೀ ಪರ್ಸನಲ್ ಅಸಿಸ್ಟಾಂಟ್.

ಎಲ್ಲ ಬಗೆಯ ಬೇಂಕಿಂಗ್ ವಹಿವಾಟವನ್ನೂ ನಡೆಸಲಾಗುವುದು.

ಚಾಲ್ತಿ ಲೆಕ್ಕದ ಶಿಲುಕಿನ ಮೇಲೆ ಬಡ್ಡಿ ಕೊಡಲಾಗುತ್ತದೆ.

**ಸೇವಿಂಗ್ಸ್ ಬ್ಯಾಂಕ್ ತೇವಣಾತಿಯ ಮೇಲೆ ಸೇಕಡಾ ವರ್ಷಕ್ಕೆ 4½.**

ನಿರಖು ತೇವಣಾತಿಯ ಮೇಲಿನ ಬಡ್ಡಿಯ ದರವನ್ನು ಬರೆದು ತಿಳಿದುಕೊಳ್ಳಿ. ಬಡ್ಡಿ ಪಾವತಿ 6 ತಿಂಗಳಿಗೊಮ್ಮೆ.

---

## BEHAR CHEMICAL WORKS,

Shri Gauranga Bhavan, BHAGALPUR.

**ಬಿ. ಸಿ. ರಸಾಯನಿಕ ವೈದ್ಯಶಾಲೆಯ ಜೀವನಪ್ರಾಸ ಲೇಹ.**

ಮಾನವಶರೀರದ ಮೇಲೆ ಅತ್ಯುಪಯೋಗಕರವಾದ ಶಕ್ತಿ ವರ್ಧಕ ಹಾಗೂ ಮೆದುಳನ್ನು ಬೆಳೆಸುವ ಪೌಷ್ಟಿಕ ಸಾಧನ.

ಸೀತ, ನೆಗಡಿ, ಕೆಮ್ಮು, ಗೂರಲು, ಸ್ವರಭಂಗ, ಎದೆಯ ನೋವು, ಕೈಯೆವಿಕಾರಕ ಮೇಲೆ ಈ ದಿವ್ಯೌಷಧಿಯ ವಿಷಯವಾಗಿ ಜೀವನ ಪುಷಿಗಳು ಇದರ ಗುಣವನ್ನು ಬಹುತೇಕವಾಗಿ ಮನಗಂಡಿರುವುದರಿಂದಲೂ, ನಮ್ಮಲ್ಲಿಯ ಕವಿರಾಜರುಗಳು ಇದನ್ನು ಶಾಸ್ತ್ರೋಕ್ತವಾಗಿ ತಯಾರಿಸುವುದರಿಂದಲೂ, ಇದರಲ್ಲಿ ನಶಿಸಿದ ಸ್ನಾಯುಗಳನ್ನು ಬಲಪಡಿಸುವ ಅಸದೃಶವಾದ ಬಲವರ್ಧಕ ಶಕ್ತಿ ಇರುವುದರಿಂದಲೂ, ಇಂಗ್ಲೀಷು ಮತ್ತು ಆಯುರ್ವೇದೀಯ ಡಾಕ್ಟರುಗಳು ಇದನ್ನು ಅನೇಕ ತರಹ ವ್ಯಾಧಿಯ ಮೇಲೆ ಉಪಯೋಗಿಸಿ ಉತ್ತಮ ರೀತಿಯ ಗುಣ ಕಂಡ ದಾಖಲೆಗಳನ್ನು ಪಡೆದಿರುವುದರಿಂದಲೂ, ಮಕ್ಕಳ ಅನೇಕ ತರಹ ರೋಗಗಳ ಮೇಲೆ ಈ ಔಷಧಿಯು ಸಂಜೀವನಪ್ರದವಾಗಿರುವುದರಿಂದಲೂ, ಹೆಂಗಸರೂ ಗಂಡಸರೂ ಶಕ್ತಿವರ್ಧಕವಾದ ಈ ಔಷಧಿಯನ್ನು ಒಮ್ಮೆ ಪರೀಕ್ಷಿಸಲೇ ಬೇಕು. ಒಂದು ತಿಂಗಳ ಉಪಯೋಗದ ಶೀಸೆ ಒಂದಕ್ಕೆ ರೂ. ೧—೮—೦.

ಏಜಂಟರು:—**ಷಾ ಕಂಪೆನಿ,**
ಗವರ್ನಮೆಂಟ್ ಕೊಲೆಜ್ ಎದುರು, **ಮಂಗಳೂರು.**

---

ಪಂಡಿತ ಜವಾಹೀರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣಪದಕ ದೊರೆತ

**ಒಂದೇ ಸವನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ**

ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ-ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲು ದೊರೆತಿರುವ, ಪರದೇಶದಲ್ಲಿ ಖರ್ಚಾಗುವ,

## ಶಕ್ತಿಯ ಮೇಲೆ ಮೊದಲನೆ ತರಗತಿಯ ಟಾನಿಕ

# ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ [ಗರಮಿ] ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಜೀರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈ, ಕಾಲು, ಕಣ್ಣೊಳಗೆ ಉರಿಪು ಬೇಳೋಣ, ಶೌಚಕ್ಕೆ ಸಾಫು ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ಸಪ್ಪವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಚನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವೃಥಾವೀರ್ಯದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯವ್ವನವಂತರಾಗಿ, ಶರೀರ ಒಲವಾಗಿ, ಮಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣದ ಗರ್ಭಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಶರೀರ ಗುಣಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆ ಮಾಡಿದ ನಂತರ ತಿಳಿದೀತು.

**ಪ್ರಮಾಣ:**—ಸಸಿಕನಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು. ೧ ಬಾ. ಬೆಲೆ ೧। ರೂ. ೩ ಬಾ. ಬೆಲೆ ೩॥ ರೂ. ೧ ಡಜನ್ ಬಾ. ಬೆಲೆ ೧೦ ರೂ.

ಮ್ಯಾನೆಜರ:—ದ್ರಾಕ್ಷಾಮೃತ ಡೆಪೊ, ಪೋಪ್ಪು ನಿಪ್ಪಾಣಿ, ಜಿಲ್ಲಾ (ಬೆಳಗಾಂವ.)

**ಮಂಗಳೂರು ಮಿಜಾರ[illegible] ಬ್ರದರ್ಸ, ಶೆಣೈ ಬ್ರದರ್ಸ್,**
**ವ ಗಜಾನನ ಮೆ[illegible] ಕಾರ ಸ್ಟ್ರೀಟ್,**
**ಉಡ್ಪಿ— ಪೈ [illegible] ಶೇಷಗಿರಿ ಪೈ,**
**ತೋಕಪೇಟೆ.**
**[illegible] ಸ್ಟೋರ್ಸ್‌ದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವದು.**

ಕಾರ್ಕಳ—ವ್ಹಿ. ವ್ಹಿ. ಶೆಣೈ.
ಕುಂದಾಪುರ-ಕೆ. ಆರ್. ಭಡಜೀ.
ಕಾಸರಗೋಡು—ಕೆ. ರಾಮು ನಾಯ್ಕ ಮತ್ತು ಭಕ್ತ ಬ್ರದರ್ಸ್.

---

## ತೊನ್ನಿಗೆ ಅದ್ಭುತ ಔಷಧಿ

(ರಿಜಿಸ್ಟರ್ಡ್)

**ಗುಣ ದೊರಕದಿದ್ದರೆ ರೂ. 1000 ಬಹುಮಾನ!**

18 ಪ್ರಕಾರಗಳ ಎಲ್ಲಾ **ಕುಷ್ಟ ರೋಗಗಳೂ, ಬಿಳಿ ತೊನ್ನು, ಚರ್ಮವ್ಯಾಧಿಗಳೂ** ಮತ್ತು **ನೋಹ ಸಂಬಂಧ ರೋಗಗಳೂ,** ಬುಡ ಸಮೇತ ಕಿತ್ತುಹೋಗಿ, ಖಂಡಿತವಾಗಿಯೂ ಗುಣಹೊಂದುವುವು. 25 ವರ್ಷಗಳ ಜಗತ್ಪ್ರಸಿದ್ಧಿಯಿದೆ. ಇಂಜೆಕ್ಷನ್ ಮತ್ತು ಇತರ ಯಾವ ರೀತಿಯಲ್ಲಿಯೂ ಗುಣಹೊಂದದ ರೋಗಿಗಳೂ ಇದರಿಂದ ಗುಣಪಡೆದಿರುವರು. ಗುಣಕ್ಕಾಗಿ ಭರವಸವಿದೆ. ಕುಷ್ಟ ರೋಗ ಮತ್ತು ಚರ್ಮವ್ಯಾಧಿಗಳಿಗಾಗಿ ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದೆ.

ಸೇಲಮಿನ ಡಾ। ವಿ. ಎನ್. ಸಾಶನ್‌ರವರು ಬರೆಯುತ್ತಾರೆ:—
ನಾನು ನಿಮ್ಮ **ಅತ್ಯಾಶ್ಚರ್ಯ ಕುಷ್ಟರೋಗ ನಿರ್ಮೂಲಿನಿ**ಯನ್ನು ಇಬ್ಬರು ಕುಷ್ಟರೋಗಿಗಳಿಗೆ ಉಪಯೋಗಿಸಿದ್ದು, ಪರಿಣಾಮವು ಉತ್ಕೃಷ್ಟವಾಗಿತ್ತು. **ಲಕ್ಷ್ಮಿ ಮತ್ತು ಕಂಪೆನಿ**ಯವರ ಸಿದ್ಧೌಷಧದಿಂದ ಸಂಪೂರ್ಣ ಗುಣ ಹೊಂದಿದ ನಂತರ, ರೋಗಿಗಳ ರಕ್ತವನ್ನು ಪರೀಕ್ಷಿಸಿದಲ್ಲಿ, ಅದು ಕುಷ್ಟ ರೋಗದ ಯಾವ ಕಿಳಿಕೆಗಳಿಂದ ವಿರಹಿತವಾಗಿತ್ತು. ಈ ಔಷಧವು ಅತ್ಯುತ್ತಮವೆಂದೂ, ಟೀಕೆಯೇನೂ ಆಗತ್ಯವಿಲ್ಲವೆಂದೂ ನಾನು ಕಂಡಿರುತ್ತೇನೆ.

ಯಾವತ್ತೂ ಮಾಹಿತಿಗಾಗಿ ಮತ್ತು ಕೆಟಲಾಗಿಗೆ ಬರೆಯುವರೆ ವಿಳಾಸ:—

**ಮೆಸರ್ಸ್ ಲಕ್ಷ್ಮಿ ಅಂಡ್ ಕೋ. (ರಿಜಿಸ್ಟರ್ಡ್),**
ತೊನ್ನು ಚಿಕಿತ್ಸಾ ಪ್ರವೀಣರು,
ವಾಲ್ಪೇರ್, ಆರ್. ಎಸ್. ಪೋಸ್ಟ್.

## ರಾಷ್ಟ್ರಸಭೆಗಳ ಅಧ್ಯಕ್ಷರು.

| ವರ್ಷ. | ಸ್ಥಳ. | ಹೆಸರು. |
|---|---|---|
| 1885 | ಮುಂಬಾಯಿ | ಡಬ್ಲ್ಯು. ಸಿ. ಬೋನರ್ಜಿ. |
| 1886 | ಕಲ್ಕತ್ತಾ | ದಾಧಾಭಾಯಿ ನವರೋಜಿ. |
| 1887 | ಮದ್ರಾಸು | ಬದ್ರುದ್ದಿನ್ ತಯಾಬ್ಜಿ. |
| 1888 | ಅಲಹಾಬಾದ್ | ಜೋರ್ಜ್ ಯೂಲ್. |
| 1889 | ಮುಂಬಾಯಿ | ಸರ್ ವಿಲ್ಲಿಯಂ ವೆಡ್ಡರ್‌ಬರ್ನ್. |
| 1890 | ಕಲ್ಕತ್ತಾ | ಪಿ. ಎಮ್. ಮೇಥಾ. |
| 1891 | ನಾಗ್ಪೂರ್ | ಪಿ. ಆನಂದ ಚಾರ್ಲು. |
| 1892 | ಅಲಹಾಬಾದ್ | ಡಬ್ಲ್ಯು. ಸಿ. ಬೋನರ್ಜಿ. |
| 1893 | ಲಾಹೋರ್ | ದಾದಾಭಾಯಿ ನವರೋಜಿ. |
| 1894 | ಮದ್ರಾಸು | ಆಲ್ಫ್ರೆಡ್ ವೆಬ್. |
| 1895 | ಪೂನಾ | ಸುರೇಂದ್ರನಾಥ ಬ್ಯಾನರ್ಜಿ. |
| 1896 | ಕಲ್ಕತ್ತಾ | ರಹಿಮತುಲ್ಲಾ ಸಯಾನಿ. |
| 1897 | ಅಮರಾವತಿ | ಸಿ. ಶಂಕರನ್ ನಾಯರ್. |
| 1898 | ಮದ್ರಾಸು | ಎ. ಎಮ್. ಬೋಸ್. |
| 1899 | ಲಕ್ನೊ | ಆರ್. ಸಿ. ದತ್. |
| 1900 | ಲಾಹೋರ್ | ಎನ್. ಜಿ. ಚಂದಾವರ್‌ಕಾರ್. |
| 1901 | ಕಲ್ಕತ್ತಾ | ಡಿ. ಇ. ವಾಛಾ. |
| 1902 | ಅಹಮದಾಬಾದ್ | ಸುರೇಂದ್ರನಾಥ ಬ್ಯಾನರ್ಜಿ. |
| 1903 | ಮದ್ರಾಸು | ಲಾಲ್ ಮೋಹನ್ ಘೋಷ್. |
| 1904 | ಮುಂಬಾಯಿ | ಸರ್ ಹೆನ್ರಿ ಕೊಟ್ಟನ್. |
| 1905 | ಬನಾರಸ್ | ಜಿ. ಕೆ. ಗೋಖಲೆ. |
| 1906 | ಕಲ್ಕತ್ತಾ | ದಾದಾಭಾಯಿ ನವರೋಜಿ. |
| 1907 | ಸೂರತ್ | ರಾಷ್‌ಬಿಹಾರಿ ಘೋಷ್. |
| 1908 | ಮದ್ರಾಸು | ರಾಷ್‌ಬಿಹಾರಿ ಘೋಷ್. |
| 1909 | ಲಾಹೋರ್ | ಪಂಡಿತ ಮದನಮೋಹನ ಮಾಲವೀಯ. |
| 1910 | ಅಲಹಾಬಾದ್ | ಸರ್ ವಿಲ್ಲಿಯಂ ವೆಡ್ಡರ್‌ಬರ್ನ್. |
| 1911 | ಕಲ್ಕತ್ತಾ | ಪಂಡಿತ ಬಿಷನ್ ನಾರಾಯಣಧಾರ್. |
| 1912 | ಬಂಕಿಪೂರ್ | ರಾವ್ ಬಹದೂರ್ ಆರ್. ಎನ್. ಮುಧೋಳ್ಕರ್. |
| 1913 | ಕರಾಚಿ | ನವಾಬ್ ಸಯದ್ ಮಹಮದ್. |
| 1914 | ಮದ್ರಾಸು | ಬಾಬು ಭೂಪೇಂದ್ರನಾಥ ಬಾಸು. |
| 1915 | ಮುಂಬಾಯಿ | ಸರ್ ಸತ್ಯೇಂದ್ರಪ್ರಸಾದ ಸಿನ್ಹಾ. |
| 1916 | ಲಕ್ನೊ | ಅಂಬಿಕಾಚರಣ ಮಜುಂದಾರ್. |
| 1917 | ಕಲ್ಕತ್ತಾ | ಶ್ರೀಮತಿ ಆನ್ನಿ ಬಿಸೆಂಟ್. |
| 1918 | ಢಿಲ್ಲಿ | ಪಂಡಿತ ಮದನಮೋಹನ ಮಾಲವೀಯ. |
| 1918 (ಜಾಸ್ತಾ) | ಮುಂಬಾಯಿ | ಸಯದ್ ಹಸನ್ ಇಮಾಮ್. |
| 1919 | ಅಮೃತಸರ | ಪಂಡಿತ ಮೋತಿಲಾಲ್ ನೆಹರು. |
| 1920 | ನಾಗ್ಪೂರ | ಸಿ. ವಿಜಯರಾಘವಾಚಾರಿಯರ್. |
| 1920 (ಜಾದಾ) | ಕಲ್ಕತ್ತಾ | ಲಾಲಾ ಲಜಪತ್ ರಾಯ್. |
| 1921 | ಅಹಮದಾಬಾದ್ | ಹಕೀಮ್ ಅಜ್ಮಲ್‌ಖಾನ್. |
| 1922 | ಗಯಾ | ದೇಶಬಂಧು ಸಿ. ಆರ್. ದಾಸ್. |
| 1923 | ಕೋಕನಾಡಾ | ಮೌಲಾನಾ ಮಹಮದ್ ಅಲಿ. |
| 1923 (ಜಾದಾ) | ಢಿಲ್ಲಿ | ಅಬ್ದುಲ್‌ಕಲಂ ಅಜದ್. |
| 1924 | ಬೆಳಗಾಂ | ಮಹಾತ್ಮಾ ಎಂ. ಕೆ. ಗಾಂಧಿ. |
| 1925 | ಕಾನ್ಪೂರ್ | ಶ್ರೀ. ಸರೋಜಿನಿ ನಾಯಿಡು. |
| 1926 | ಗೌಹಾತಿ | ಎಸ್. ಶ್ರೀನಿವಾಸ ಅಯ್ಯಂಗಾರ್. |
| 1927 | ಮದ್ರಾಸು | ಡಾ. ಎಮ್. ಏ. ಅನ್ಸಾರಿ. |
| 1928 | ಕಲ್ಕತ್ತಾ | ಪಂಡಿತ ಮೋತಿಲಾಲ ನೆಹರು. |
| 1929 | ಲಾಹೋರ್ | ಪಂಡಿತ ಜವಾಹರಲಾಲ ನೆಹರು. |
| 1931 | ಕರಾಚಿ | ಸರದಾರ ವಲ್ಲಭಭಾಯಿ ಪಟೇಲ. |
| 1932 | ಢಿಲ್ಲಿ | ಶೇಟ್ ರಾಂಚೋದ್ ಲಾಲ. |
| 1933 | ಕಲ್ಕತ್ತಾ | ಶ್ರೀ. ನೆಲ್ಲಿ ಸೇನಗುಪ್ತ. |
| 1934 | ಮುಂಬಾಯಿ | ಬಾಬು ರಾಜೇಂದ್ರ ಪ್ರಸಾದ. |

ಕೈ. ಗೋಪಾಲಕೃಷ್ಣ ಗೋಖಲೆ.

ಕೈ. ಲಾಲಾ ಲಜಪತ ರೈ.

ಕೈ. ಸಿ. ಆರ್. ದಾಸ್.

ಕೈ. ಮೌಲಾನಾ ಮಹಮ್ಮದ್ ಆಲಿ.

ಕೈ. ಮೋತಿಲಾಲ್ ನೆಹರು.

ಪಂಡಿತ ಮದನಮೋಹನ ಮಾಲವೀಯ.

ಶ್ರೀಮತಿ ಸರೋಜಿನಿ ನಾಯಿಡು.

ಪಂಡಿತ ಜವಾಹರಲಾಲ ನೆಹರು.

ಸರದಾರ ವಲ್ಲಭಭಾಯಿ ಪಟೇಲ.

# ಈಸ್ಟ್ ಏಂಡ್ ವೆಸ್ಟ್
## ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.
**1913.**

**ಕಂದ ಪದ್ಯ.**

ಗಳಿಸಿದ ಧನವನು ಮಾನವ ।
ರುಳಿಸುವಂತೆ ಭದ್ರದ ವಸ್ತು ದೊರಕಿತು ನಿಮಗೆ ।
ತಲೆಯಾಂತರ ನಿಮ್ಮವರ ।
ಪಲವಿಧ ರಕ್ಷಿಪುದುತ್ತಮದೀ ಕಂಪೆನಿಯೂ ॥ ೧ ॥
ತೆರುವ ಹಣವು ಪ್ರೀಮಿಯಮಿನ ।
ಎರಡೂವರೆಯಂತೊಂದು ವರುಷಕೆ ಶೇಕಡಕೆ ॥
ದರ ತಗ್ಗಿಸಿದರು ಮರೆಯದೆ ।
ಪರಮಾಪ್ತರು ವಿಮಾದಾರರಾಗಿರಿ ಮುದದಿ ॥ ೨ ॥
ಪೂರ ಜೀವಮಾನದ ವಿಮೆ ।
ಕಾರಣದುಂಬಳಿ ವಿಮೆಗಳ ಲಾಭವು ಪದಿನೈದ ॥
ಸೇರಿಸಿ ಧನವನು ಕೊಡುವೆವು ।
ಪೂರಿತ ಸಂಗತಿ ತಿಳಿಯಿರಿ ವಿಳಾಸಕೆ ಬರೆದು ॥ ೩ ॥
ಕಡು ಸಾಹಸದಿಂ ಸಿರಿಯುತ ।
ಪಡುಬಿದರೆ ಸಹೋದರರೆನ್ನುವ ನವತರುಣರು ॥
ಬಿಡದೀ ಕಂಪೆನಿಯೊಳು ಬಲು ।
ದುಡಿಯುತ ಪ್ರಾಮುಖ್ಯದ ಕೆಲಸವನು ನಹಿಸಿ ನರುಳ ॥

ಕಂಪೆನಿಯ ವಿಳಾಸ:—

ಪಡುಬಿದ್ರಿ ಬ್ರದರ್ಸ್,
ಪ್ರಾಮುಖ್ಯ ಏಜಂಟರು, ಕರ್ನಾಟಕ ಮತ್ತು ಮಹಾರಾಷ್ಟ್ರ
40, ನಾರಾಯಣಲಾಲ್ ಬನ್ಸಿಲಾಲ್ ಭವನ,
ಬೆಲಾಸಿಸ್ ರೋಡ್,
ಮುಂಬಯಿ ನಂಬ್ರ 8.



# ಉನ್ಮಾದ ರೋಗಕ್ಕೆ
## ಅತ್ಯುತ್ತಮ ಔಷಧ.
**(ಹುಚ್ಚು ರೋಗಕ್ಕೆ ಕೈಕಂಡ ಮದ್ದು).**

ರೋಗವು ಎಷ್ಟೇ ಘೋರವಾಗಿರಲಿ, ಎಷ್ಟೇ ಹಳೆಯ ದಾಗಿರಲಿ, ನಮ್ಮ ಔಷಧದ ಉಪಯೋಗದಿಂದ **ಖಂಡಿತವಾಗಿ ಗುಣವಾ**ಗುವುದು. ಒಂದೇ ವಾರದ ಉಪಯೋಗದಿಂದ ರೋಗವು ಹಿಮ್ಮೆಟ್ಟುವುದು. ಅಪಸ್ಮಾರ, ಹಿಸ್ಟೀರಿಯಗಳೂ ಶಾಂತಿ ಹೊಂದುವುವು.

ವಾರದ ಔಷಧಕ್ಕೆ ಕ್ರಯ ರೂ. 3—8—0.

ಮಾಳ ನಾರಾಯಣ ಭಟ್ಟ, ವೈದ್ಯ,
'ಸಿದ್ಧೌಷಧ ಭವನ', ಪಡ್ನೂರು ಗ್ರಾಮ,
**ಪೋಸ್ಟು ವಿಟ್ಲ, ದ. ಕನ್ನಡ.**



ಪಿಟೀಲು, ವೀಣಾ, ಕೊಳಲು, ಹಾರ್ಮೋನಿಯಮ್ ಮತ್ತು ಸಶಾಸ್ತ್ರ ಗಾಯನವನ್ನು ಶಿಕ್ಷಕರ ಸಹಾಯವಿಲ್ಲದೆ ಕಲಿಯುವ

# ಹಾರ್ಮೋನಿಯಂ ಶಿಕ್ಷಕ

ಇದರಲ್ಲಿ ಯಾವತ್ತೂ ಕನ್ನಡ ನಾಟಕದೊಳಗಿನ ಪದಗಳೂ ಮತ್ತು ಮರಾಠಿ ನಾಟಕದೊಳಗಿನ ಪದಗಳು, ಹಿಂದೂಸ್ತಾನೀ ಚೀಜುಗಳ ಗ್ರಾಮೋಫೋನ್ ಪಟ್ಟಿ ಕೊಟ್ಟ ಪದಗಳ ಸಶಾಸ್ತ್ರ ಸುಲಭ ನೊಟೇಶನ್ ಕೊಟ್ಟಿರುತ್ತದೆ.
ಕನ್ನಡ ಲಿಪಿ ಭಾಗ ೩, ಪ್ರತಿಯೊಂದು ಭಾಗಕ್ಕೆ ಬೆಲೆ ೧೫ ಆಣೆ.
ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಮಾಡಬೇಕು.

B. V. PHATAK,
Fort. MIRAJ. (S.M.C.



## JAYA LAXMI BANK, LTD.,
MANGALORE.

## ಜಯಲಕ್ಷ್ಮೀ ಬೇಂಕ್, ಲಿಮಿಟೆಡ್.,
## ಮಂಗಳೂರು.

**ಶಾಖೆಗಳು:— ಪುತ್ತೂರು, ಕಾಸರಗೋಡು.**

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲಾಗುವುವು. ಮುಖ್ಯವಾಗಿ ಭಂಗಾರ, ಸರಕು ಈಡಿನ ವ ಪ್ರೋ.ನೋಟಿನ ಮೇಲೆ, ಸಾಲವನ್ನು ಕೊಡುವುದು.

**ಕಾಯಂ ಠೇವಣಾತಿಗಳು.**

ಮಾಸಿಕ, ಸೇವಿಂಗ್ಸು ಬೇಂಕ್, ಮತ್ತು ಚಾಲ್ತಿ ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.
ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. GANESH RAO,
ಕಾರ್ಯದರ್ಶಿ.



# ಶುಭ್ರ ಪ್ರಕಾಶ-ದೀರ್ಘ ಬಾಳಿಕೆ

ಯು. ಎಸ್. ಎ. ಯಲ್ಲಿ ತಯಾರಾದ್ದು.



# REPUTATION.

A Bank's reputation is not gained from the magnificence of its building nor from the elegance of its glittering fixtures.

True reputation is gained only through public knowledge of the high character and ability of its management and often high ideals of service to the community. For about a decade the Central Bank has enjoyed a reputation for efficient management, sound banking principles and careful yet liberal policies.

To maintain this reputation every effort is made to give to all transactions large or small a sympathetic consideration and extend the most liberal courtesies consistent with sound banking practice.

The entire facilities of the Central Bank are yours to command.

## THE CENTRAL BANK LIMITED,
(INCORPORATED IN TRAVANCORE)

**Bunder Road,** **MANGALORE.**

## ಕೋಹಿನೂರಿನ ಸುಪ್ರಸಿದ್ಧ ತಯಾರಿಕೆಗಳು.

೧. ಕೋಲನ್ ವಾಟರ್ (ರಿ. ನಂ. ೧೪೭೨) ಜ್ವರ, ನೆಗಡಿ, ಮತ್ತು ಎಲ್ಲಾ ವಿಧವಾದ ಶಿರಸ್ಸಿನ ಬಾಧೆಗಳಿಗೆ ದಿವ್ಯಾಮೃತ.

೨. ಮುಸ್ಕ್ ಲವೆಂಡರ್—ಕರವಸ್ತ್ರದಲ್ಲಿ ಉಪಯೋಗಮಾಡತಕ್ಕ ಸುವಾಸನೆಯಾದ ಸೆಂಟು.

೩. ಅನಂಸ್ ಸ್ನೋ—ಸೌಂದರ್ಯವನ್ನು ಹೆಚ್ಚಿಸಿ ಚರ್ಮವನ್ನು ಮೃದುವಾಗಿಡುತ್ತೆ.

೪. ಬ್ರಿಲಿಯಂಟಾಯಿನ್—ಕೂದಲಿನ ಸೌಂದರ್ಯಕ್ಕೋಸ್ಕರ ಆರ್ಹವಾದ ಮತ್ತು ಸುವಾಸನೆಯುಳ್ಳ ಪರಿಮಳ.

೫. ಬ್ರಾಹ್ಮೀ ತೈಲ—ಮೆದುಳು, ಕೂದಲು, ಮತ್ತು ನೇತ್ರಗಳ ಸಂರಕ್ಷಣ ಹಾಗೂ ಹುಚ್ಚು ತನಕ್ಕೂ ಅದ್ಭುತ ಗುಣಕಾರಿ. ಕೂದಲು ಉದುರಿ ಹೋಗುವವರ ಸಂಬಂಧದಲ್ಲಿ ಅದನ್ನು ನಿಲ್ಲಿಸಿ, ಹೆಚ್ಚಾಗಿ ಬೆಳೆಸುತ್ತದೆ.

೬. ದ್ರಾಕ್ಷಾಸವ—ಮಂದಾಗ್ನಿ, ಅಜೀರ್ಣ, ಶ್ವಾಸ, ದಮ್ಮು, ಇತ್ಯಾದಿಗಳಿಗೆ ಅತ್ಯುತ್ತಮ. ದೇಹಬಾಧೆಯನ್ನು ಕ್ರಮವಾಗಿ ನಡೆಯಿಸಿ ಆರೋಗ್ಯವನ್ನೀಯುತ್ತದೆ. ರಕ್ತ ವರ್ಧಿಸುವ ಮತ್ತು ಶಕ್ತಿ ಕೊಡುವ ಉತ್ತಮ ಔಷಧ.

೭. ಆರಾಮೇತಿಹಾಲ್—ಎಲ್ಲಾ ವಿಧವಾದ ಜ್ವರವನ್ನು ಹೋಗಲಾಡಿಸಿ, ಜ್ವರದಗಡ್ಡೆ, ಹೊಟ್ಟೆ ನೋವು ಮುಂತಾದುವುಗಳನ್ನು ಗುಣಪಡಿಸುವ, ಸರ್ವೋತ್ತಮ ಔಷಧ.

೮. ವೆಜಿಟೇಬಲ್ ಪೈನ್-ಹಂಟರ್—ವಾಂತಿ, ವಿರೇಚನ, ಅಜೀರ್ಣ, ಕಾಲೆರಾ, ಮುಂತಾದ ರೋಗಗಳಿಗೋಸ್ಕರ ಕೂಡಿಯತಕ್ಕ ಔಷಧ.

೯. ರಕ್ತಾಂಜನ ಪೇನ್ ಬಾಮ್—ನೆಗಡಿ, ಶಿರಸ್ಸಿನ ಬಾಧೆಗಳು, ಮುಂತಾದ ಶಾರೀರಕ ಬಾಧೆಗಳ ಮೇಲೆ

೧೦. ಕ್ರೀಸೋರಿಂಗಾ—ಕಪ್ಪು ಅಥವಾ ಕೆಂಪು ಹುಳಕಡ್ಡಿಯನ್ನು ನಿರ್ಮೂಲವನಡಿಸುತ್ತೆ.

೧೧. ಫೊಟೊ ಡಿ ರೋಜ್ ಕೋಕೊನಟ್ ಹೇರ್ ಆಯಿಲ್—ಕೇಶಗಳಿಗೋಸ್ಕರ ಗುಲಾಬಿಯ ಮಧುರವಾದ ವಾಸನೆ ಕೊಡುವ ಶುದ್ಧವಾದ ಎಣ್ಣೆ.

ಕೋಹಿನೂರ್ ವರ್ಕ್ಸ್,
60 ಅಬ್ದುಲ್‌ರಹಿಮಾನ್ ಸ್ಟ್ರೀಟ್
**ಬೊಂಬಾಯಿ, 3.**

KOHINOOR WORKS,
60 Abdul Rehiman Street,
BOMBAY, No. 3.



***MODERN PRINTINGI AT MODERATE RATES!***

CONSULT

# The Saraswathi Printing Works, Limited,
CANTONMENT, MANGALORE.

# ಕಾಂಗ್ರೆಸದಲ್ಲಿ ಖಾದಿಯ ಪ್ರತಿಷ್ಠೆ.

(ಲೇಖಕ:—ರಾ. ವೆ. ವಡವಿ.)

ಕಾಂಗ್ರೆಸು ಒಂದು ರಾಜಕೀಯ ಸಂಸ್ಥೆಯಿದ್ದು ಅದರಲ್ಲಿ ಖಾದಿಗೆ ಇಷ್ಟೊಂದು ಮಹತ್ವವೇಕೆ? ಕಾಂಗ್ರೆಸದಲ್ಲಿ ಖಾದಿಯು ಹೇಗೆ ಬಂತು? ಅದರ ವಿಕಾಸವು ಹೇಗೆ ಆಯಿತೆಂಬುದರ ಇತಿಹಾಸವು ಬಹು ಮನೋರಂಜಕವೂ ಬೋಧಪ್ರದವೂ ಆಗಿದೆ. ಸ್ಥಳಾಭಾವದಿಂದ ಅದನ್ನು ಇಲ್ಲಿ ಸಂಪೂರ್ಣವಾಗಿ ಕೊಡುವದು ಸಾಧ್ಯವಿಲ್ಲದಿದ್ದರೂ ಅದರಲ್ಲಿಯ ಮುಖ್ಯ ಮುಖ್ಯ ವಿಷಯಗಳನ್ನು ಆದಷ್ಟು ಬಿಚ್ಚಿ ಹೇಳಲಾಗಿದೆ.

### ಸ್ವದೇಶೀ ವಿಕಾಸದ ಮೊದ್ಲನೆಯ ಮೆಟ್ಟಲು.

೧೮೮೫ರಿಂದ ಅಂದರೆ ಕಾಂಗ್ರೆಸದ ಪ್ರಾರಂಭದಿಂದ ೧೯೦೬ರ ವರೆಗೆ ಕಾಂಗ್ರೆಸು ತಮ್ಮ ಹಕ್ಕುಬಾಧ್ಯತೆಗಳನ್ನು ದೊರಕಿಸಿಕೊಳ್ಳುವುದಕ್ಕಾಗಿ ಕೇವಲ ಅರ್ಜಿ, ವಿನಂತಿ, ಶಿಷ್ಟಮಂಡಳ ಇವುಗಳಿಗಿಂತಲೂ ಹೆಚ್ಚಿನ ಯೋಜನೆಯನ್ನೇನೂ ಕೈಕೊಳ್ಳಲಿಲ್ಲ. ೧೯೦೬ರಲ್ಲಿ ವಂಗಭಂಗದ ಆಂದೋಲನವು ಒಳ್ಳೇ ಭರದಲ್ಲಿತ್ತು. ಆ ವರ್ಷ ಕಾಂಗ್ರೆಸ್ಸಾದರೂ ಅಲ್ಲಿಯೇ ಕೂಡಿತ್ತು. ಆ ಕಾಲಕ್ಕೆ ಲೋ. ಟಿಳಕರು ಸ್ವದೇಶೀ ಠರಾವನ್ನು ತಂದು ಅದನ್ನು ಸಮರ್ಥಿಸುವಾಗ ಈ ಪ್ರಕಾರ ಮಾತಾಡಿದರು—'ಕೇವಲ ಅರ್ಜಿ, ವಿನಂತಿ, ಶಿಷ್ಟಮಂಡಳಗಳಿಂದ ಯಾವ ಲಾಭವೂ ಆಗಲಾರದು. ನಮ್ಮ ಬೇಡಿಕೆಯ ಹಿಂದೆ ಒಂದು ಪ್ರಕಾರದ ಶಕ್ತಿ ಬೇಕಾಗುತ್ತದೆ. ಶಕ್ತಿ ಇಲ್ಲದೆ ಯಾರೂ ನಮ್ಮ ಮಾತಿಗೆ ಕಿವಿಗೊಡುವುದಿಲ್ಲ. ಇಂಥ ಶಕ್ತಿ ಇಲ್ಲದೆ ಕೇವಲ 'ದೇಹಿ' ಅನ್ನುವ ದಿವಸಗಳು ದಾಟಿವೆ. ಆದ್ದರಿಂದ ನಿಃಶಸ್ತ್ರವಾದ ಹಿಂದೂಸ್ಥಾನಕ್ಕೆ ನಾನು ಒಂದು ತೀಕ್ಷ್ಣವಾದ ಶಸ್ತ್ರವನ್ನು ಹುಡುಕಿದ್ದೇನೆ. ಅದಾವುದೆಂದರೆ ಪರದೇಶೀ ವಸ್ತುಗಳ ಬಹಿಷ್ಕಾರ ಮತ್ತು ಸ್ವದೇಶೀ ವಸ್ತುಗಳ ಪುರಸ್ಕಾರ. ಶಸ್ತ್ರಾಸ್ತ್ರಗಳು ಇಷ್ಟು ಮುಂದುವರಿದಿದ್ದರೂ ಈ ಶಸ್ತ್ರಕ್ಕೆ ಯಾವುದೂ ಸಾಟಿಯಾಗಲಾರವು. ಈ ಶಸ್ತ್ರವು ಕಣ್ಣಿಗೆ ಕಾಣಲು ಸಣ್ಣದೆನಿಸಿದರೂ ಅದರಲ್ಲಿಯ ಶಕ್ತಿಯು ದೊಡ್ಡದಿದೆ. ಆದರೆ ಈ ಶಸ್ತ್ರವನ್ನು ಉಪಯೋಗಿಸುವಾಗ ಸ್ವಾವಲಂಬನ, ನಿಶ್ಚಯ, ಸ್ವಾರ್ಥತ್ಯಾಗ ಇವುಗಳ ಕವಚವನ್ನು ತೊಡಬೇಕಾಗುವುದು. ನಿಶ್ಚಯವೊಂದನ್ನು ಮಾಡಿದರೆ ಉಳಿದದ್ದೆಲ್ಲವೂ ತಾನೇ ಸಾಧ್ಯವಾಗುವುದು.'

ಈ ಪ್ರಕಾರ ಬಹಿಷ್ಕಾರ ಮತ್ತು ಸ್ವದೇಶಿ ಇವು ಒಂದು ರಾಜಕೀಯ ಶಸ್ತ್ರವೆಂದು ಒಮ್ಮೆ ಕಾಂಗ್ರೆಸದಲ್ಲಿ ಪಾಸಾದವು. ಮತ್ತು ಈ ಸ್ವದೇಶಿ ಚಳವಳಿಯಲ್ಲಿ ಬಟ್ಟೆಯ ಮೇಲೆಯೆ ವಿಶೇಷ ಭಾರ ಕೊಡಲಾಗಿತ್ತು. ಉಳಿದ ವಸ್ತುಗಳು ಹಿಂದೂಸ್ಥಾನದಲ್ಲಿ ಇನ್ನೂ ಆಷ್ಟೊಂದು ಹುಟ್ಟುತ್ತಲೂ ಇರಲಿಲ್ಲ. ಬಂಗಾಲದಲ್ಲಿ ವಂಗಭಂಗದ ಆಂದೋಲನವು ಇನ್ನೂ ಒಳ್ಳೇ ಭರದಲ್ಲಿದ್ದದರಿಂದ ಅವರು ಈ ಶಸ್ತ್ರದ ಉಪಯೋಗವನ್ನು ಪೂರ್ಣ ಮಾಡಿಕೊಂಡರು ಮತ್ತು ಇದು ತನ್ನ ಪ್ರತಿಪಕ್ಷಿಯ ಮೇಲೆ ಪರಿಣಾಮವನ್ನು ಮಾಡದೆ ಬಿಡಲಿಲ್ಲ. ಉಳಿದ ಪ್ರಾಂತಗಳಲ್ಲಿಯೂ ಸ್ವದೇಶಿ ಪ್ರಚಾರವು ನಡದೇ ಇತ್ತು. ಆಗ ಈಗಿನಂತೆ ಖಾದೀ ಇದ್ದಿದ್ದಿಲ್ಲ. ಹಿಂದೂಸ್ಥಾನದಲ್ಲಿಯ ಗಿರಣಿಯ ಬಟ್ಟೆಗಳಿಗೇ ಸ್ವದೇಶಿಯೆಂದು ಹೇಳಲಾಗುತ್ತಿತ್ತು.

### ಸ್ವದೇಶೀ ವಿಕಾಸದ ಎರಡನೇ ಮೆಟ್ಟಲು.

ಹೀಗೆ ೧೯೨೦ರ ವರೆಗೆ ಅಂದರೆ ಲೋಕಮಾನ್ಯರ ಮರಣದ ನಂತರ ಮಿ। ಗಾಂಧಿಯವರು ತಮ್ಮ ಕೈಯಲ್ಲಿ ಕಾಂಗ್ರೆಸದ ಸೂತ್ರಗಳನ್ನು ತೆಗೆದುಕೊಳ್ಳುವ ವರೆಗೆ ಸ್ವದೇಶಿಯು ಸಣ್ಣದಾಗಿ ಬೇರು ಬಿಡುತ್ತಲೇ ಇತ್ತು. ಮಹಾತ್ಮರು ತಮ್ಮ ಚತುಃಸೂತ್ರಿಯಲ್ಲಿ ಹಾಕಿದ ಸ್ವದೇಶಿ ಅರ್ಥವನ್ನು ಮೊದಲಿಗಿಂತಲೂ ಸ್ವಲ್ಪ ವ್ಯಾಪಕಗೊಳಿಸಿದ್ದರು. ಬಹಿಷ್ಕಾರವು ಪ್ರತಿಪಕ್ಷಿಯ ಮೇಲೆ ಒಂದು ಶಸ್ತ್ರದಂತೆ ಉಪಯೋಗಿಸುವುದಕ್ಕಾಗಿರುತ್ತದೆ. ಸ್ವದೇಶಿಯು ತನ್ನಲ್ಲಿಯ ಶಕ್ತಿಯನ್ನು ಬಲಪಡಿಸಿಕೊಳ್ಳುವುದಕ್ಕಾಗಿ ಇರುತ್ತದೆ. ಹಿಂದೂಸ್ಥಾನದ ಶಕ್ತಿಯನ್ನು ಬಲಪಡಿಸಬೇಕಾದರೆ ಮೊದಲು ಹಳ್ಳಿಗಳ ಸುಧಾರಣೆಯಾಗಬೇಕು. ಯಂತ್ರಗಳು ಬಂದು ಹಳ್ಳಿಗಳಲ್ಲಿಯ ಉದ್ಯೋಗಧಂದೆಗಳನ್ನು ನಷ್ಟ ಮಾಡಿರುವುದರಿಂದ ಅವರ ಆರ್ಥಿಕ ಸ್ಥಿತಿಯು ತೀರ ಕೆಟ್ಟಿದೆ. ಸ್ವಾಭಿಮಾನವು ನಷ್ಟವಾಗಿದೆ. ಇದು ಗಿರಣಿಗಳಿಂದ ಸುಧಾರಿಸಲಾರದು. ಹಳ್ಳಿಗರಲ್ಲಿ ಮೊದಲಿನಂತೆ ರಾಟಿಗಳನ್ನು ಪ್ರಾರಂಭ ಮಾಡಿ, ಅವುಗಳಿಂದ ತೆಗೆದ ನೂಲಿನ ಬಟ್ಟೆಯನ್ನೇ ಪ್ರತಿಯೊಬ್ಬನು ಉಡಬೇಕು. ಇದರಿಂದ ಹಳ್ಳಿಗರಿಗೆ ನಾಲ್ಕು ದುಡ್ಡು ಮುಟ್ಟಿ ಅವರ ಆರ್ಥಿಕ ಸ್ಥಿತಿಯು ಸುಧಾರಿಸಿ ಅವರ ಸ್ವಾಭಿಮಾನವು ಜಾಗ್ರತವಾಗುವುದಲ್ಲದೆ ಕಾಂಗ್ರೆಸಕ್ಕೂ ಹಳ್ಳಿಗರಿಗೂ ಒಂದು ಪ್ರೇಮಮಯವಾದ ಸಂಬಂಧವು ಬರುವುದು. ಇವರ ಸ್ವದೇಶಿ ಚಳವಳಿಯಲ್ಲಿಯೂ ಬಟ್ಟೆಗೇ ವಿಶೇಷ ಮಹತ್ವ ಕೊಡಲಾಗಿತ್ತು. ಹಿಂದೂಸ್ಥಾನದಿಂದ ಪರದೇಶಕ್ಕೆ ಹೋಗುವ ದುಡ್ಡಿನ ದೊಡ್ಡ ಝರಿಯು ಬಟ್ಟೆಯ ಮುಖಾಂತರವೇ ಆಗಿರುವುದರಿಂದ ಪ್ರತಿಯೊಂದು ಸ್ವದೇಶಿ ಚಳವಳಿಯಲ್ಲಿ ಅದರ ಮೇಲೆಯೇ ಭಾರ ಕೊಡಲಾಗುತ್ತಿತ್ತು.

ಈ ಪ್ರಕಾರ ಕಾಂಗ್ರೆಸದಲ್ಲಿ ಗಿರಣಿಬಟ್ಟೆಯ ಸ್ಥಳದಲ್ಲಿ ಖಾದಿಯು ಬಂದ ಮೇಲೆ ಎಷ್ಟೋ ದಿವಸಗಳ ವರೆಗೆ ಖಾದಿಯ ಉತ್ಪತ್ತಿ, ಮಾರಾಟ ಮುಂತಾದ ಕೆಲಸಗಳು ಕಾಂಗ್ರೆಸದ ವಶದಲ್ಲಿಯೇ ಇದ್ದವು. ೧೯೨೦ರಲ್ಲಿ ಕೂಡಿಸಿದ ಒಂದು ಕೋಟಿ ರೂಪಾಯಿಗಳೊಳಗಿಂದಲೇ ಈ ಕಾರ್ಯವು ನಡೆಯುತ್ತಿತ್ತು. ಆದರೆ ಆ ಕಾರ್ಯದ ಅನನುಭವದಿಂದ ವಿಶೇಷ ಹಾನಿಯಾಗ ತೊಡಗಿತಲ್ಲದೆ ಕಾರ್ಯ ಸಹ ಅಷ್ಟೊಂದು ವ್ಯವಸ್ಥಿತ ರೀತಿಯಿಂದ ನಡೆಯದಾಯಿತು. ಆದ್ದರಿಂದ ೧೯೨೬ರಲ್ಲಿ ಮಹಾತ್ಮರು ಹಿಂದೂಸ್ಥಾನದಲ್ಲಿ ಅಡ್ಡಾಡಿ ಖಾದಿಯ ಸಲುವಾಗಿ ದುಡ್ಡು ಕಲೆಹಾಕಿ ಅ. ಭಾ. ಚ. ಸಂಘವೆಂಬುದೊಂದು ಸಂಸ್ಥೆಯನ್ನು ಕಾಂಗ್ರೆಸಿನಿಂದ ಬೇರೆ ಮಾಡಿ ಆ ಕಾರ್ಯದಲ್ಲಿಯ ತಜ್ಞರನ್ನು ಅದರಲ್ಲಿ ನೇಮಿಸಿದರು. ಈ ಸಂಘದ ಮಾಹಿತಿಯು ಪ್ರಸಂಗಾನುಸಾರವಾಗಿ ಮುಂದೆ ಬರುವದು.

### ಸ್ವದೇಶೀ ವಿಕಾಸದ ಮೂರನೇ ಮೆಟ್ಟಲು.

ಮಿ। ಗಾಂಧಿಯವರು ಖಾದಿಯ ಬಗ್ಗೆ ತಮ್ಮ ಹೊಸ ಯೋಜನೆಯನ್ನು ಹೊರಗೆಡವಿ ಸ್ವದೇಶೀ ಅರ್ಥವನ್ನು ಮತ್ತಷ್ಟು ವಿಕಾಸಗೊಳಿಸದ ಕೂಡಲೇ ಜನರೆಲ್ಲರೂ ನಿದ್ದೆಯಲ್ಲಿದ್ದವನಿಗೆ ತಣ್ಣೀರೆರಚಿ ಎಬ್ಬಿಸಿದಂತೆ, ಗಡಬಡಿಸಿ ಎಚ್ಚತ್ತು ವಿಚಾರಕ್ಕೊಳಗಾದರು. ಇದು ಕೇವಲ ಜನಜಂಗುಳಿಗೆ ಮಾತ್ರವೆ ಅಲ್ಲ, ತುದಿಯಿಂದ ಇದುವರೆಗೆ ಖಾದೀ ಕಾರ್ಯದಲ್ಲಿಯೇ ತನ್ನ ದೇಹದಂಡವನ್ನು ಸವಿಸುತ್ತಿರುವ ನಿಸ್ಸೀಮ ಕಾರ್ಯಕರ್ತರನ್ನೂ ಖಾದಿಯ ಭಕ್ತರನ್ನೂ ಕೂಡ ಎಷ್ಟೋ ಹೊತ್ತಿನ ವರೆಗೆ ದಿಙ್ಮೂಢರನ್ನಾಗಿ ಮಾಡಿಬಿಟ್ಟಿತು. ಇದು ಕಾಣಲು ಸಣ್ಣ ಮಾತಾಗಿದ್ದರೂ ಅದರಲ್ಲಿ ಮಹಾನ್ ಮಹಾನ್ ತತ್ವಗಳು ಅಡಕವಾಗಿರುವದರಿಂದಲೇ ಅದರಲ್ಲಿ ಇಂಥ ಅದ್ಭುತವಾದ ಕ್ರಾಂತಿಯನ್ನುಂಟುಮಾಡುವ ಸಾಮರ್ಥ್ಯವಿದೆ. ಮಹಾತ್ಮರ ಜೀವನವು ಕ್ರಾಂತಿಮಯವಾಗಿರುವುದರಿಂದ ಅವರು ಯಾವದೇ ಯೋಜನೆಯನ್ನು ಅಥವಾ ವಿಚಾರವನ್ನು ಮುಂದಿಟ್ಟರೂ ಅದು ಕ್ರಾಂತ್ಯುತ್ಪಾದಕವಾಗಿಯೇ ಪರಿಣಮಿಸುತ್ತದೆ. ಆದ್ದರಿಂದ ಮಹಾತ್ಮರ ಬೀಜಮಂತ್ರವಾದ ಈ ಹೊಸ ಯೋಜನೆಯನ್ನು ಆದಷ್ಟು ಒಳಹೊಕ್ಕು ನೋಡಿ ಅದರಲ್ಲಿ ಅಡಕವಾಗಿರುವ ಹೊಸ ತತ್ವಗಳನ್ನು ಕಂಡುಹಿಡಿದು ಅವುಗಳನ್ನು ಕಾಯಾ, ವಾಚಾ, ಮನಸಾ ನಮ್ಮ ಜೀವನದಲ್ಲಿ ತರಲು ಪ್ರತಿಯೊಬ್ಬನೂ ಹೆಣಗಬೇಕು. ಇದರಲ್ಲಿಯೇ ಅವನದೂ ಅವನ ಸಮಾಜದ್ದೂ, ಅರ್ಥಾತ್ ದೇಶದ್ದೂ ಉನ್ನತಿ ಇದೆ.

ಖಾದಿಯ ಕಾರ್ಯವು ಈಗ ಎಂಟು ಹತ್ತು ವರ್ಷಗಳಿಂದ ಅವ್ಯಾಹತವಾಗಿ ಕಣ್ಣಿಗೆ ಕಾಣಿಸುವಂಥ ಒಂದು ಪ್ರಧಾನ ವಿಧಾಯಕ ಕಾರ್ಯವಾಗಿ ದಿನೇ ದಿನೇ ತನ್ನ ಕಾರ್ಯಕ್ಷೇತ್ರದಲ್ಲಿ ಪ್ರಗತಿಯನ್ನು ಹೊಂದುತ್ತಿರಲು, ಒಮ್ಮೆಲೇ ಅದರಲ್ಲಿ ಇಂಥ ಒದಲಾವಣೆಯನ್ನು ಮಾಡಲು ಮಹಾತ್ಮರನ್ನು ಪ್ರೇರಿಸಿದ ಮಾತಾದರೂ ಯಾವುದು? ಹೊಸ ಯೋಜನೆಯ ಬಗ್ಗೆ ದೇಶದಲ್ಲಿಯ ಅನೇಕ ವಿಚಾರವಂತ ಮುಖಂಡರೂ ಖಾದೀ ಕಾರ್ಯದಲ್ಲಿಯ ತಜ್ಞರೂ ಅನೇಕ ತೊಡರುಗಳನ್ನು ಮುಂದಿಡುತ್ತಿರಲು, ಅದರ ಶಕ್ಯಾಶಕ್ಯತೆಯ ಬಗ್ಗೆ ಸಾಶಂಕವೃತ್ತಿಯುಳ್ಳವರಾಗಿರಲು ಮಹಾತ್ಮರು ಅವೆಲ್ಲವುಗಳಿಗೂ ತಡೆ ಹಾಕಿ, ಹೊಸ ಯೋಜನೆಯಿಂದ ಖಾದಿಯ ಬೆಲೆಯು ಹೆಚ್ಚಾಗಿ ಈಗಿನ ಖಾದಿ ಉತ್ಪತ್ತಿ ಮಾರಾಟಗಳಿಗೆ ದಾಳಿ ಬಂದರೂ ಅದನ್ನು ಲೆಕ್ಕಿಸದೆ, ಹೊಸ ಯೋಜನೆಯನ್ನು ಒಮ್ಮೆಲೇ ರೂಢಿಯಲ್ಲಿ ತರಬೇಕೆಂಬ ಆಗ್ರಹ ತೊಟ್ಟದ್ದೇಕೆ? ಇವೆಲ್ಲವುಗಳಿಗೆ ಕಾರಣವೇನೆಂದರೆ, ಇಷ್ಟು ದಿವಸಗಳ ವರೆಗೆ ನಡೆದುಬಂದ ಅ. ಭಾ. ಚ. ಸಂಘದ ಕಾರ್ಯದ ಅನುಭವವೇ ಎಂದು ಒತ್ತಿ ಹೇಳಬಹುದು. ಆದ್ದರಿಂದ ಈಗ ಎಂಟು ಹತ್ತು ವರ್ಷಗಳಿಂದ ನಡೆದು ಬಂದ ಖಾದೀ ಕಾರ್ಯವನ್ನು ಸಿಂಹಾವಲೋಕನ ಮಾಡುವದರಿಂದ ಮಹಾತ್ಮರ ಬೀಜಮಂತ್ರದಂತಿರುವ ಹೊಸ ಯೋಜನೆಯನ್ನು ಅರಿತುಕೊಳ್ಳಲು ಸುಲಭವಾಗುವದು.

ಖಾದೀ ಕಾರ್ಯಕ್ಕೆ ಒಂದು ಮೂರ್ತಸ್ವರೂಪವು ಸಿಕ್ಕಿದ್ದು ೧೯೨೬ರಲ್ಲಿ. ಅದಕ್ಕಿಂತ ಮೊದಲು ಅಂದರೆ ೧೯೨೦ರಿಂದ ೧೯೨೬ರ ವರೆಗೆ ಅಲ್ಲಲ್ಲಿ ಖಾದೀ ಕಾರ್ಯಗಳು ನಡೆದಿದ್ದರೂ ಅವು ವ್ಯವಸ್ಥಿತವಾಗಿ ನಡೆದಿದ್ದಿಲ್ಲ. ಒಂದು ಕಡೆಗೆ ಖಾದೀ ಹುಟ್ಟು ವಳಿಯು ಹೆಚ್ಚಾಗಿ ಕೊಳ್ಳುವವರ ಅಭಾವದಿಂದ ಹಾಗೇ ಬಿದ್ದಿರಲು ಇನ್ನೊಂದೆಡೆಗೆ 'ಖಾದೀ ಸಿಗುವದಿಲ್ಲ,' 'ಖಾದೀ ಸಿಗುವದಿಲ್ಲೆ'ಂಬ ಕೂಗು ಕೇಳಬರುತ್ತಿತ್ತು. ಅದೇ ಕಾಲಕ್ಕೆ ಎಷ್ಟೋ ಸ್ವಾರ್ಥಸಾಧಕ ವ್ಯಾಪಾರಸ್ಥರು ಖಾದೀ ಹೆಸರಿನ ಮೇಲೆ ಗಿರಣಿಯ ಬಟ್ಟೆಗಳನ್ನು ಮಾರಹತ್ತಿದರು. ಅದರಲ್ಲಿಯ ಇವೆಲ್ಲ ಕುಂದುಕೊರತೆಗಳನ್ನು ಹೋಗಲಾಡಿಸಿ ಖಾದಿ ಕಾರ್ಯಕ್ಕೆ ಒಂದು ವ್ಯವಸ್ಥಿತ ಸ್ವರೂಪವನ್ನು ಕೊಟ್ಟು ದೇಶದಲ್ಲಿ ಖಾದೀ ತೊಡುವವರ ಸಂಖ್ಯೆಯನ್ನು ಬೆಳಿಸಿ ಅದರಿಂದ ಅರೆಹೊಟ್ಟೆಯುಣ್ಣುವ ಕೂಲಿಗೇಡಿ ಬಡಜನರನ್ನು ಕೂಲಿಗೆ ಹಚ್ಚಿ ಅವರ ಹೊಟ್ಟೆ ತುಂಬುವಂತೆ ಮಾಡಬೇಕೆಂಬ ಉದ್ದೇಶದಿಂದ ಅ. ಭಾ. ಚ. ಸಂಘ (ಅ. ಭಾ. ನೂಲುವವರ ಸಂಘ) ಎಂಬುದನ್ನು ಸ್ಥಾಪಿಸಿದರು ಎಂದು ಹಿಂದೆ ಹೇಳಿದೆ. ಆ ಸಂಘವು ಅಂದಿನಿಂದ ಇಂದಿನ ವರೆಗೆ ತನ್ನ ಕಾರ್ಯದಲ್ಲಿ ಎಷ್ಟೋ ಮಹತ್ತರವಾದ ಪ್ರಗತಿಗಳನ್ನು ಮಾಡಿದೆ. ೧೯೨೦ರಲ್ಲಿ ಯಾವ ಖಾದಿಯ ಒಂದು ಗಜಕ್ಕೆ ಹದಿನೆಂಟು ಆಣೆ ಬೀಳುತ್ತಿತ್ತೋ ಅದೇ ಖಾದಿಗೆ ಈಗ ಒಂದು ಗಜಕ್ಕೆ ಐದಾಣೆ ಬೆಲೆ ಬೀಳುತ್ತದೆ. ೧೯೨೦ರಲ್ಲಿ ಎಂಟು ಹತ್ತು ನಂಬರಿನ ಗಡುತರವೂ ಹುರುಬುಕವೂ ಆದ ನೂಲಿನ ಖಾದಿಯು ಸಿಗುವದು ದುರ್ಲಭವಾಗುತ್ತಿತ್ತೋ, ಅದೇ ಈಗ ಪರದೇಶದ ಬಟ್ಟೆಯನ್ನು ಹಿಮ್ಮೆಟ್ಟಿಸುವಂಥ ಸುಂದರವೂ ನಯವೂ ಆದ ಬಟ್ಟೆಗಳು ಹುಟ್ಟಹತ್ತಿವೆ. ಅಲ್ಲಲ್ಲಿಗೆ ಖಾದೀ ಅಂಗಡಿಗಳನ್ನು ತೆರೆದು ಬಣ್ಣಬಣ್ಣದ ಚಿತ್ರಚಿತ್ರದ ಸುಂದರವಾದ ಖಾದೀ ಬಟ್ಟೆಗಳನ್ನಿಟ್ಟು ಗ್ರಾಹಕರಿಗೆ ಮನಮೆಚ್ಚುವಂತೆಯೂ ಅನುಕೂಲವಾಗುವಂತೆಯೂ ಸೌಕರ್ಯಗಳನ್ನು ಒದಗಿಸಿಕೊಟ್ಟಿದೆ. ಮನೆಮನೆಗೆ ಖಾದೀ ಹೊತ್ತು ಮಾರುವವರನ್ನು ನೇಮಿಸಿ, ಸಣ್ಣ ಸಣ್ಣ ಹಳ್ಳಿಗಳಿಗೂ ಕೂಡ ಖಾದಿಯು ದೊರಕುವಂತೆ ಮಾಡಿದೆ. ಖಾದಿಯ ಹುಟ್ಟುವಳಿಯನ್ನು ಒಂದು ವರ್ಷಕ್ಕೆ ಒಂದು ಕೋಟಿ ರೂಪಾಯಿಗಳನ್ನು ಮಿಕ್ಕುವಂತೆ ಮಾಡಿತು. ಖಾದಿಯ ಕಾರ್ಯವು ಅವ್ಯವಹಾರ್ಯವೆಂದು ಶಂಕೆಗೊಳ್ಳುತ್ತಿದ್ದ ಶಂಕಾಕಾರರು ಕೂಡ ವ್ಯವಹಾರ್ಯವೆಂದು ಒಪ್ಪಿಕೊಳ್ಳುವಷ್ಟು ಪ್ರತ್ಯಕ್ಷ ಪ್ರಮಾಣದಿಂದ ಸಿದ್ಧಮಾಡಿ ತೋರಿಸಿದೆ. ಆದರೆ ಇವೆಲ್ಲ ಕಾರ್ಯಗಳ ಕಡೆಗೆ ಅದು ಮುಂದಡಿ ಇಡುತ್ತಿದ್ದರೂ, ತನ್ನ ಗುರಿಯನ್ನು ಸಾಧ್ಯಮಾಡಿಕೊಳ್ಳದಾಯಿತು. ಯಾಕಂದರೆ ಖಾದಿಯನ್ನು ನಿರಂತರವಾಗಿ ನೆಲೆಗೊಳಿಸಬೇಕೆಂಬ ಸದ್ಧೇತುವಿನಿಂದ ಪ್ರೇರಿತರಾಗಿ ಖಾದಿಯ ದರವನ್ನು ಗಿರಣಿಯ ಬಟ್ಟೆಯ ಜೊತೆಯಲ್ಲಿ ತರಬೇಕೆಂದು ಮಾಡಿದ ಪ್ರಯತ್ನದಿಂದ ನೂಲುಗರ ಹಿತದ ಬದಲು ಅಹಿತವೇ ಆಯಿತೆಂಬದನ್ನು ನೋಡಿದರೆ ಯಾರಿಗೂ ವಿಷಾದವಾಗದಿರದು. ಖಾದೀ ಬಟ್ಟೆಯ ಬೆಲೆಯನ್ನು ಕಡಿಮೆ ಮಾಡುವದೆಂದರೆ ನೂಲುಗರ ಕೂಲಿಯನ್ನು

(ಅನೇ ಪುಟಕ್ಕೆ ಮುಂದರಿಸಿದೆ)


## AN OPEN LETTER TO THE READERS OF "KANTEERAVA"

Dear Mr. Reader,

Will it cause you any surprise if I inform you that THE GUARDIAN OF INDIA INSURANCE CO., LTD., which has done a record business of about 37 Lakhs within a year of its start, has a most attractive 'Depositors Insurance Scheme' which enables every man or woman between the ages 18 and 50 to take out an Endowment Policy for 15, 20 & 25 years WITH PROFITS through The Travancore National Bank Ltd., The Canara Banking Corporation Udipi Ltd., or any other good Banks in South Kanara.

If you have an account with any of the Banks mentioned above it is high time for you to take out a policy under the above scheme at once, and the advantages you get thereby are many.

You pay the LOWEST PREMIUM of all the Insurance Companies in India. You get interest on your account from the Bank. You are saved the trouble of remitting your premium. The premium rate under this scheme is about Rs. 5 less than our standard premiums.

All these advantages coupled with the fact that we have done a record business already, must induce you and your friends to write to the undersigned for full particulars.

Kindly note that the Directorate of THE GUARDIAN consists of, among others, Heads of two of the foremost Banks in South India. A post-card from you to the undersigned will bring you back a handsome Book-let of The Depositors Insurance Scheme.

Thanking you in advance, I remain,

very truly yours,

**V. D. HERANJAL,**

*Dt. Organiser, Udipi.*

## ವೆಂಕಟಗಿರಿ ಮಹಾತ್ಮೆ

೫೯೯ ಪದ್ಯಗಳಿರುವ ೧೫ ಅಧ್ಯಾಯಗಳು. ದಪ್ಪವಾದ ಕಾಗದ.

ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ಕಾರ್ಯಗಳು ವಾಚಕರಿಗೆ ಮನಃಪ್ರಚೋದಕವಾಗುವಂತೆ ಗ್ಲೇಜ್ ಕಾಗದದಲ್ಲಿ ೧೪ ಹಾಫ್ ಟೋನ್ ಚಿತ್ರಗಳಿಂದ ಕೂಡಿದೆ.

ಮುದ್ದಾದ ಮುದ್ರಣ.

ಬೆಲೆ ರೂಪಾಯಿ ೧—೪—೦.

ಟಪ್ಪಾಲು ಹಾಸಲು ಬೇರೆ.

ಸಂಸ್ಕೃತ ಭವಿಷ್ಯತ್ಪುರಾಣದಿಂದ ಸ್ವರ್ಗಸ್ಥರಾದ ಮೂಲ್ಕಿ ಕವಿ ರಾಮ ಕೃಷ್ಣಯ್ಯನವರಿಂದ ಭಾಮಿನಿ ಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿತು. ಸುಲಭ ಶೈಲಿ, ಸರ್ವರಿಗೂ ಅನುನಿತ್ಯಪಠನ ಪುಸ್ತಕವಾಗಿರಲು ಉಚಿತವಾಗಿರುವುದು. ಸೈಜು ಡೆಮ್ಮಿ ಅಷ್ಟಪತ್ರದ 168 ಪುಟಗಳು. ಕ್ಷತ್ರಾನಾರಿನ ಜೈಂದು. ಪ್ರತಿಯೊಂದಕ್ಕೆ ರೂ. 1—8—0. ಟಪ್ಪಾಲು ಹಾಸಲು ಬೇರೆ.

ಕವಿ ಎಂಡ್ ಸನ್ಸ್, ಮಂಗಳೂರು, ದ. ಕ.

---

ಯೋಗ್ಯ ದರದಲ್ಲಿ ಉತ್ತಮ

## ದೇವಪೂಜಾ ಸಾಮಗ್ರಿ

ಅಪೇಕ್ಷಿಸುವವರು ಇಂದೇ ನಮ್ಮ ಪಾತ್ರೆಗೊಂದು ಪತ್ರ ಬರೆಯಿರಿ.



ಸಚಿತ್ರ ಕ್ಯಾಟಲಾಗ್ ಫುಕಟಾ ಕಳುಹಿಸಿಕೊಡುವೆವು. ಈ ಚಿತ್ರದಲ್ಲಿ ಕಾಣುವ ಉಪಕರಣಗಳು ಬೇಕಾದ ಸೈಜಿನಲ್ಲಿ ಪಾತ್ರಿಯಾಗಿ ಸದಾ ಸಿದ್ಧವಿರುವುವು. ಅಲ್ಲದೆ, ಉಡುಪಿಯಲ್ಲಿ ತಯಾರಾಗುವ ಪಿಳ್ಳಿ ಸಾಮಾನುಗಳನ್ನು ಶುದ್ಧ ಪಿಳ್ಳಿಯಿಂದ ತಯಾರಿಸಿ ಕಳುಹಿಸಬಲ್ಲೆವು. ಗಿರಾಕಿಗಳಿಗೆ ತುಂಬಾ ಅನುಕೂಲ. ಹೆಚ್ಚಿನ ಮಾಹಿತಿ ಕ್ಯಾಟಲಾಗಿನೊಂದಿಗೆ.

ಕಲ್ಮಂಜೆ ವ್ಯಾಸಾಚಾರ್ಯ, Kalmanje Vyasacharya,
ಕಾಂಡೆ ವ್ಯಾಪಾರಿ, Brass-ware Merchant,
ಉಡುಪಿ, ದ. ಕ. Udipi, S. K.

---




---

ಆರ್. ಮಾರ್ಟಿನ್ಸ್‌ರ

## ಆಸ್ತಮೊಡಾಯನ್

ಈ ನಮ್ಮ ಔಷಧವು ಬಹಳ ಕಾಲಕ್ಕಿಂದ ಉದ್ಭವಿಸಿದ ಮತ್ತು ಅತೀ ಕಷ್ಟಕರವಾದ ಕಫ, ಕೆಮ್ಮು, ದಮ್ಮು, ನೆಗಡಿ, ಗಂಟಲುನೋವು ಎದೆನೋವು, ಶ್ವಾಸಕೋಶದ ನೋವು ಇವೇ ಮುಂತಾದವುಗಳನ್ನು ನಾಶ ಮಾಡಿ ಉಸುರಾಡುವುದಕ್ಕೆ ಸುಲಭ ಮಾಡುತ್ತದೆ. ಎದೆಯನ್ನು ಶುಭ್ರ ಮಾಡುತ್ತದೆ. ಈ ಔಷಧದ ಪೂರ್ಣ ಗುಣ ಸಿಕ್ಕಬೇಕಾದರೆ ಒಂದೇ ಬಾಟ್ಲಿ ಯನ್ನು ಉಪಯೋಗಿಸಿದರೆ ಸಾಕು. ಈ ಔಷಧವನ್ನು ಒಂದು ಸಾರಿ ತೆಗೆದುಕೊಂಡವರಿಗೆ ಮೇಲೆ ವಿವರಿಸಿದ ಕಾಯಿಲೆಗಳು ಪುನಃ ಪೀಡಿಸು ವುದಿಲ್ಲ. 60 ಗುಳಿಗೆಗಳ ಒಂದು ಬಾಟ್ಲಿಗೆ ಕ್ರಯ ರೂ. 1—4—0. 12 ಬಾಟ್ಲಿಗಳಿಗೆ ಕ್ರಯ ರೂ. 13—8—0.

*R. D. KATELY & Co.,*
*319 Frere Road,*
Opposite Fort Market, near Fountain,
BOMBAY.

ಆರ್. ಡಿ. ಕಟ್ಲೀ ಅಂಡ್ ಕೋ.,
319 ಫ್ರಿಯರ್ ರೋಡ್,
ಫೋರ್ಟ್ ಮಾರ್ಕೇಟಿನ ಎದುರು,
ಫೋರ್ಟ್, ಬೊಂಬಾಯಿ.

---

## ಅಲೆಂಬಿಕ್

# ಗ್ಲೈಕೊಡಿನ್-ಟಿರ್ಪ್-ವಾಸಕ

ಶೀತ ಮತ್ತು ಕೆಮ್ಮಿಗೆ ಖಾತ್ರಿಯಾದ ರಕ್ಷೆ.

ಅಲೆಂಬಿಕ್ ಗ್ಲೈಕೊಡಿನ್-ಟರ್ಪ್-ವಾಸಕವು ಎಲ್ಲಾ ಬಗೆಯ ಉಸಿರಾಟದ ಮತ್ತೂ ಶ್ವಾಸಕೋಶದ ತೊಂದರೆಗಳಿಗೂ, ಶೀತ, ಕೆಮ್ಮು, ನಾಯಿಕೆಮ್ಮು, 'ಬ್ರೊಂಕೈಟೀಸ್' ಮೊದಲಾದುವುಗಳಿಗೂ ಖಾತ್ರಿಯಾದ ಔಷಧವೆಂದು ವೈದ್ಯರಿಂದ ಪ್ರಯೋಗಿಸಲ್ಪಡುತ್ತಿದೆ. ಇದು ರುಚಿಕರವಾಗಿದೆ; ಇದರಲ್ಲಿ ವಿಷಪದಾರ್ಥಗಳಿಲ್ಲ. ಇದು ಅಪಾಯರಹಿತವಾಗಿದೆ. ಡಿಸ್‌ಪೆನ್ಸರಿಗಳಲ್ಲಿಯೂ, ಆಸ್ಪತ್ರೆಗಳಲ್ಲಿಯೂ, ಮನೆವಾರ್ತೆಗಳಲ್ಲಿಯೂ ಇದು ಧಾರಾಳವಾಗಿ ಉಪಯೋಗಿಸಲ್ಪಡುತ್ತಿದೆ.

ಅಲೆಂಬಿಕ್ ಕೆಮಿಕಲ್ ವರ್ಕ್ಸ್ ಕೋ., ಲಿಮಿಟೆಡ್,
ಬೊಂಬಾಯಿ — ಬರೋಡ — ಮದ್ರಾಸು.

---

ಸ್ಥಾಪಿತವಾದುದು **ಶ್ರೀ ದುರ್ಗಾಪರಮೇಶ್ವರಿ** 1927ರಲ್ಲಿ!

# ಮೋಟರ್ ಸರ್ವೀಸ್, ಮಂಗಳೂರು.

ನಮ್ಮ ಮೋಟಾರು ಬಸ್ಸುಗಳು ಕ್ರಮವಾಗಿ ಪ್ರತಿನಿತ್ಯವೂ ಮಂಗಳೂರಿಂದ ಮರವೂರು, ಬಜಪೆ, ಕಟೀಲ್, ಕಿನ್ನಿಗೋಳಿ ಮಾರ್ಗವಾಗಿ ಮೂಲ್ಕಿಗೂ; ಗುರುಪುರ, ಒಜಪೆ, ಕಟೀಲ್ ಮಾರ್ಗವಾಗಿ ಮೂಲ್ಕಿಗೂ; ಮರವೂರು, ಬಜಪೆ, ಕಟೀಲ್ ಮತ್ತು ಮುಂಡ್ಕೂರಿಗಾಗಿ ಬೆಳ್ಮಣ್ಣಿಗೂ; ಅಡ್ಯಾರ್, ಫರಂಗಿಪೇಟೆ ಮಾರ್ಗವಾಗಿ ಬಂಟ್ವಾಳಕ್ಕೂ; ಮೂಲ್ಕಿಯಿಂದ ಪಡುಬಿದ್ರೆ, ಬೆಳ್ಮಣ್ಣು, ಕಾರ್ಕಳಕ್ಕೂ ಕಾರ್ಕಳದಿಂದ ಬೆಳ್ಮಣ್ಣು, ಮುಂಡಿಕಲ್ಲು ಮಾರ್ಗವಾಗಿ ಉಡುಪಿಗೂ ಚಲಾವಣೆಯಾಗುವುವು.

### ನಮ್ಮ ಹೊಸ ಲ್ಯಾನುಗಳು.

ಮೂಲ್ಕಿ—ಕಿನ್ನಿಗೋಳಿ—ಮೂಡಬಿದರೆ ಮಾರ್ಗವಾಗಿ ಕಾರ್ಕಳಕ್ಕೂ; ಕಾರ್ಕಳದಿಂದ ಸೀದಾ ಸೋಮೇಶ್ವರಕ್ಕೂ ಬೆಳಿಗ್ಗೆ ಮತ್ತೂ ಮಧ್ಯಾಹ್ನ ಎರಡು ಸರ್ವೀಸುಗಳು ಹೊಸದಾಗಿ ನಡೆಯುತ್ತಿವೆ. ಶಿವಮೊಗ್ಗಾ—ತೀರ್ಥಹಳ್ಳಿ—ಕೆಸಿಪ್ಪ—ಹರಿಹರ ಮೊದಲಾದ ಪ್ರದೇಶಗಳಿಗೆ ಹೋಗುವವರಿಗೆ ಇದರಿಂದ ತುಂಬ ಅನುಕೂಲ.

ವಿ. ಸೂ.—ಮಂಗಳೂರು, ಮೂಲ್ಕಿ, ಮಂಚಕಲ್, ಉಡ್ರಿ, ಕಿನ್ನಿಗೋಳಿ ಮೊದಲಾದ ಕಡೆಗಳಿಂದ ಹೊರಡುವ ಬೆಳಗಿನ ಮತ್ತೂ ಮಧ್ಯಾಹ್ನದ 'ಸರ್ವೀಸು'ಗಳು, ಸಮಯಕ್ಕೆ ಸರಿಯಾಗಿ ಸೋಮೇಶ್ವರಕ್ಕೆ ತಲುಪಿ, ಮೇಲಿನ ಬಸ್ಸು ಸರ್ವೀಸುಗಳಲ್ಲಿ ಕೂಡಲೇ ಪ್ರಯಾಣ ಮಾಡುವಂತೆ ಏರ್ಪಡಿಸಲಾಗಿದೆ.

ಪ್ರಯಾಣಿಕರ ಸೌಕರ್ಯವೇ ನಮ್ಮ ಮುಖ್ಯಧ್ಯೇಯ! ಇದಕ್ಕಾಗಿಯೇ ಹೊಸ ಬಸ್ಸುಗಳು!

ಹೆಚ್ಚಿನ ಮಾಹಿತಿ ಈ ಸರ್ವೀಸಿನ ಏಜಂಟರುಗಳಿಂದ ತಿಳಿದುಕೊಳ್ಳಬಹುದು.

---

# The Premier Bank of India, Ltd., Madras.

ದಿ

## ಪ್ರೀಮಿಯರ್ ಬೇಂಕ್ ಆಫ್ ಇಂಡಿಯಾ ಲಿಮಿಟೆಡ್,

ನಂಬ್ರ 13, ತಂಬುಚೆಟ್ಟಿ ರಸ್ತೆ, ಮದರಾಸು.

ಕಾಯಂ ಠೇವಣಾತಿಗಳ ಮೇಲೆ ಕೊಡಲ್ಪಡುವ ಬಡ್ಡಿ

6 ತಿಂಗಳಿಗೆ ಶೇಕಡಾ $4\frac{1}{2}$.
12 ತಿಂಗಳಿಗೆ ಶೇಕಡಾ $5\frac{1}{2}$.
24 ತಿಂಗಳಿಗೆ ಶೇಕಡಾ 6.

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು.

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆದುಕೊಳ್ಳಬಹುದು.

S. V. RAO, D. Com.,
*Managing Director.*

(೬ನೇ ಪುಟದಿಂದ)

ಅಷ್ಟು ಪ್ರಮಾಣದಿಂದ ಕಡಿಮೆಮಾಡುವದು. ಯಾಕಂದರೆ ಒಟ್ಟಿಗೆ ಬೇಕಾಗುವ ಅರಳಿಯ ದರವನ್ನು ಕಡಿಮೆ ಮಾಡುವ ದಂತೂ ನಮ್ಮ ಕೈಯಲ್ಲಿಲ್ಲ. ಕಾರ್ಯಕರ್ತರ ಪಗಾರವನ್ನು ಕಡಿಮೆಮಾಡಲು ಬರುವಂತಿಲ್ಲ. ಯಾಕಂದರೆ ಅವರ ಇರುವಿಕೆಗನುಸಾರವಾಗಿ ಅವರಿಗೆ ಪಗಾರ ಕೊಡಲೇ ಬೇಕು. ಇಲ್ಲವಾದರೆ ಕಾರ್ಯಕರ್ತರು ಸಿಗುವದಿಲ್ಲ. ನೇಕಾರರ ಪಗಾರ ಕಡಿಮೆ ಮಾಡಿದರೆ ಅವರಿಗೆ ಇನ್ನೂ ಅಲ್ಪಸ್ವಲ್ಪ ಗಿರಣಿ ನೂಲಿನ ಉದ್ಯೋಗವಿರುವದರಿಂದ ಬಿಟ್ಟು ಹೋದಾರೆಂಬ ಭಯ. ಇನ್ನು ಉಳಿದವರೆಂದರೆ ನೂಲುಗರು. 'ಕಣ್ಣಿಲ್ಲದವರಿಗೆ ನೀನೆ ಶಿವಾ' 'ಕಾಲಿಲ್ಲದವರಿಗೆ ನೀನೆ ಶಿವಾ' ಎಂಬಂತೆ 'ಕೂಲಿಲ್ಲದವರಿಗೆ ಸಿಕ್ಕಷ್ಟೇ ಶಿವಾ' ಎನ್ನುವ್ದ. ನೂಲುಗರ ಮೇಲೆಯೇ ದಾಳಿ. ಸಂಘದವರು ನೂಲುಗರ ಕೂಲಿಯನ್ನು ಎಷ್ಟು ಕಡಿಮೆ ಮಾಡಿದರೂ ಅವರು ನೂಲಲು ಸಿದ್ಧರು! ಯಾಕಂದರೆ ಅವರಿಗೆ ಅನ್ಯ ಉದ್ಯೋಗದ ಆಧಾರವಿಲ್ಲ. ನೂಲುಗರ ಸಂಘವೆಂದು ಹೇಳಿಸಿಕೊಳ್ಳುವ ಅ. ಭಾ. ಚ. ಸಂಘದಿಂದಲೂ ನೂಲುಗರ ಆರ್ಥಿಕ ಸ್ಥಿತಿಯು ಅಲ್ಪಮಟ್ಟಿಗಾದರೂ ಸುಧಾರಿಸಲಿಲ್ಲವಲ್ಲ ವೆಂಬ ನೂಲುಗರ ಈ ಕರುಣಾಮಯವಾದ ಸ್ಥಿತಿಯೇ ಮಹಾತ್ಮರನ್ನು ಹೊಸ ಯೋಜನೆಗೆ ಪ್ರವರ್ತಕರನ್ನಾಗಿ ಮಾಡಿದುದು. ಮಹಾತ್ಮರು ದೀನರ ಕೈವಾರಿ, ಅನ್ಯಾಯದ ಪ್ರತಿಕಾರಿ ಅವರು ಶಾಂತಿಯ ಪ್ರತ್ಯಕ್ಷ ಪುತ್ಥಳಿ. ಯಾವುದನ್ನೂ ಅವರು ಸಹನ ಮಾಡಬಹುದು. ಆದರೆ ಅನ್ಯಾಯವನ್ನೂ ಅಸತ್ಯವನ್ನೂ ಒಂದು ಕ್ಷಣವು ಕೂಡ ಸಹನ ಮಾಡಲಾರರು. ಅದಕ್ಕಾಗಿ ಅವರು ತಮ್ಮ ಪ್ರಾಣವನ್ನೂ ಪಣಗಟ್ಟಿ ಹೋರಾಡುವರು. ಆದ್ದರಿಂದ ಅವರಿಗೆ ನೂಲುಗರ ಮೇಲಾಗುವ ಈ ಅನ್ಯಾಯವು ಅಸಹ್ಯವೆನಿಸಿ ತಮ್ಮ ಹೊಸ ಯೋಜನೆಯನ್ನು ಆದಷ್ಟು ಬೇಗನೆ ಅನುಲಿನಲ್ಲಿ ತರಬೇಕೆಂದು ಆಗ್ರಹ ತೊಟ್ಟರು.

ಇನ್ನು ಮಹಾತ್ಮರು ಇಷ್ಟು ಆಗ್ರಹ ತೊಟ್ಟ ಹೊಸ ಯೋಜನೆಯಲ್ಲಿ ಆಡಕವಾದ ಅಂಥ ಉದಾತ್ತ ತತ್ವಗಳಾದರೂ ಯಾವವು? ಎಂಬುದರ ವಿಚಾರವನ್ನು ಮಾಡುವದು ಅತ್ಯವಶ್ಯ. ಈ ಹೊಸ ಯೋಜನೆಯಲ್ಲಿ ಅಡಕವಾದ ಮೊದಲನೇ ತತ್ವವೆಂದರೆ, ಎಂಟು ತಾಸು ದುಡಿಯುವವನಿಗೆ ಹೊಟ್ಟೆತುಂಬ ಅನ್ನ ಸಿಗಬೇಕೆಂಬುದು. ದಿನದ ಹನ್ನೆರಡು ತಾಸುಗಳಲ್ಲಿ ಎಂಟು ತಾಸು ದುಡಿದರೂ ಹೊಟ್ಟೆತುಂಬ ರೊಟ್ಟಿ ಕೂಡ ಸಿಗಬಾರದೆಂದರೆ ಎಲ್ಲಿಯ ನ್ಯಾಯ? ಎಂಟು ತಾಸು ದುಡಿಯುವವನಿಗೆ ಹೊಟ್ಟೆತುಂಬ ಅನ್ನಹಾಕುವದು ಅವನಿಂದ ಕೆಲಸ ತೆಗೆದು ಕೊಳ್ಳುವಂಥ ಪ್ರತಿಯೊಬ್ಬ ಮನುಷ್ಯನ ಕರ್ತವ್ಯವು. ಇದರಲ್ಲಿಯೇ ಸ್ವದೇಶೀ ಅರ್ಥವು ಅಡಕವಾಗಿದೆ. ಇದೇ ತತ್ವದ ಮೇಲಿಂದ ಮಹಾತ್ಮರು ನೂಲುಗರ ಕೂಲಿಯನ್ನು ದಿನಾಲೂ ಅವರ ಹೊಟ್ಟೆಗೆ ಬೇಕಾಗುವಷ್ಟಾದರೂ ಮಾಡಬೇಕೆಂದು ಹೇಳಿದರು. ಈಗಿನ ಪರಿಸ್ಥಿತಿ ಮತ್ತು ಉಳಿದ ಉದ್ಯೋಗಗಳಲ್ಲಿ ಸಿಗತಕ್ಕ ಕೂಲಿ ಇವುಗಳ ವಿಚಾರ ಮಾಡಿ ತೀರ ಕಡಿಮೆಯೆಂದರೆ ದಿನಾಲೂ ಮೂರು ಆಣೆಯಾದರೂ ಸಿಗುವಷ್ಟು ಕೂಲಿಯನ್ನು ಕೊಡಬೇಕೆಂದು ಗೊತ್ತಾಯಿತು.

ಹೀಗೆ ದಿನಾಲೂ ಮೂರು ದುಡ್ಡು ಬೀಳುತ್ತಿದ್ದ ಕೂಲಿಯ ದರವನ್ನು ಒಮ್ಮೆಲೆ ಮೂರು ಆಣೆಗೆ ಒಯ್ದರೆ ಮೊದಲೇ ತುಟ್ಟಿಯೆಂದು ಹೇಳುತ್ತಿರುವ ಖಾದೀ ಬೆಲೆಯು ಮತ್ತಿಷ್ಟು ಹೆಚ್ಚಾಗಿ ಖಾದಿಯನ್ನು ಧರಿಸುವವರ ಸಂಖ್ಯೆಯು ಕಡಿಮೆಯಾಗುವದು. ಇದರಿಂದ ಖಾದೀ ಮಾರಾಟವು ಇಳಿಯುವದು. ಖಾದೀ ಮಾರಾಟವು ಇಳಿಯಿತೆಂದರೆ ಉತ್ಪತ್ತಿಯನ್ನು ಕಡಿಮೆ ಮಾಡಬೇಕಾಗುವದು. ಆದ್ದರಿಂದ ಈಗಿದ್ದ ನೂಲುಗರ ಸಂಖ್ಯೆಯನ್ನು ಕಡಿಮೆ ಮಾಡುವದು ಕ್ರಮಪ್ರಾಪ್ತವಾಗುವದು. ಅಂದರೆ, ಈಗ ಸಿಗುತ್ತಿದ್ದ ಮೂರು ದುಡ್ಡೂ ಎಷ್ಟೋ ನೂಲುಗರಿಗೆ ಸಿಗದಂತಾಗುವದೆಂದು ಬಹು ಜನರು ಈ ಹೊಸ ಯೋಜನೆಯ ಬಗ್ಗೆ ಶಂಕಿಸಹತ್ತಿದ್ದಾರೆ. ಅವರ ಶಂಕೆಯು ಅಂಶತಃ ನಿಜವಿದ್ದರೂ ತತ್ವತಃ ನಿಜವಾಗಲಾರದು. ಯಾಕಂದರೆ ಈಗ ನೂಲುಗರಿಗೆ ಸಿಗುತ್ತಿದ್ದ ಮೂರು ದುಡ್ಡಿನ ಬದಲು ಮೂರು ಪೈ ಮಾಡಿದರೆ ಖಾದಿಯ ಬೆಲೆಯು ಈಗಿನಕ್ಕಿಂತಲೂ ಕಡಿಮೆಯಾಗಿ ಖಾದೀ ಧಾರಿಗಳು ಹೆಚ್ಚಾಗುವರು, ಅದರಿಂದ ನೂಲುಗರ ಸಂಖ್ಯೆಯನ್ನು ಇನ್ನೂ ಬೆಳಿಸಲು ಬರುವದೆಂದು ತಿಳಿದರೆ ಹಾಗೆ ಮಾಡಲು ಬಹುದೆ? ಈ ರೀತಿಯಿಂದ ಉತ್ಪತ್ತಿಮಾಡಿದ ಖಾದಿಗೆ ಖಾದಿಯೆಂದು ಅನ್ನಬಹುದೊ? ಎಂದೂ ಇಲ್ಲ. ಯಾಕಂದರೆ ಖಾದಿಯ ಮುಖ್ಯೋದ್ದೇಶವೇನು? ಅದರಲ್ಲಿ ಅಡಕವಾದ ತತ್ವಗಳ್ಯಾವವು? ಇದನ್ನರಿತು ಖಾದಿಯ ಕಾರ್ಯವನ್ನು ಮಾಡಬೇಕು; ಬಡಜನರ ಅರೆಹೊಟ್ಟೆಗಳು ಪೂರಾ ತುಂಬಬೇಕು, ಅವರ ಆರ್ಥಿಕ ಸ್ಥಿತಿಯು ಸುಧಾರಿಸಬೇಕು ಎಂದೇ ಖಾದಿಯ ಉತ್ಪತ್ತಿಯಲ್ಲದೆ, ಬಡಜನರ ಅಡಚಣೆಯ ಲಾಭ ತೆಗೆದುಕೊಂಡು ಅವರನ್ನು ಪೂರಾ ಎಂಟು ತಾಸು ದುಡಿಯುವಂತೆ ಮಾಡಿ ಅವರಿಗೆ ಅರೆಹೊಟ್ಟೆಗೆ ಹಾಕುವದಕ್ಕಾಗಿ ಅಲ್ಲ. ಅನ್ಯರ ಅಡಚಣೆಯ ಲಾಭ ತೆಗೆದುಕೊಂಡು ನಾವು ಸುಖೋಪಭೋಗಪಡುವದು ಸ್ವದೇಶೀ ಅಲ್ಲ. ಇಷ್ಟೇ ಅಲ್ಲ, ಮನುಷ್ಯತ್ವದ ಲಕ್ಷಣವು ಕೂಡ ಅಲ್ಲವೆಂಬ ತತ್ವವನ್ನು ಅರಿತೇ ಮಹಾತ್ಮರು ಖಾದಿಯು ಅಳಿದರೂ ಅಡ್ಡಿಯಿಲ್ಲ, ಈಗಿದ್ದ ಪರಿಸ್ಥಿತಿಯಲ್ಲಿ ಉಳಿಯುವದು ಬೇಡವೆಂದು ಹೇಳಿದುದು.

ಖಾದಿಯನ್ನು ಧರಿಸುವದು ಬಡಜನರ ಸೇವೆಯ ಒಂದು ಚಿಹ್ನವಾಗಿದೆ. **ಮೂರು ದುಡ್ಡು ಕೊಟ್ಟು ಎಂಟು ತಾಸು ದುಡಿಸಿ ನಮ್ಮ ಬಟ್ಟೆಯನ್ನು ಪೂರೈಸಿಕೊಳ್ಳುವ ನಾವು ಬಡಜನರ ಸೇವೆಯನ್ನು ಮಾಡುವವನರೋ? ಅಥವಾ, ಮೂರೇ ದುಡ್ಡಿನಲ್ಲಿ ಎಂಟು ತಾಸು ದುಡಿದು ನಮ್ಮ ಮಾನ ಮುಚ್ಚುವ ಬಡಜನರು ನಮ್ಮ ಸೇವೆಯನ್ನು ಮಾಡುವರೋ?** ಎಂಬುದು ವಿಚಾರ ಮಾಡತಕ್ಕಂಥ ಮಾತಾಗಿದೆ. ಗಿರಣಿಯ ಬಟ್ಟೆಯಗೂಡ ಹೋರಾಡಲಿಕ್ಕೆ ಖಾದಿಯು ಉದ್ಭವಿಸಿಲ್ಲ. ಅಥವಾ **ಕೇವಲ ವ್ಯಾಪಾರಕ್ಕಾಗಿಯೂ** ಅದರ ಉತ್ಪತ್ತಿಯಲ್ಲ. ಆದರೆ ಸುಶಿಕ್ಷಿತರು, ಅಶಿಕ್ಷಿತರು; ಸಾವುಕಾರರು, ಸಾಲಗಾರರು; ಶ್ರೀಮಂತರು, ಬಡವರು; ಜವಿೂನುದಾರರು, ರೈತರು; ಪಟ್ಟಣಿಗರು, ಹಳ್ಳಿಗರು ಈ ಮುಂತಾದವರಲ್ಲಿದ್ದ ಒಂದು ಪವಿತ್ರತಮವಾದ, ಪ್ರೇಮಮಯವಾದ ಸಂಬಂಧದ ಹೆಗ್ಗುರುತಾಗಿದೆ. ಇಂಥ ಪವಿತ್ರತಮವಾದ, ಪ್ರೇಮಮಯವಾದ ಖಾದಿಗೂ ಬಡಜನರ ರಕ್ತದ ಗಂಜಿಯಿಂದ ತಯಾರಾದ, ಅನ್ಯಾಯದ, ಅನೀತಿಯ ಕುರುಹಾದ ಗಿರಣಿಯ ಬಟ್ಟೆಗೂ ಸರಿ ಹೋಲಿಸಬಹುದೇ? ಖಾದಿಯನ್ನು ಗಿರಣಿಯ ಬಟ್ಟೆಯಗೂಡ ಒರೆಹಚ್ಚುವದೆಂದರೆ, ಅದರಲ್ಲಿಯ ಪಾವಿತ್ರ್ಯವನ್ನು ಕಡಿಮೆ ಮಾಡಿದಂತೆಯೇ ಸರಿ. ಪ್ರೇಮಕ್ಕೆ ಬೆಲೆಯುಂಟೇ?

ನಿರುದ್ಯೋಗಿಗಳಾದ ಬಡಜನರನ್ನು ಉದ್ಯೋಗಿಗಳನ್ನಾಗಿ ಮಾಡಿ ಅವರಿಗೆ ಆರ್ಥಿಕ ಸ್ವಾತಂತ್ರ್ಯವನ್ನು ತಂದುಕೊಟ್ಟು ಅವರಲ್ಲಿಯ ಶೀಲವನ್ನೂ ಸ್ವಾಭಿಮಾನವನ್ನೂ ಜಾಗ್ರತಗೊಳಿಸುವ ಕಾರ್ಯವೂ ಈ ಹೊಸ ಯೋಜನೆಯಲ್ಲಿ ಅಡಕವಾಗಿದೆ. ಈ ಪ್ರಕಾರ ಸ್ವದೇಶಿಯು ವಿಕಾಸಹೊಂದುತ್ತಾ ಈಗ ಅದು ಪರಾಕಾಷ್ಠೆಯನ್ನು ಮುಟ್ಟಿದೆ.

ನಿಷ್ಕಾಮಂತರಿಲ್ಲದೆ ಯಾವುದೇ ಕಾರ್ಯವು ಚಿರನಾಗಿ, ಸ್ಥಿರವಾಗಿ ಬಾಳಲಾರದು, ನಿರಂತರವಾಗಿ ನೆಲೆಗೊಳ್ಳಲಾರದು. ಈಗಿನ ಖಾದೀಕಾರ್ಯವು ಇಷ್ಟು ವ್ಯಾಪಕವಾಗಿ ಬೆಳೆದಿದ್ದರೂ ಖಾದಿಯು ಬೇರೂರಿರುವದೆಂದು ಹೇಳಲು ಬರುವಂತಿಲ್ಲ. ಯಾಕಂದರೆ ಅ. ಭಾ. ಚ. ಸಂಘವು ಇಂದೇ ಮುರಿದರೆ ನಾಳಿಗೆ ಖಾದಿಯ ಸ್ಥಿತಿಯು ಏನಾಗುವದೆಂಬದನ್ನು ಎಲ್ಲರೂ ಅರಿತ ಮಾತಾಗಿದೆ. ಮತ್ತು ಅ. ಭಾ. ಚ. ಸಂಘವಾದರೂ ವಿಮಾ ಕಂಪೆನಿಯಂತೆ ತಾನು ಚಿರಸ್ಥಾಯಿಯಾಗಿ ಬಾಳಬೇಕೆಂಬ ಉದ್ದೇಶದಿಂದ ಹೊರಟಿಲ್ಲ. ಇಂದಿಲ್ಲ ನಾಳೆಯಾದರೂ ಅದರ ಅಂತಾರವು ಸಮಾಪ್ತಿಯಾಗಲೇ ಬೇಕು. ಇನ್ನು ಖಾದೀಕಾರ್ಯದಲ್ಲಿ ಪ್ರಾಮುಖ್ಯವಾಗಿ ಕೆಲಸ ಮಾಡತಕ್ಕವರೆಂದರೆ ಮೂರು ವರ್ಗದವರು, ನೂಲುಗರು ನೇಕಾರರು ಮತ್ತು ಇವರಿಗೆ ಸರಿಯಾಗಿ ಅನುಕೂಲತೆಗಳನ್ನು ಒದಗಿಸಿಕೊಡುವಂಥ ಕಾರ್ಯಕರ್ತರು. ನೂಲುಗರು ಮತ್ತು ನೇಕಾರರಿಗೆ ಇದೊಂದು ವ್ಯಾಪಾರದಂತಿದೆಯೇ ಹೊರತು, ತಮ್ಮ ಏಳಿಗೆಯ ಸಲುವಾಗಿ ನಡೆದ ಕಾರ್ಯವೆಂದು ಇನ್ನೂ ಅವರ ಮನವರಿಕೆಯಾಗಿಲ್ಲ. ಅ. ಭಾ. ಚ. ಸಂಘವು ಇಂದು ಬಂದಾದರೆ ಅವರು ನಾಳೆ ಬೇರೊಂದು ಉದ್ಯೋಗವನ್ನು ಕೈಕ್ಕೊಳ್ಳುತ್ತಾರೆ, ಇಲ್ಲವೆ ಮನೆಯಲ್ಲಿ ಕೈ ಮುಚ್ಚಿ ಕುಳಿತುಕೊಳ್ಳುತ್ತಾರೆ. ಇನ್ನು ಕಾರ್ಯಕರ್ತರ ವಿಚಾರ. ಅವರಲ್ಲಿಯೂ ಕೂಡ ನೂರಕ್ಕೆ ಐವರಾದರೂ ನಿಷ್ಕಾಮಂತರು ಸಿಗುವದು ದುರ್ಲಭ. ಖಾದಿಯ ಕಾರ್ಯಕರ್ತರು ನೂಲುಗರಷ್ಟೇ ಪಗಾರವನ್ನು ತೆಗೆದುಕೊಂಡು ಕಾರ್ಯಮಾಡೇವೆಂಬುವಷ್ಟು ನಿಸ್ಪೃಯುಳ್ಳವರಾಗದ ವಿನಃ ಖಾದಿಯು ಬೇರೂರಿದಂತಾಗಲಿಲ್ಲ. ಈ ಮಾತು ಇಂದಿಲ್ಲ ನಾಳೆಯಾದರೂ ಮಹಾತ್ಮರ ಬಾಯಿಯಿಂದ ಹೊರಬೀಳದೆ ಇರಲಾರದು.

ಸಾರಾಂಶರೂಪದಿಂದ ಹೇಳುವದೆಂದರೆ, ಈ ಹೊಸ ಯೋಜನೆಯು ಪೂರ್ಣವಾಗಿ ಕೃತಿಯಲ್ಲಿ ಬಂದರೆ ಸಮಾನತೆ, ಬಂಧುಭಾವ, ಮತ್ತು ಸ್ವತಂತ್ರತೆ ಇವು ಜನತೆಯಲ್ಲಿ ನೆಲೆಗೊಳ್ಳುವವು. ಖಾದಿಯಿಂದಲೇ ಸ್ವರಾಜ್ಯವೆಂದು ಮಹಾತ್ಮರು ಹೇಳುವ ಮಾತಿನ ಅರ್ಥವಾದರೂ ಇದೇ. ಸಮಾನತೆ, ಬಂಧುಭಾವ, ಮತ್ತು ಸ್ವಾತಂತ್ರ್ಯಪ್ರಿಯತೆ ಇವು ಜನರ ಸ್ವಭಾವದಲ್ಲಿ ಬೇರೆಯಾದ ಹೊರತು ಸ್ವರಾಜ್ಯ ಸಿಗುವದು ದುರ್ಲಭ. ಇವೆಲ್ಲ ಗುಣಗಳು ನೆಲೆಗೊಳ್ಳಬೇಕಾದರೆ ಈಗ ಖಾದಿಯ ಹೊರತು ಬೇರೊಂದು ತರುಣೋಪಾಯವಿಲ್ಲ. ಇವನ್ನರಿತೇ ಕಾಂಗ್ರೆಸು ಖಾದಿಗೆ ಇಷ್ಟು ಪ್ರತಿಷ್ಠೆಯನ್ನು ಕೊಟ್ಟುದು. ಮತ್ತು ಕಾಂಗ್ರೆಸದಲ್ಲಿ ಖಾದಿಗೆ ಸಿಕ್ಕ ಈ ಪ್ರತಿಷ್ಠೆಯು ದಿನೇದಿನೇ ವೃದ್ಧಿಂಗತವಾಗುವದಲ್ಲದೆ ಎಂದೂ ಕಡಿಮೆಯಾಗಲಾರದು.

**Guaranteed**
**Hygienic Rubber Goods**
(PROPHYLACTIC)
Of superior quality. Dozen Rs. 3/12. Six annas postage stamps will get you one as sample.
**K. Agency,**
(Dept. C),
MANGALORE No. 13.



ಎಷ್ಟೊಂದು ಆಕರ್ಷಕವಾಗಿಯೂ, ಸೊಗಸಾಗಿಯೂ, ಅನುಪಮವಾಗಿಯೂ ಈ 'ವೆಸ್ಟ್ ಎಂಡ್' ವಾಚುಗಳಿವೆ!

ಮತ್ತು ಈಗಿನ ಅವುಗಳ ಧಾರಣೆಯಾಗಿ ತಗ್ಗಿದ ಕ್ರಯಗಳಲ್ಲಾದರೂ ಅವುಗಳ ಬೆಲೆಯೇನು!!

ಮೇಲಿನದಕ್ಕೂ ಕೆಳಗಿನದಕ್ಕೂ ಒಂದೇ ಕ್ರಯ.

SQUARE "D" (Middle)

| | | |
|---|---|---|
| 9 ಕ್ಯಾರಟ್ ಭಂಗಾರದಕ್ಕೆ | . | ರೂ. 65 |
| 14 ಕ್ಯಾರಟ್ ಭಂಗಾರದಕ್ಕೆ | . | ,, 82 |
| 18 ಕ್ಯಾರಟ್ ಭಂಗಾರದಕ್ಕೆ | . | ,, 100 |

SQUARE "B" AND SQUARE "F"

| | | |
|---|---|---|
| ಸ್ಪಲಿಂಗ್ ಬೆಳ್ಳಿಯದಕ್ಕೆ | . | ರೂ. 32 |
| ರೋಲ್ಡ್‌ಗೋಲ್ಡಿನದಕ್ಕೆ | . | ,, 35 |
| 9 ಕ್ಯಾರಟ್ ಭಂಗಾರದಕ್ಕೆ | . | ,, 60 |
| 18 ಕ್ಯಾರಟ್ ಭಂಗಾರದಕ್ಕೆ | . | ,, 90 |

ದೊಡ್ಡದಾದ ಉಚಿತ ಕೆಟಲಾಗಿಗೆ ಬರೆಯಿರಿ.

ವೆಸ್ಟ್ ಎಂಡ್ ವಾಚ್ ಕೊ., ಮುಂಬಾಯಿ ಮತ್ತು ಕಲ್ಕತ್ತಾ.

**WEST END WATCH Co.**
BOMBAY 97 CALCUTTA

ರಸಕರ್ಪೂರವಿಲ್ಲದೆ

## ನಿಮ್ಮ ಯಕೃತ್ತಿನ ಪಿತ್ತರಸವನ್ನು ಎಚ್ಚರಗೊಳಿಸಿರಿ.

ಆಗ ನೀವು ಒಂದು ಬಸ್ಸನ್ನಾದರೂ ದೂಡಬಲ್ಲೆವೆಂಬ ಅನುಭವ ಪಡೆದು, ನಿಮ್ಮ ಹಾಸಿಗೆಯಿಂದ ಹಾರುವಂತಾಗುವುದು.

ನಿಮ್ಮಲ್ಲಿ ಸಿಡುಕತನವೂ, ಜಿಗುಪ್ಸೆಯೂ, ಕಂಡು ಬಂದರೆ, ಪುಪಂಚವು ನಿಸ್ಸಾರವಾಗಿ ತೋರಿದರೆ, ಧಾರಾಳವಾಗಿ ಲವಣಗಳನ್ನೂ, ಪ್ರವಸಾಧಕಗಳನ್ನೂ, ಅಸಾರ್ಥಕವಾದ ಪಾನೀಯಗಳನ್ನೂ ರುಚಿಕರವಾದ ಭೇದಿಯ ಔಷಧಗಳನ್ನೂ ಅಸಹ್ಯವಾದ ಜುಲಾಬಿನ ಮದ್ದುಗಳನ್ನೂ ಸೇವಿಸಿ, ಅವುಗಳು ನಿಮ್ಮನ್ನು ಸುಖಿಗಳನ್ನಾಗಿಯೂ ಉತ್ಸಾಹಿಗಳನ್ನಾಗಿಯೂ ಮಾಡುತ್ತವೆಂದೂ, ನವಶಕ್ತಿಯನ್ನು ತುಂಬುತ್ತಿವೆ ಎಂದೂ ತಿಳಿಯಬೇಡಿ.

ಏಕೆಂದರೆ ಅವು ನಿಮ್ಮನ್ನು ಹಾಗೆ ಮಾಡಲಾರವು. ಅವು ನಿಮ್ಮ ಕರುಳುಗಳನ್ನು ಮಾತ್ರ ಸಡಲಿಸಬಲ್ಲವು. ಆದರೆ ಅಷ್ಟು ಮಾತ್ರದಿಂದಲೇ ಇದರ ಮೂಲ ಮುರಿಯುವುದಿಲ್ಲ. ನಿಮ್ಮ ಜಿಗುಪ್ಸೆಗೆ ಮುಖ್ಯ ಕಾರಣವೆಂದರೆ ನಿಮ್ಮ ಯಕೃತ್ತ್ಯ. ಅದು ನಿತ್ಯವೂ ನಿಮ್ಮ ಕರುಳೊಳಗೆ ಎರಡು ಪೈಂಟ್ ಪಿತ್ತದ ದ್ರವವನ್ನು ಹೊರ ಸುರಿಯಬೇಕಾಗಿದೆ.

ಈ ಪಿತ್ತರಸವು ಸರಿಯಾಗಿ ಹೊರಸುರಿಯುವುದಿಲ್ಲವಾದರೆ, ನಿಮ್ಮ ಆಹಾರವು ಜೀರ್ಣವಾಗುವುದಿಲ್ಲ. ಅದು ಕರುಳಲ್ಲಿಯೇ ಹಾಳಾಗುತ್ತದೆ. ವಾಯುವು ನಿಮ್ಮ ಹೊಟ್ಟೆಯ ವರೆಗೆ ತುಂಬಿಕೊಳ್ಳುತ್ತದೆ. ನಿಮಗೆ ಸ್ಥೂಲವಾದ ಕೆಟ್ಟ ರುಚಿ ಇರುತ್ತದೆ. ನಿಮ್ಮ ಶ್ವಾಸೋಚ್ಛ್ವಾಸವು ಹೊಲಸಾಗಿರುತ್ತದೆ. ನಿಮ್ಮ ತಲೆ ನೋಯುತ್ತದೆ. ನಿಮಗೆ ಸ್ವಲ್ಪವೂ ದೇಹ ಶಾಂತಿ ಇಲ್ಲ. ನಿಮ್ಮ ಇಡೀ ಶರೀರವೇ ವಿಷಮಯವಾಗಿರುತ್ತದೆ.

ಸುಪ್ರಸಿದ್ಧವಾದ ಖಂಡಿತವಾಗಿಯೂ ಗುಣಕಾರಿಯಾದ ಕಾರ್ಟರರ ಚಿಕ್ಕ ಲಿವರ್ ಮಾತ್ರೆಗಳನ್ನು ಸೇವಿಸುವುದರಿಂದ, ಅವೆರಡು ಪೈಂಟ್ ಪಿತ್ತರಸವು ಸರಾಗವಾಗಿ ಹರಿಯುವಂತಾಗಿ, ನಿಮ್ಮ ಉತ್ಸಾಹವು ಹೆಚ್ಚುತ್ತದೆ. ಇದರಲ್ಲಿ ಆಶ್ಚರ್ಯಕರವಾದ, ಹಾನಿಕರವಲ್ಲದ, ಮೃದುವಾದ ಸಸ್ಯಾಹಾರವಿದೆ. ಸರಾಗವಾಗಿ ಪಿತ್ತರಸವನ್ನು ಹರಿಯುವಂತೆ ಇದು ಮಾಡುವಾಗ, ಆಶ್ಚರ್ಯತವೆನಿಸುತ್ತದೆ. ನಿಜವಾಗಿಯೂ ಆರೋಗ್ಯವನ್ನುಂಟು ಮಾಡುವ ಸುಪ್ರಸಿದ್ಧವಾದ ಈ ಕಾರ್ಟರರ ಗುಳಿಗೆಗಳನ್ನು ಉಪಯೋಗಿಸಿರಿ. ಪ್ಯಾಕೇಟಿನ ಮೇಲೆ 'ಕಾರ್ಟರ'ರ ಹೆಸರನ್ನು ಹುಡುಕಿರಿ.

For all kinds of
NEAT AND ACCURATE PRINTING,
please consult
**The Saraswathi Printing Works, Ltd.,**
MANGALORE, S. K.

## ಶಾಸ್ತ್ರೀಯ ಅಮೂಲ್ಯ ಔಷಧಗಳು.

**ಅಮೃತಾಕುಂಕುಮ ತೈಲ**:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟುದು. ಅಭ್ಯಂಗಕ್ಕೆ ಅನೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—6—0. ಅಂಚೆಯ ವೆಚ್ಚ ಬೇರೆ.

**ಚ್ಯವನಪ್ರಾಶ**:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂ. 3—12—0. ಅಂಚೆ ವೆಚ್ಚ ಬೇರೆ.

ಕಸ್ತೂರಿಭೈರವ! ದಶಮೂಲ ಸುಖಪ್ರದ ಔಷಧಿ
**ಬಾಣಂತಿಯರ ನವಜೀವನಕ್ಕೆ ನಂದನ ವನದಂತಿರುವುದು.**

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ಕಾಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತವಾಗುವುದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ ರೂ. 2-0-0. ಪೋಸ್ಟೇಜು ವಗೈರೆ ಬೇರೆ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ, ಮಂಗಳೂರು, ದ. ಕನ್ನಡ.

ಏಜಂಟರು—ಓರಿಯಂಟ್ ಡ್ರಗ್ಸ್ ಎಂಡ್ ಜನರಲ್
ಏಜನ್ಸಿ, ಸಂಕಿಗೆ ರೋಡ್,

## ಕೇರಳದ ಸಾಬೂನುಗಳು

ಪೂರ್ಣವಾಗಿಯೂ ಅವು ಸ್ವದೇಶಿಯಾದುದರಿಂದಲೇ ನೀವು ಉಪಯೋಗಿಸಿರೆನ್ನುವುದಲ್ಲ; ಅವೇ ಉತ್ಕೃಷ್ಟವಾದುವು. ಅವು ಉತ್ಕೃಷ್ಟವಾದ ಸಾಧನಗಳಿಂದ, ಯೋಗ್ಯರಾದ ಹಿಂದೀ ರಸಾಯನ ಶಾಸ್ತ್ರ ಪಂಡಿತರಿಂದ ಸಿದ್ಧವಾಗುತ್ತವೆ.

ಚೀಫ್ ರೆಪ್ರೆಸೆಂಟೇಟಿವ್:— ಆರ್. ಸಿ. ದಲಾಲ್, ಕಲ್ಲಿಕೋಟೆ.

## THE TRAVANCORE NATIONAL BANK, LIMITED.

INCORPORATED IN TRAVANCORE 1912.

MANGALORE BRANCH.

We have pleasure in announcing starting of a new chit Fund at our office from the 11th January 1936 consisting of:—

| | | | | | | | |
|---|---|---|---|---|---|---|---|
| A class tickets of Rs. 2000/— | each at Rs. | 80/— | per ticket per mensem. | | | | |
| B | ... ... | 1000/— | ... | 40/— | ... | ... | |
| C | ... ... | 500/— | ... | 20/— | ... | ... | |
| D | ... ... | 250/— | ... | 10/— | ... | ... | |

Remittances towards chit Fund are received at par at all our 41 branches and the agencies mentioned below:—

Bezwada: In Andhra Bank Ltd.,
Calcutta: In National City Bank of New York,
Colombo: In Indian Bank Ltd.,
Erode: In Indo Commercial Bank Ltd.,
Tuticorin: In Indian Bank Ltd.,
LONDON: MIDLAND BANK LTD.

*Please apply for copies of rules and application forms to the Mangalore Branch or any of the other branches.*

## ಅಶೋಕ್

ಬೋನಸ್
ಪ್ರತಿ ಸಾವಿರಕ್ಕೆ ರೂ. 10/-
ಅದೂ
ಪ್ರಥಮ ಮೂಲ್ಯನೇತನದಲ್ಲಿಯೇ.

ಜನತೆಯ ವಿಶ್ವಾಸದ ಪ್ರತ್ಯಕ್ಷ ನಿದರ್ಶನ.

ಗುಜರಾಥಿನ ಪ್ರಥಮ ಜೀವವಿಮಾ ಕಾರ್ಯಾಲಯವಾದ ಇದು ತನ್ನ ಪ್ರಥಮ ಮೂಲ್ಯವೇತನ ಕಾಲದಲ್ಲಿಯೇ, ನಾಲ್ಕು ವರ್ಷಗಳ ಅಂತ್ಯದೊಳಗೆ ಮಾತ್ರವೇ 'ಶಿಲುಕ'ನ್ನು ತೋರಿಸಲು ಸಮರ್ಥವಾಗಿದೆ.

ಡೈರೆಕ್ಟರರ ಮಂಡಲಿಯಲ್ಲಿ, ಡೆಲ್ಲಿಯಲ್ಲಿ ನಡೆದ ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ ಅಧಿವೇಶನದ ಮಾಜೀ ಪ್ರೆಸಿಡೆಂಟರಾದ ಸೇಟ್ ರಾಂಜೋದ್‌ಲಾಲ್, ಕಟ್ನಿಯ ಸಿಮೆಂಟ್ ಮತ್ತೂ ಇಂಡ್ಸ್ಟ್ರಿಯಲ್ ವರ್ಕ್ಸ್, ಲಿಮಿಟೆಡ್‌ನ ಶ್ರೀ. ಹರಿದಾಸ್ ಗೋಪಾಲ್ ದಾಸ್, ಅಹಮ್ಮದಾಬಾದ್ ಮುನಿಸಿಪಾಲಿಟಿಯ ಮಾಜೀ ಪ್ರೆಸಿಡೆಂಟ್ ಮತ್ತೂ ವೈಸ್ ಪ್ರೆಸಿಡೆಂಟರಾದ ಶ್ರೀ. ಜಿ. ವಿ. ಮಾವಲಂಕರ್, ಬೀ. ಏ., ಎಲ್. ಎಲ್. ಬಿ. ಇಂಥವರೂ ಇತರರೂ ಇದ್ದಾರೆ.

ಅಂಗೀಕೃತ ಏಜೆಂಟರುಗಳು ಬೇಕಾಗಿದ್ದಾರೆ. ಬರೆದುಕೊಳ್ಳಿ:

**THE ASHOK INSURACE CO, LTD.,**

9, Forbes Street, Fort, BOMBAY. Raikhad, AHMEDABAD.

ಅಥವಾ ಕೊಡಗು ಮತ್ತೂ ಮೈಸೂರು ಪ್ರಾಂತ್ಯಗಳ ಚೀಫ್ ಏಜಂಟ್ಸ್:—
ನಾಥ ಬ್ರದರ್ಸ್, 3, ಆಸ್ಪತ್ರೆಯ ರೋಡ್, ಬಳೇಪೇಟೆ, ಬೆಂಗಳೂರು ಸಿಟಿ.

## THE PIE-MONEY BANK LTD., MAIDAN ROAD, MANGALORE.

Undertakes all kinds of Banking Business. Current account at 2½% per annum.
Savings Bank Deposits at 4½% per annum.

**FIXED DEPOSITS.**

| | | | |
|---|---|---|---|
| For 2 years | 7% | For 6 months | 5 % |
| 1 year | 6% | 3 months | 4½% |

Auction Chit Funds ranging from Rs. 100—5000 run regularly on systematic lines.
Unique Banking facilities to Businessmen and interested Public.

*Apply for particulars:—*

K. P. GURU, *Managing Director.*

# ದಾದಾಭಾಯಿ ನವರೋಜಿಯವರು.

**[ಒಂದಲ್ಲ, ಮೂರು ಬಾರಿ, ನಮ್ಮ ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷಪದವಿಗೆ ಆರಿಸಲ್ಪಟ್ಟವರಿವರು. ಈ ಮಹನೀಯರ ಸಂಕ್ಷೇಪ ಜೀವನಚರಿತ್ರೆ ಇಲ್ಲಿದೆ.]**

'ಭಾರತವರ್ಷದ ವೃದ್ಧಪಿತಾಮಹ' ಎಂಬ ಬಿರುದಿನಿಂದ ಎಲ್ಲರಿಗೂ ಪರಿಚಿತರಾಗಿದ್ದ ಈ ಮಹಾಶಯರು ಇಪ್ಪತ್ತು ವರ್ಷಗಳ ಹಿಂದೆ ಆಗಿಹೋದರು. ಸಚ್ಚರಿತೆಯೇ ಇವರ ಜೀವನಧರ್ಮವು; ದೇಶಹಿತಕ್ಕಾಗಿಯೇ ಇವರ ಎಲ್ಲ ಕರ್ಮವು. ಬ್ರಿಟಿಷ ಪಾರ್ಲಿಮೆಂಟ ಸಭೆಯಲ್ಲಿ ಸೇರುವುದಕ್ಕೂ, ಅಲ್ಲಿದ್ದು ಸ್ವದೇಶದ ಅಭ್ಯುದಯದ ಚಿಂತನಕ್ಕಾಗಿ ದೇಹವನ್ನು ಸವೆಯುವುದಕ್ಕೂ ಇವರೇ ಮೊದಲನೆ ಭಾರತೀಯರಾಗಿ ಈ ಬಿರುದಿನ ಮಹತ್ವವನ್ನು ಪಡೆದರು.

ಕ್ರಿ. ಶ. ೧೮೨೦ರಲ್ಲಿ ಮುಂಬಾಯಿಯ ಪಾರ್ಸಿ ವೈದಿಕ ಸಮಾಜದಲ್ಲಿ ಅಷ್ಟೇನೂ ಸಂಪನ್ನವಲ್ಲದೊಂದು ಕುಟುಂಬದಲ್ಲಿ ಇವರು ಜನ್ಮವೆತ್ತಿದರು. ಬಾಲ್ಯದಲ್ಲೇ ತಂದೆ ತೀರಿ ಹೋಗಿದ್ದುದರಿಂದ, ತಾಯಿಯೇ ಇವರ ಆರೈಕೆಯನ್ನು ನೋಡ ಬೇಕಾಯಿತು. ಈಕೆಯನ್ನು ವಿಶೇಷ ಭಕ್ತಿಯಿಂದ ಕಾಣುತ್ತ, ವೃದ್ಧರಾದಾಗಲೂ ನವರೋಜಿಯವರು 'ನನ್ನನ್ನು ಸ್ಥಿರಹಸ್ತದಿಂದ ಪಾಲಿಸಿದೀಕೆಯೆ, ಸ್ತ್ರೀಶಿಕ್ಷಣ ಮತ್ತು ಸಮಾಜಸುಧಾರಣೆಗಾಗಿ ನಾನು ಮಾಡಿದ್ದೆಲ್ಲ ಪೇಚಾಟಗಳಲ್ಲಿ ಹೃತ್ಪೂರ್ವಕವಾಗಿ ಸಹಾಯಮಾಡಿದುದರಿಂದ ತಾನೆ, ನನ್ನ ಇಂದಿನ ಸ್ಥಿತಿಯೆಲ್ಲಕ್ಕೂ ಮೂಲ ಕಾರಣಳಾಗಿದ್ದಳು' ಎನ್ನುತ್ತಿದ್ದರು.

ಬಾಲ್ಯದಲ್ಲಿ ದಾದಾನು ಸ್ಫುರದ್ರೂಪಿಯಾಗಿದ್ದು ಚೆಂಡಾಟದಲ್ಲೂ, ಗೆಳೆಯರಾದ ಸಹಪಾಠಿಗಳಿಗೆ ಕಥೆ ಹೇಳುವುದರಲ್ಲೂ, ಪ್ರವೀಣತೆ ಹೊಂದಿದ್ದನು. ಅವನ ಆಟಪಾಠಗಳ ಮೇಲೂ, ನಡೆನುಡಿಗಳ ಮೇಲೂ ತಾಯಿಯ ದೃಷ್ಟಿಯು ಬಲು ಚುರುಕಾಗಿಯೇ ಇದ್ದಿತ್ತು. ಅವನಿಗೆ ಸದ್ವರ್ತನೆ ಕಲಿಸಿ ತಿದ್ದಿ ತಂದವಳೂ ಅವನ ಬಾಯಿಯಿಂದ ಎಂದೂ ಅಲ್ಪ ಮಾತುಗಳು ಹೊರಡದಂತೆ ನುಣಿಕಲಿಸಿದವಳೂ ವಿಧವೆಯಾಗಿದ್ದ ಆ ತಾಯಿಯೇ.

ಅವನು ಧರ್ಮಾರ್ಥ ಶಿಕ್ಷಣ ಸಿಗುವ ಒಂದು ಪಾಠಶಾಲೆಯಲ್ಲಿ ಮೊದಲು ಸೇರಿದನು. ಅಲ್ಲಿ ಪಾಠ ಹೇಳಿಕೊಡುತ್ತಿದ್ದ ಇಬ್ಬರು ಉಪಾಧ್ಯಾಯರಲ್ಲಿ, ಒಬ್ಬರಿಗೆ ಕ್ರಮ ನಿಯಮಗಳೇನೂ ಇದ್ದಿಲ್ಲ, ಮತ್ತೊಬ್ಬರು ಅತಿ ಕಠಿನವಾದ ಶಾಸನವನ್ನಿಟ್ಟಿದ್ದರು. ಆದರೂ ದಾದಾನು ವೃಥಾ ಕಾಲಹರಣ ಮಾಡದೆ, ಸಹಪಾಠಿಗಳೊಡನೆ ಕಥೆ-ಚೆಂಡಾಟಗಳಲ್ಲೇ ನಿರತನಾಗಿದ್ದುದರಿಂದ, ಅವರ ಮೆಚ್ಚಿನವನಾಗಿ, ತನ್ನ ಶಾಲೆಯಲ್ಲಿ ಸುಲಭವಾಗಿ ನಾಯಕನಾದನು. ಇದರಿಂದ ಅವನಲ್ಲಿ ಉದ್ಯಮಶೀಲತೆಯೂ, ಆತ್ಮವಿಶ್ವಾಸವೂ ಉಂಟಾದುವು. ಪರೀಕ್ಷೆಗಳಲ್ಲಿ ಮೊದಲಿಗನಾಗಿ ಉತ್ತೀರ್ಣನಾಗಿ, ಬಹುಮಾನ ಪಡೆದನು. ಫಾರಸೀ ವೀರ ಪುರುಷರ ಇತಿಹಾಸವಾದ ಫಿರದೌಸಿ ಮಹಾಕವಿಯ 'ಷಹಾನಾಮೆ' ಎಂಬ ಕಾವ್ಯವನ್ನು ಪಾಠ ಮಾಡುತ್ತಲೂ ಧ್ಯಾನಿಸುತ್ತಲೂ ಇರುತಿದ್ದನು.

ಹೀಗೆ, ವಿದ್ಯಾರ್ಥಿವೇತನ ಪಡೆದು, ಮುಂದಣ ವಿದ್ಯಾಭ್ಯಾಸ ಸಾಗಲು, ಮುಂಬಾಯಿಯ ಎಲ್‌ಫಿನ್‌ಸ್ಟನ್ ಕೊಲೇಜಿನಿಂದ ಅತ್ಯುತ್ತಮನಾಗಿ ಶಿಕ್ಷಣ ಹೊಂದಿದ ಎಷ್ಟೋ ಮಹಾನುಭಾವರಲ್ಲಿ ಇವನೊಬ್ಬನಾಗಿ ಉತ್ತೀರ್ಣನಾಗಲು,—ಇಂಗ್ಲೆಂಡಿನಲ್ಲಿ ನ್ಯಾಯಶಾಸ್ತ್ರವನ್ನು ಕಲಿಯುವನಾದರೆ ಅರ್ಧ ಖರ್ಚನ್ನು ತಾವೇ ಕೊಡುವುದಾಗಿ ಆಗ ನ್ಯಾಯಾಧೀಶರಾಗಿದ್ದ ಸರ್ ಎಸ್ಕಿನ್ ಪೆರ್ರಿ ಸಾಹೇಬರು ಇವನಿಗೆ ತಿಳಿಸಿದರೂ, ಉಳಿದ ಖರ್ಚಿಗೆ ಧನಸಹಾಯ ದೊರೆಯದುದರಿಂದ, ಅದೇ ಕೊಲೆಜಿನಲ್ಲಿ ಸಹಾಯಕೋಪಾಧ್ಯಾಯನಾಗಿ ದಾದಾನು ಉಳಿದನು. ಮೇಲ್ತರಗತಿಯ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುತಿದ್ದಂತೆ, ತಾನೂ ಗಣಿತಶಾಸ್ತ್ರವನ್ನು ಅಭ್ಯಾಸಮಾಡಿ, ಪರೀಕ್ಷೆಯಲ್ಲಿ ಸ್ವರ್ಣಪದಕವನ್ನು ಬಹುಮಾನವಾಗಿ ಪಡೆದನು. ಮುಂದೆ ನಾಲ್ಕೇ ವರ್ಷಗಳಲ್ಲಿ ಗಣಿತಾಚಾರ್ಯನಾಗಿಯೂ ಭೌತಿಕ ಶಾಸ್ತ್ರ ಬೋಧಕನಾಗಿಯೂ, ಅದುವರೆಗೆ ಹಿಂದೀಯರಲ್ಲಿ ಯಾರಿಗೂ ದೊರೆತಿರದ ಶಿಕ್ಷಕ ಪದವಿಯನ್ನು ತಾನೇ ಪಡೆದು ಎಲ್ಲರ ಶ್ಲಾಘನೆ ಸಂಪಾದಿಸಿದನು.

ನಂತರ ದಾದಾಭಾಯಿ ನವರೋಜಿಯವರೆಂದರೆ, ಹೊಸ ಸಂಘ, ಹೊಸ ಸಮಿತಿಗಳನ್ನು ಸ್ಥಾಪಿಸುವುದರಲ್ಲಿ ಮುಂದಾಳಾದರು. ಬಾಲಿಕೆಯರಿಗೊಂದು ಪಾಠಶಾಲೆ, ಸಾಹಿತ್ಯ ವಿಜ್ಞಾನ ಸಂಘ, ವ್ಯಾಯಾಮ ಮಂಡಲ, ವಿಧವಾ ವಿವಾಹ ಸಂಘ, ವಸ್ತುಪ್ರದರ್ಶನಾಲಯ, ಗುಜರಾಥೀ ಸಾಪ್ತಾಹಿಕ ಪತ್ರಿಕೆ ಎಂಬಿವೇ ಮೊದಲಾದುವು ಆ ಕಾಲದಲ್ಲಿ ನವರೋಜಿಯವರು ಕೈಕೊಂಡ ಚಟುವಟಿಕೆಗಳಲ್ಲಿ ಕೆಲವು.

ಇಪ್ಪರಲ್ಲಿ ಒಂದು ವಾಣಿಜ್ಯ ಸಂಘವು ಇವರನ್ನು ತಮ್ಮ ಪಾಲುಗಾರನಾಗುವಂತೆ ಪ್ರೋತ್ಸಾಹಿಸಿ, ಲಂಡನ್ ನಗರದ ಶಾಖೆಗೆ ಕಳುಹಿಕೊಡಲು, ಆಲ್ಲಿ ಬ್ರಿಟಿಷರಿಗೂ ಹಿಂದೀಯರಿಗೂ ಸೌಹಾರ್ದವೂ ಪರಸ್ಪರವಾದ ತಿಳಿವಳಿಕೆಯೂ ಬೆಳೆದು ಹರಡುವ ಹಾಗೆ ಇವರು 'ಲಂಡನ್ ಇಂಡಿಯಾ ಸೊಸಾಯಿಟಿ'ಯನ್ನೂ 'ಈಸ್ಟ್ ಇಂಡಿಯಾ ಎಸೊಸಿಯೇಶನ್'ನ್ನೂ ಸ್ಥಾಪಿಸಿದರು. ಆಗಲೆ ಲಂಡನ್ ವಿದ್ಯಾಪೀಠದಲ್ಲಿ ಇವರು ಗುಜರಾಥಿ ಪ್ರೊಫೆಸರರಾಗಿಯೂ ಉದ್ಯೋಗವನ್ನು ಕೈಕೊಂಡರು. ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಗೆ ಬ್ರಿಟಿಷರಂತೆಯೆ ಹಿಂದೀಯರೂ ಉಮೇದ್ವಾರರಾಗಬಹುದೆನ್ನುವ ಸೂತ್ರವು, ಇವರ ದೆಸೆಯಿಂದಾಗಿ, ಹಾಗೆ ತಿದ್ದುಪಡಿ ಹೊಂದಿತು.

೧೮೫೫ರಲ್ಲಿ ಇವರು ತಮ್ಮದೊಂದು ವ್ಯಾಪಾರ ಸಂಸ್ಥೆಯನ್ನು ಲಂಡನಿನಲ್ಲಿ ಸ್ಥಾಪಿಸಿದರು. ಮಿತ್ರನೊಬ್ಬನಿಗೆ ಮೂರು ಲಕ್ಷ ರೂಪಾಯಿಗಳನ್ನು ಎರವಾಗಿ ಕೊಟ್ಟಿರಲು, ಆತನು ಆ ಸಾಲವನ್ನು ಹಿಂತಿರುಗಿ ಕೊಡದಿದ್ದುದರಿಂದ, ಇವರ ವ್ಯಾಪಾರವೆಲ್ಲ ಕೆಟ್ಟುಹೋಯಿತು. ಆದರೆ, ಇವರ ಪ್ರಾಮಾಣಿಕತೆಯಲ್ಲಿ ಇವರ ಸಾಲಗಾರರಿಗೆ ವಿಶೇಷ ವಿಶ್ವಾಸವಿದ್ದುದರಿಂದ, ಇವರು ತಮ್ಮ ಅನುಕೂಲತೆಯಲ್ಲಿ ತಮ್ಮ ಸಾಲಗಳನ್ನು ಹಿಂದಕ್ಕೆ ತೆತ್ತರೆ ಸಾಕೆಂದು ಸಾಲಗಾರರು ಯಾರೂ ಇವರನ್ನು ಬಾಧಿಸಲಿಲ್ಲ. ಒಂದೇ ಕಾಸನ್ನೂ ಕಡಿಮೆಮಾಡದೆ ಎಲ್ಲ ಸಾಲಗಾರರಿಗೆ ಸಲ್ಲತಕ್ಕುದನ್ನೆಲ್ಲ ಇವರು ಕಾಲಕ್ರಮದಲ್ಲಿ ಸಲ್ಲಿಸಿಯೇ ಮುಗಿಸಿದರು. ಇದಾಗಿ ೧೮೬೫ರಲ್ಲಿ ಇವರು ಸ್ವದೇಶಕ್ಕೆ ಹಿಂತಿರುಗಲು, ಆಗ ಸರ್ ಫಿರೋಜ ಶಹ ಮೇಥಾರಂತಹ

ಸುಪ್ರಸಿದ್ಧ ವಕ್ತಾರರೇ ಅಧಿನಾಯಕರಾಗಿ ಮುಂಬಾಯಿ ನಿವಾಸಿಗಳು ಇವರಿಗೊಂದು ಹಣದ ಗಂಟಿನೊಡನೆ ಮಾನಪತ್ರವನ್ನೊಪ್ಪಿಸಿ ಸ್ವಾಗತ ಮಾಡಿಕೊಂಡರು. ಗಂಟಿನಲ್ಲಿದ್ದ ಹಣವನ್ನೆಲ್ಲ ಇವರು ಸಾರ್ವಜನಿಕ ಉಪಕಾರಗಳಿಗಾಗಿ ವ್ಯಯಿಸಿದರು.

ಕ್ರಿ. ಶ. ೧೮೭೪ರಲ್ಲಿ ಇವರು ಬಡೋದಾ ರಾಜ್ಯದ ದಿವಾನರಾಗಿ ಆ ರಾಜ್ಯವನ್ನು ಸುವ್ಯವಸ್ಥೆಗೆ ತಂದರು. ಮುಂದೆ ಹತ್ತು ವರ್ಷಗಳ ವರೆಗೆ ಮುಂಬಾಯಿ ನಗರಸಂಘದ ಸದಸ್ಯರಾಗಿ, ೧೮೮೫ರಲ್ಲಿ ಶಾಸನ ಸಭಾ ಸದಸ್ಯತೆಯನ್ನು ಹೊಂದಿ, ರಾಷ್ಟ್ರಸಭೆಯ ಪ್ರಥಮಾಧಿವೇಶನ ಕಾಲದಲ್ಲೇ ಬಹಳವಾಗಿ ಸಹಾಯಮಾಡಿದರು.

ಕ್ರಿ. ಶ. ೧೮೮೬ರಲ್ಲಿ ಲಂಡನಿಗೆ ತೆರಳಿ, ಅಲ್ಲಿನ ಪಾರ್ಲಿಮೆಂಟ್ ಸಭೆಗೆ ಸದಸ್ಯರಾಗಿ ಚುನಾವಣೆ ಹೊಂದಲು ಪ್ರಯತ್ನ ಮಾಡಿದರೂ ಅದು ವ್ಯರ್ಥವಾಯಿತು. ಮರುವರ್ಷ ಇವರು ಸ್ವದೇಶಕ್ಕೆ ಮರಳಿ, ರಾಷ್ಟ್ರಸಭೆಯ ದ್ವಿತೀಯಾಧಿವೇಶನ ಕಾಲದಲ್ಲಿ ಅಧ್ಯಕ್ಷತೆ ವಹಿಸಿ, ಹಾಗೆಯೇ ಇಂಗ್ಲೆಂಡಿಗೆ ತೆರಳಿ ಅಲ್ಲಿ ಐದು ವರ್ಷ ಸಾಧನೆ ನಡಿಸಿ ೧೮೯೨ರಲ್ಲಿ ಪಾರ್ಲಿಮೆಂಟಿನ ಮೆಂಬರರಾಗಿ ಚುನಾವಣೆ ಹೊಂದಿದರು. ಇವರು ಪಾರ್ಲಿಮೆಂಟಿನಲ್ಲಿ ಮಾಡಿದ ಮೊದಲನೆ ಭಾಷಣದಲ್ಲಿ,—'ಕೊಮನ್ಸ್ ಸಭೆಯಲ್ಲಿ ಹಿಂದೀಯನೊಬ್ಬನು ಸದಸ್ಯನಾಗಿ ಸ್ಥಾನ ಪಡೆದುದು ಇದೇ ಮೊದಲು. ಇದು ಭಾರತೇತಿಹಾಸದಲ್ಲಿಯೂ ಬ್ರಿಟಿಷ ಇತಿಹಾಸದಲ್ಲಿಯೂ ವಿಶೇಷವೆ. ಬ್ರಿಟಿಷರಲ್ಲಿರುವ ಸ್ವತಂತ್ರ ಬುದ್ಧಿಯೂ ನ್ಯಾಯಬುದ್ಧಿಯೂ ಇಂತಹ ಪರಿಣಾಮವನ್ನು ಉಂಟುಮಾಡಿತು. ಭಾರತವರ್ಷದ ಹೆಸರಲ್ಲಿ ಅವರನ್ನು ಇದಕ್ಕಾಗಿ ನಾನು ಹೃತ್ಪೂರ್ವಕವಾಗಿ ವಂದಿಸುತ್ತೇನೆ' ಎಂದು ಧನ್ಯವಾದಗಳನ್ನು ಅರ್ಪಿಸಿದರು. ಪಾರ್ಲಿಮೆಂಟಿನಲ್ಲಿ ತನ್ನ ದೇಶದ ಸಲಹೆಗಳನ್ನು ಸದಸ್ಯರ ಮುಂದಿಟ್ಟು ದೇಶಹಿತವನ್ನು ಸಾಧಿಸಿ, ಕಾರ್ಯ ನಿರ್ವಹಿಸಿ, ೧೮೯೫ರಲ್ಲಿ ಸ್ವದೇಶಕ್ಕೆ ಹಿಂದೆ ಬಂದರು.

ರಾಷ್ಟ್ರಸಭೆಯ ಮಹಾಧಿವೇಶನವು ಲಾಹೋರಿನಲ್ಲಿ ಜರುಗಿದಾಗ, ಇವರಿಗೇ ಇನ್ನೊಮ್ಮೆ ಅಧ್ಯಕ್ಷಪದವಿಯನ್ನೊಪ್ಪಿಸಿದರು. ಆಗಣ ದೇಶವತ್ಸಲರಲ್ಲಿ ಇವರೇ ಮೊದಲನೆಯವರೆಂದು ಇವರನ್ನು ಅಲ್ಲಿ ಸ್ವಾಗತೀಕರಿಸುವಾಗ, ಸಂಭ್ರಮದಲ್ಲಿ ನೆರೆದ ಜನಸ್ತೋಮವು ಇವರೇರಿದ್ದ ಬಂಡಿಯನ್ನು ಯುವಕರೇ ಎಳೆಯುತ್ತಿರುವುದನ್ನು ಕಾಣುವಂತಾಯಿತು. ರಾಜಾ ರಣಜಿತ ಸಿಂಗನ ಕಾಲವಿಂದೀಚೆಗೆ ಪಂಜಾಬಿನಲ್ಲಿ ಅಂತಹ ಮೆರವಣಿಗೆಗಳೇ ಆದುದಿಲ್ಲವೆಂದು ಪ್ರಸಿದ್ಧ ಇತಿಹಾಸ ಲೇಖಕರಾದ ಸರ್ ವಿಲ್ಲಿಯಮ್ ಹಂಟರರೇ ಬರೆದಿರುವರು.

೧೮೯೯ರಲ್ಲಿ ಆಗಣ ಪಾರ್ಲಿಮೆಂಟು ಸಭೆಯ ಅವಧಿಯು ಮುಗಿದುದು. ಇವರು ಮರಳಿ ಸದಸ್ಯರಾಗಿ ಚುನಾವಣೆ ಹೊಂದಬೇಕೆಂದು ಪ್ರಯತ್ನಿಸಿದುದು ನಿಷ್ಫಲವಾಯಿತು. ಅದರ ಮರುವರ್ಷವೇ, ಭಾರತೀಯ ಸರಕಾರದ ವೆಚ್ಚವನ್ನು ವಿಮರ್ಶೆ ಮಾಡಲು ನೇಮಕಹೊಂದಿದ ರಾಜಕೀಯ ಕಮಿಶನ್‌ನಲ್ಲಿ, ಭಾರತೀಯರಲ್ಲಿ ಮೊದಲನೆಯವರಾಗಿ ಇವರು ಸದಸ್ಯರಾದರು. ಹಿಂದೀಯರನ್ನು ಭೂಸೈನ್ಯಕ್ಕೂ ಜಲಸೈನ್ಯಕ್ಕೂ ಸೇರಿಸಿಕೊಳ್ಳಬೇಕೆಂದು ಇವರು ಬಹಳವಾಗಿ ಪ್ರಯತ್ನಿಸಿದರು. ಭಾರತೀಯ ಸಾಂಪತ್ತಿಕ ಸಮಸ್ಯೆಗಳನ್ನು ಕುರಿತಾಗಿ, ಇವರು ಬಹಳ ವಿಚಕ್ಷಣತೆಯಿಂದ ಪಾಂಡಿತ್ಯಪೂರ್ಣವಾದ ಲೇಖಗಳನ್ನು ಬರೆದರು. ೧೯೦೬ರಲ್ಲಿ ಇವರ ಲೇಖಗಳೂ ಭಾಷಣಗಳೂ ಪ್ರಕಟವಾದುವು. ಹೊಲ್ಲೆಂಡಿನಲ್ಲಿ ೧೯೦೫ರಲ್ಲಿ ಸೇರಿದ ಪ್ರಜಾಸತ್ತಾವಾದಿಗಳ ಮಹಾಸಮ್ಮೇಲನದಲ್ಲಿ ಇವರ ಭಾಷಣವು ವಿವೇಕ, ಶಾಂತತೆ, ನ್ಯಾಯ, ಸ್ವದೇಶಾನುರಾಗ, ಯಥಾರ್ಥತೆ, ಇತ್ಯಾದಿ ಸಲ್ಲಕ್ಷಣಗಳಿಂದ ಒಪ್ಪುತಿದ್ದಿತೆಂದು ಇವರು ಬಹಳ ಪ್ರಶಂಸೆಗೆ ಪಾತ್ರರಾದರು.

೧೯೦೬ರಲ್ಲಿ, ಕರ್ಜನ್ ಶ್ರೀಮಂತರು ಇಲ್ಲಿ ವೈಸ್ರಾಯರಾಗಿದ್ದಾಗ, ರಾಷ್ಟ್ರಸಭೆಯಲ್ಲಿ ಒಡಕು ತಲೆದೋರಿತು. ಆಗ ಇನ್ನೊಮ್ಮೆ, ರಾಷ್ಟ್ರಸಭೆಗೆ ಇವರೇ ಅಧ್ಯಕ್ಷರಾಗಿ, ಇತ್ತಂಡಗಳೂ ಒಮ್ಮನಸ್ಸಿನಿಂದ ಕೆಲಸ ಮಾಡುವ ಹಾಗೆ ಪೇಚಾಡಿದರು. ಮರುವರ್ಷ ಇವರು ಇಂಗ್ಲೆಂಡಿಗೆ ಪ್ರಯಾಣ ಮಾಡಿದರು. ಆಗ ಅಸೌಖ್ಯವು ತಲೆದೋರಲು, ಸ್ವದೇಶಕ್ಕೆ ಹಿಂತಿರುಗಿ, ಬೊಂಬಾಯಿಯ ಬಳಿ, ಕಡಲಿಗೆ ಸವಿಾಪವಾಗಿ, ವಾರ್ಸೋವಾ ಎಂಬಲ್ಲಿ, ಚಿಕ್ಕದೊಂದು ಕುಟೀರದಲ್ಲಿ ನಿವಾಸವಮಾಡಿದರು. ಬೊಂಬಾಯಿ ವಿಶ್ವವಿದ್ಯಾಲಯದವರು ಇವರನ್ನು, ಸರ್ವೋಚ್ಚವಾದ ಎಲ್. ಎಲ್. ಡಿ. ಪದವಿಯನ್ನು ಅರ್ಪಿಸಿ, ಬಹುಮಾನಿಸಿದರು; ಆಗ ತಾನೆ ಇವರ ವಯಸ್ಸು ೯೦ನ್ನು ವಿಾರಿದ್ದಿತು. ೧೯೧೭ರಲ್ಲಿ ಇವರ ಅವಸಾನವು; ಆಗ ಭಾರತಮಾತೆಗೆ ಸಹಿಸಲಾರದಷ್ಟು ಶೋಕವುಂಟಾಯಿತು.

ಹೀಗೆ ಭಾರತವರ್ಷದಲ್ಲಿ ಜನ್ಮವೆತ್ತಿದವರೊಳಗೆ ಅತಿ ಪರಿಶ್ರಮದಿಂದಲೂ ಬೇರೆಬೇರೆ ವಿಧಾನಗಳಿಂದಲೂ ದೇಶಸೇವೆ ಮಾಡಿದವರಲ್ಲೊಬ್ಬನು ಮಡಿದನು. ರಾನಡೆ, ಗೋಖಲೆ ಮೊದಲಾದ ಮಹಾಪ್ರತಿಭಾವಂತರು ಆ ಕಾಲದಲ್ಲಿ ಸುತ್ತಲೂ ಮೆರೆಯುತಿದ್ದರೂ, ಇವರೇ ಅವರೊಳಗೆ ಅಗ್ರಗಣ್ಯರಾಗಿದ್ದರು. ಇತರ ನಾಯಕರ ಕಾರ್ಯಗಳು ಸುಲಭವಾಗುವಂತೆ ಇವರು ಮುನ್ನಡೆಯಲು ದಾರಿಯನ್ನು ಅಣಿಮಾಡಿಕೊಟ್ಟರು. ಅಂಕೆ ಸಂಖ್ಯೆಗಳ ಹಿಂಬಲವಿಲ್ಲದೆ, ಇವರ ಬಾಯಿಯಿಂದ ಒಂದು ಮಾತೂ ಹೊರಡುತಿರಲಿಲ್ಲ; ಆಧಾರಗಳನ್ನು ಕೊಟ್ಟೇ ಇವರು ಯಾವಾಗಲೂ ತಮ್ಮ ಹೇಳಿಕೆಗಳನ್ನು ಮುಂದಿಡುತಿದ್ದರು. ನೂರಾರು ವರ್ಷಗಳ ತರುವಾಯದಲ್ಲಿ ನಮ್ಮ ದೇಶದ ಸ್ಥಿತಿಯು ಹೇಗಾಗಬೇಕೋ, ಅದಕ್ಕಾಗಿ ಆಗಣಿಂದಲೇ ಸಾಧನೆಮಾಡುವ ದೂರದರ್ಶಿತ್ವವು ಅವರಲ್ಲಿದ್ದಿತು. ಯಾವ ಕೆಲಸಕ್ಕೆ ಕೈಹಚ್ಚಿದರೂ, ಅವರು ತಮ್ಮ ಸಂಪೂರ್ಣಶಕ್ತಿಯಿಂದಲೇ ಅದನ್ನು ಮಾಡುವರು. ಸಿಂಹದಂತೆ ಧೀರರೂ, ಹೂವಿನಂತೆ ಕೋಮಲ ಚಿತ್ತರೂ, ದೇಶಭಕ್ತರಂತೆ ಸ್ವಾರ್ಥರಹಿತರೂ, ದೇವತೆಗಳಂತೆ ಮಹಾಪುರುಷರೂ, ದೇವಸಾವಿಾಪ್ಯವನ್ನು ಹೊಂದಿದವರಂತೆ ಪವಿತ್ರಾತ್ಮರೂ ಆಗಿದ್ದರು.

—K.


COORG FOREST DEPARTMENT.

**SANDALWOOD AUCTION.**

Mercara, the 5th December, 1935.

71 tons, more or less, of cleaned sandalwood will be sold by public auction at Fraserpet Koti on Thursday the 23rd January, 1936 at 1 P. M.

For further particulars please apply to the Chief Forest Officer, Coorg, Mercara.

3, 24-12

# ರಾಷ್ಟ್ರೀಯ ಚಳವಳಿಯೂ ಅದರ ಯಶಾಪಯಶಗಳೂ.

(ಬರೆದವನು:—ಅಜ್ಞಾತ, ಪಾಚ್ಚಾಪುರ.)

ಖಂಡಿಸದೆ ಕರುಣವನು ದಂಡಿಸದೆ ದೇಹವನು ।
ಉಂಡಾಡಿ ಸ್ವರ್ಗ ಬೇಡಿದರೆ ಆಲ್ಲೀನು ರಂಡೆಯಾಳುವಳೇ?
ಸರ್ವಜ್ಞ ॥

ರಾಷ್ಟ್ರೀಯ ಮಹಾಸಭೆಯು ಸ್ಥಾಪನೆಯಾಗಿ ಇಂದಿಗೆ ಸರಿಯಾಗಿ ೫೦ ವರುಷಗಳು ತುಂಬಿದವು. ಈ ಹೊತ್ತಿನ ಸುವರ್ಣೋತ್ಸವದ ಸುವರ್ಣಸಂಧಿಯಲ್ಲಿ ನಾವೆಲ್ಲ ಯುವಕರು ಭಾರತ ಮಾತೆಯ ಸ್ವಾತಂತ್ರ್ಯಸಂಪಾದನೆಗಾಗಿ ಪ್ರಯತ್ನಪಡಲಿಕ್ಕೆ ಬೇಕು; ಆದರೆ ಅನೇಕ ಯುವಕರು ವೃದ್ಧರಂತೆ ಜೋಲುಮೋರೆ ಮಾಡಿಕೊಂಡು 'ನಮ್ಮ ಕೈಯಿಂದಾಗುವದೇನು?' ಎಂದು ಉದಾಸೀನರಾಗಿ ಕುಳಿತಿರುವರು. ಕೆಲವು ವೃದ್ಧರು ಇದಕ್ಕೆ ವಿರುದ್ಧವಾಗಿ ಹೊಸ ಹುರುಪಿನಿಂದ ಯೆುವಕರನ್ನೂ ನಾಚಿಸುವಂತೆ ಕಷ್ಟ ಬಿಡುತ್ತ ಕಾರ್ಯಪ್ರವೃತ್ತರಾಗಿದ್ದಾರೆ. ಯುವಕರು ಹೀಗೆ ಹತಾಶರಾಗಲು ಕಾರಣವೇನಾದರೂ ಉಂಟೋ ಎಂಬದನ್ನು ನೋಡಲಿಕ್ಕೆ ಬೇಕು. ಕಳೆದ ಸತ್ಯಾಗ್ರಹ ಸಮರದಲ್ಲಿ ರಾಷ್ಟ್ರೀಯ ಸಭೆಗೆ ದೊರೆತ ಅಪಜಯವೇ ಅದಕ್ಕೆ ಕಾರಣವೆಂದು ಅನೇಕರು ಪ್ರತಿಪಾದಿಸುವದುಂಟು.

ನಿಃಶಸ್ತ್ರವೂ ನಿರ್ಧನವೂ ಆದ ರಾಷ್ಟ್ರೀಯ ಮಹಾ ಸಭೆಯು ಹಿಂದೀಯರ ಸರ್ವಾಂಗೀಣ ಉನ್ನತಿಗಾಗಿ ಸಮೃದ್ಧ ಸರಕಾರದ ಗೂಡ ಕಾದುತ್ತಿರುವದು. ಎರಡೂ ಪಕ್ಷಗಳ ಬಲಾಬಲಗಳನ್ನು ಪರೀಕ್ಷಿಸುವವನಿಗೆ ಕೇವಲ ೫೦ ವರುಷಗಳಲ್ಲಿ—ಅಲ್ಲ ೨೫ ವರುಷಗಳಲ್ಲಿ ರಾಷ್ಟ್ರೀಯ ಸಭೆಯು ಹೊಂದಿದ ಜಯವನ್ನು ಅಥವಾ ಸ್ಥಿತಿಯನ್ನು ಕಂಡು ಸಾನಂದಾಶ್ಚರ್ಯವಾಗದಿರದು.

ಕಾಂಗ್ರೆಸು ಸ್ಥಾಪನೆಯಾದದ್ದು ಸನ್ ೧೮೮೫ರಲ್ಲಿ. ಆದರೆ ಅದರ ಮೊದಲಿನ ೨೦ ವರುಷಗಳು ಬಾಲಕನಂತೆ ತೊದಲು ನುಡಿಗಳನ್ನು ಆಡುವದರಲ್ಲಿಯೇ ಕಳೆದುಹೋದುವು. ಹೆಸರಿಗೆ ಮಾತ್ರ ಕಾಂಗ್ರೆಸು. ಕಾರ್ಯದ ದೃಷ್ಟಿಯಿಂದ ಶೂನ್ಯ. ಹೀಗೆ ಅದರ ಸ್ಥಿತಿಯಾಗಿತ್ತು. ಈ ಇಪ್ಪತ್ತು ವರುಷಗಳ ಚಳವಳಿಯೆಂದರೆ ಅರ್ಜಿ, ವಿನಂತಿಯ ಕಾಲ. ಆರಾಮ ಕುರ್ಚಿಯ ರಾಜಕಾರಣ. ತನ್ನ ಮೈಗೆ ಬಿಸಿ ಹತ್ತದಂತೆ ಪ್ರತಿಯೊಬ್ಬನ ದೇಶಭಕ್ತಿ. ಅಂದ ಮೇಲೆ ಆಗುವದೇ ಆಯಿತು. ಈ ಇಪ್ಪತ್ತು ವರುಷಗಳ ಕಾಲವು ಹೀಗೆ ಬಹುತರವಾಗಿ ವ್ಯರ್ಥ ಹೋದ ಮೇಲೆ ಲೋಕಮಾನ್ಯ ತಿಲಕರು ತಮ್ಮ ಅದ್ಭುತ ಕಾರ್ಯಶಕ್ತಿಯಿಂದಲೂ ಅಸಾಧಾರಣ ಬುದ್ಧಿಮತ್ತೆಯಿಂದಲೂ ಅಪ್ರತಿಹತವಾದ ಧೈರ್ಯದಿಂದಲೂ ಅತುಲನೀಯ ಸ್ವಾರ್ಥತ್ಯಾಗದಿಂದಲೂ ರಾಷ್ಟ್ರೀಯ ಸಭೆಯ ಸೂತ್ರಗಳನ್ನೆಲ್ಲ ತಮ್ಮ ಜಹಾಲ ಪಕ್ಷದ ಕೈವಶ ಮಾಡಿಕೊಂಡು ಕೇವಲ ಗೊಂಬೆಗಳಂತಿದ್ದ ಮವಾಳರನ್ನು ಹೊರಗೆ ದೂಡಿ ಕೃತಾರ್ಥರಾದರೆನ್ನಬಹುದು.

ಆಗ ಆತ್ಮಸ್ವರೂಪವನ್ನೇ ಮರೆತು ಹೋದ ಕುರಿಗಳ ಹಿಂಡಿನಲ್ಲಿ ಬೆಳೆದ ಸಿಂಹದಂತೆ ಭಾರತ ಕೇಸರಿಗಳ ಸ್ಥಿತಿಯಾಗಿತ್ತು. ಇಂತಹ ಕಾಲದಲ್ಲಿ ಅವರು ಸಿಂಹಗರ್ಜನ ಮಾಡುತ್ತಾ ಮಲಗಿದ ಸಿಂಹಗಳನ್ನು ಎಚ್ಚರಿಸ ಹತ್ತಿದರು. ಸ್ವದೇಶೀ ಚಳವಳಿ, ರಾಷ್ಟ್ರೀಯ ಶಿಕ್ಷಣ, ಬಹಿಷ್ಕಾರ ಮುಂತಾದ ವಿಷಯಗಳನ್ನು ಕೇಸರೀ ಪತ್ರದಲ್ಲಿ ಬರೆಯುತ್ತಾ ಆಂದೋಲನಗಳನ್ನು ಹೂಡ ಹತ್ತಿದರು. ವಂಗ ಭಂಗದ ಚಳವಳಿಯದಂತೂ ದೇಶದ ತುಂಬ 'ಸ್ವರಾಜ್ಯ' 'ವಂದೇ ಮಾತರಂ' ಎಂಬ ಶಬ್ದಗಳು ದುನುದುಮಿಸಹತ್ತಿದವು. 'ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು ಇದೆ, ಮತ್ತೂ ಅದನ್ನು ನಾನು ಗಳಿಸಿಯೇ ತೀರುವವನು' ಎಂಬ ಮಹಾಮಂತ್ರವನ್ನು ಜನರಿಂದ ಉಚ್ಚರಿಸ ಹತ್ತಿದರು. ಲೋಕಮಾನ್ಯರಿಗೆ ಆರು ವರುಷದ ಉಗ್ರ ಶಿಕ್ಷೆಯನ್ನು ಅನುಭವಿಸಬೇಕಾಯಿತು. ಇದರಿಂದ ಕೂಡಲೇ ದೇಶದ ತುಂಬ ನೈರಾಶ್ಯದ ರಾಜ್ಯವು ಉಂಟಾಯಿತು. ಯಾರೂ ಚಳವಳಿಯ ಹೆಸರು ತೆಗೆಯಲೊಲ್ಲರು. ಹೀಗಾಗಿ ಎಲ್ಲ ಕಡೆಗೆ ಒಮ್ಮೆಲೆ ಕತ್ತಲೆಯು ಕವಿಯಿತು. ಕೂಡಲೇ ಗೂಗೆಗಳು ಹೊರಬಿದ್ದು—'ನೋಡಿರಿ, ನಾವು ಮೊದಲಿನಿಂದ ಹೇಳುತ್ತಿದ್ದಿಲ್ಲವೋ ಈ ಪ್ರಚಂಡ ಸರಕಾರದ ವಿರುದ್ಧ ಜಗಳಾಡಬೇಡಿರೆಂದು! ಕುರಿಗಳೆಂದಾದರೂ ಹುಲಿಯ ಮೇಲೆ ಏರಿ ಹೋಗಬಹುದೋ? ನೋಡಿದಿರೋ ಸರಕಾರದ ಪ್ರತಾಪವನ್ನು, ಇನ್ನಾದರೂ ಬುದ್ಧಿಗಲಿಯಿರಿ. ಪಾಪ, ತಿಳಿಯದೆ ಆ ಹುಚ್ಚ ತಿಲಕನು ಸರಕಾರದಗೂಡ ಬಡಿದಾಡಿ ಈ ಫಲವನ್ನು ಉಣ್ಣಬೇಕಾಯಿತು' ಎಂದು ಕೂಗಹತ್ತಿದವು. ಸುಶಿಕ್ಷಿತರೂ ಚಳವಳಿಯ ಬಗ್ಗೆ ಸಹಾನುಭೂತಿಯನ್ನು ತೋರಿಸುತ್ತಿದ್ದವರೂ ಸಹ ದಿಕ್ಕುಗಾಣದೆ 'ಇನ್ನೇನು ಗತಿ, ಇನ್ನು ಎಂತಹ ಕಾಲ ಬರುವದೋ ದೇವರಿಗ್ಗೇ ಗೊತ್ತು. ಇನ್ನೆಂದಾದರೂ ಇಂತಹ ಚಳವಳಿಯಾಗುವದು ಶಕ್ಯವಿದೆಯೋ? ಖಂಡಿತವಾಗಿಯೂ ಶಕ್ಯವಿಲ್ಲ' ಅಂತ ನಿರಾಶೆಯ ಉದ್ಗಾರಗಳನ್ನು ತೆಗೆಯುತ್ತ ಉಸುರ್ಗರೆಯಹತ್ತಿದರು. ಮತ್ತು ಬಾಳುವೆಯೇ ತಮ್ಮ ಗುರಿಯೆಂದು ತಿಳಿದು ಸಂಸಾರದಲ್ಲಿ ಮುಳುಗಿಹೋದರು. ಬಾಲ್ಯಾವಸ್ಥೆಯಲ್ಲಿಯೇ ತಾಯಿತಂದೆಗಳನ್ನು ಕಳಕೊಂಡ ಅನಾಥ ಬಾಲಕನಂತೆ ಭಾರತದ ಸ್ಥಿತಿಯಾಯಿತು.

ಆದರೆ ಈ ನೈರಾಶ್ಯವೂ ಹತವೀರ್ಯತನವೂ ಬಹಳ ದಿನ ಮುಂದೆ ಬಾಳಲಿಲ್ಲ. ೬ ವರುಷಗಳೆಂದರೆ ರಾಷ್ಟ್ರ ಪುರುಷನಿಗೆ ೬ ನಿಮಿಷಗಳಂತೆಯೇ; ಪುನಃ ಸಿಂಹವು ಪಂಜರದೊಳಗಿಂದ ಹೊರಗೆ ಬಂತು. ಲೋಕಮಾನ್ಯರು ಆ ಆರು ವರುಷದ ಕಡುತರ ಶಿಕ್ಷೆಗೆ ಸೊಪ್ಪು ಹಾಕದೆ, ವೀರ ಗರ್ಜನೆ ಮಾಡುತ್ತ ಭಾರತದ ತುಂಬ ಸಂಚರಿಸಿ ಹೋಮ್ ರೂಲ್ ಲೀಗದ ವತಿಯಿಂದ ದೇಶದಲ್ಲೆಲ್ಲ ನವಚೈತನ್ಯ ತುಂಬಿ ರೌಲಟ ಕಾಯಿದೆಯಂಥ ಉಗ್ರ ಕಾಯ್ದೆಯನ್ನೂ ಮುರಿಯ ಹಚ್ಚಿ ಬರೇ ಹೆಸರಿಗೇ ಏಕಾಗಲೊಲ್ಲದು, ೧೯೧೯ರ ಸ್ವರಾಜ್ಯ ಸುಧಾರಣೆಯನ್ನು ಜಾಹೀರ ಪಡಿಸುವಂತೆ ಇಕ್ಕಟ್ಟಿನಲ್ಲಿ ಹಾಕಿದರು. ಮುಂದೆ ತುಸು ದಿನಗಳಲ್ಲಿಯೇ ರಾಷ್ಟ್ರದ ಕರ್ಣಧಾರಿಯಾದ ತಿಲಕ ಮಹಾರಾಯರು ದಿವಂಗತರಾಗಲು ಪುನಃ ನೈರಾಶ್ಯದ ಸಾಮ್ರಾಜ್ಯವು ಎತ್ತ ನೋಡಿದತ್ತ ಹಬ್ಬಿ ಪ್ರತಿಯೊಬ್ಬನು ದುಃಖಸಾಗರದಲ್ಲಿ ಮುಳುಗಿದನು. ಗೂಗೆಗಳು ಕೂಡಲೆ ಹೊರಬಿದ್ದು 'ನೋಡಿರಿ! ಪಾಪ, ಸಾಯುವ ತನಕ ಗುದ್ದಾಡಿ ವ್ಯರ್ಥ ಸತ್ತುಹೋದ. ಒಂದು ದಿನವೂ ಉಣಲಿಲ್ಲ. ಚಲೋ ತಿನಸು ತಿನ್ನಲಿಲ್ಲ. ದುಡ್ಡು ಗಳಿಸಲಿಲ್ಲ. ಅಥವಾ ಸರಕಾರದವರಿಂದಲೂ ಮನ್ನಣೆ ಪಡೆಯಲಿಲ್ಲ. ಸ್ವರಾಜ್ಯವೆಂಬ ಮೃಗಜಲದ ಬೆನ್ನು ಹತ್ತಿ ಸತ್ತುಹೋದ. ಗಾಳಿಯನ್ನು ಗುದ್ದಿ ಕೈ ನೋವು ಮಾಡಿಕೊಳ್ಳಬಹುದೇ?' ಎಂದು ತಮ್ಮ ಇಷ್ಟಮಂತ್ರವನ್ನು ಉಚ್ಚರಿಸ ಹತ್ತಿದವು. ನಮ್ಮ ಸುಶಿಕ್ಷಿತರೂ ಕೈಕಾಲು ಕಳಕೊಂಡು 'ಛೇ! ಇಂಥ ಮುಖಂಡನು ಇನ್ನು ಆಗುವದುಂಟೇ? ಶಾಬಾಸ್! ಲೋಕಮಾನ್ಯ ಚಳವಳಿ ಮಾಡಿದರೆ ನೀನೇ ಮಾಡಬೇಕು! ಅಯ್ಯೋ, ಇನ್ನೇನು ಗತಿ, ಭಾರತವನ್ನುದ್ಧರಿಸುವವರಾರು?' ಎಂದು ಮರುಗುತ್ತಾ ನಿರಾಶರಾಗಹತ್ತಿದರು. ಆದರೆ ಈ ಸಾರೆಯ ನಿರಾಶೆಯು ಅತೀವ್ರ ಇಲ್ಲದಂತಾಯಿತು.

ಮಹಾತ್ಮಾ ಗಾಂಧಿಯುವಲ್ಲಭಭಾಯಿ ವ್ಯಕ್ತಿಗಳು ಮುಂದೆ ಬಂದು ರಾಷ್ಟ್ರದ ಹೊಣೆಯನ್ನು ಹೊತ್ತು ಅಭೂತಪೂರ್ವವಾದ ಉತ್ಸಾಹವನ್ನು ದೇಶದಲ್ಲಿ ತುಂಬಿ ಅಸಹಕಾರದ ಪ್ರಚಂಡ ಆಂದೋಲನವನ್ನು ಹೂಡಿ ಸತ್ಯ ಮತ್ತು ಅಹಿಂಸೆಗಳ ಬಲದಿಂದ ವರ್ಷೆರಡು ವರ್ಷಗಳಲ್ಲಿ 'ನ ಭೂತೋ ನ ಭವಿಷ್ಯತಿ' ಎಂಬಂತೆ ಅತ್ಯಂತ ಪ್ರಚಂಡವಾದ ಚಳವಳಿಯನ್ನೆಬ್ಬಿಸಿ ನಿಸ್ಸತ್ವವೂ ಪರಾವಲಂಬಿಯೂ ಆದ ಭಾರತದಲ್ಲಿ ತೇಜಸ್ವಿಯೂ ಸ್ವಾವಲಂಬಿಯೂ ಆದ ತತ್ವಗಳನ್ನು ಊರಿದರು. ಸಾವಿರಾರು ಲಕ್ಷ್ಮೀಪುತ್ರರೂ ದೊಡ್ಡ ದೊಡ್ಡ ವಕೀಲ ಬ್ಯಾರಿಸ್ಟರರೂ ತಮ್ಮ ಸುಖೋಪಭೋಗವನ್ನೂ ಬದಿಗೆ ಸರಿಸಿ ರಾಷ್ಟ್ರದ ಸೇವೆ ಮಾಡಲು ಮುಂದೆ ಬಂದರು. ಸುಮಾರು ೬೦ ಸಾವಿರ ವೀರರು ಹುರುಪಿನಿಂದ ಕಾರಾಗೃಹಕ್ಕೆ ಹೋದರು. ಆದರೆ ಪ್ರತಿಯೊಂದು ತರುವಾಯ ಅಥವಾ ಜಯದ ತರುವಾಯ ನೈರಾಶ್ಯವಿಟ್ಟಂತೆ ಈ ಸಾರೆಯೂ ಆಯಿತು. ಮಹಾತ್ಮರಿಗೆ ಆರು ವರುಷದ ಶಿಕ್ಷೆ ವಿಧಿಸಲಾಯಿತು. ಕ್ರಮೇಣ ಜನರಲ್ಲಿ ಶೈಥಿಲ್ಯವುಂಟಾಗಿ ಪುನಃ ನೈರಾಶ್ಯವು ಹಬ್ಬಿಹೋಯಿತು. ಗೂಗೆಗಳು ಕೂಗಲಾರಂಭಿಸಿದವು. ಅವುಗಳ ಜೊತೆಗೇ ನಿರಾಶಾವಾದಿಗಳೂ 'ಅಹಹಾ, ಏನು ಚಳವಳಿಯಿದು? ಎಲ್ಲಿಯ ಲೋಕಮಾನ್ಯರ ಚಳವಳಿ, ಎಲ್ಲಿಯ ಈ ಪ್ರಚಂಡ ಚಳವಳಿ? ಲೋಕಮಾನ್ಯರು ಸಾಯುವ ತನಕ ಹೆಣಗಾಡಿದರೂ ನೂರಾರು ತರುಣರು ಸಹ ಕಾರಾಗೃಹಕ್ಕೆ ಹೋಗಲು ಸಿದ್ಧರಾಗಲಿಲ್ಲ. ಆದರೆ ಯಕ್ಷಿಣಿಯು ಕಡ್ಡಿಯನ್ನು ತಿರುವಿದಂತೆ ೬೦ ಸಾವಿರ ಜನರು ಸೆರೆಮನೆಗೆ ಹೋದರಲ್ಲಾ! ಛೇ, ಇನ್ನೆಂದಿಗೂ ಇಂತಹ ಚಳವಳಿಯು ಆಗುವದು ಶಕ್ಯವೇ ಇಲ್ಲ' ಎಂದು ಮುಂತಾಗಿ ಆಡತೊಡಗಿದರು. ನಿಜವಾಗಿಯೇ ೧೯೨೨ರಿಂದ ೧೯೨೮ರ ವರೆಗಿನ ಕಾಲವೆಂದರೆ ೧೯೦೮ರಿಂದ ೧೯೧೪ರ ವರೆಗಿದ್ದ ಕಾಲದಂತಹದೇ. ಆಗ ರಾಷ್ಟ್ರದ ಸೂತ್ರಚಾಲಕನಾದ ತಿಲಕ ಮಹಾರಾಯನು ಸೆರೆಮನೆಯಲ್ಲಿದ್ದರೆ, ಈ ಆರು ವರ್ಷ ಮಹಾತ್ಮನು ಎಲ್ಲ ಸೂತ್ರಗಳನ್ನು ಸ್ವರಾಜ್ಯಪಕ್ಷದವರ ಕೈಯಲ್ಲಿ ಕೊಟ್ಟು ಸಾಬರಮತಿಯ ಆಶ್ರಮದಲ್ಲಿ ಖಾದಿಯ ಜಪಮಾಡುತ್ತ ಕೂಡ್ರುವ ಪ್ರಸಂಗ ಬಂದಿತ್ತು. ತುಸು ಕಠಿಣ ಶಬ್ದಗಳಲ್ಲಿಯೇ ಆದರೂ ಯಥಾರ್ಥವಾಗಿ ಹೇಳಬೇಕಾದರೆ ಮ. ಗಾಂಧಿಯವರ ಹೆಸರು ಎಲ್ಲಿಯೂ ಕೇಳ ಸಹ ಬರದಾಯ್ತು. ಅವರು ಜೀವಂತರಾಗಿ ಇರುವರೋ ಇಲ್ಲವೊ ಎಂದು ಸಹ ಹಲವರು ಕೊಳಕು ಮಾತು ಆಡಿ ಕೇಳುತ್ತಿದ್ದರು. ಇಂತಹ ಅತ್ಯಂತ ನಿರಾಶಾಕರವಾದ ಆ ಕಾಲದಲ್ಲಿ ಯಾರಾದರೂ 'ಮತ್ತೆ ಚಳವಳಿ ಏಳುವದು, ಹಾಗೂ ಅದನ್ನು ಮಹಾತ್ಮರೇ ಸುರುಮಾಡಬಹುದು' ಎಂದು ಹೇಳಿದ್ದರೆ ನಿಶ್ಚಯವಾಗಿ ಅವರನ್ನು ಹುಚ್ಚರ ಆಸ್ಪತ್ರಿಗೆ ಕಳಿಸುವಂತಹ ವಿಚಿತ್ರ ದೀನ ಹೀನವಾದ ಸ್ಥಿತಿಯಾಗಿತ್ತು ಆ ಆರು ವರುಷ. ಆದರೆ ಸ್ವಾತಂತ್ರ್ಯದ ಪ್ರೇಮದ ಒಮ್ಮೆ ಹೊತ್ತಿದ ಬೆಂಕಿಯು ಸ್ವಾತಂತ್ರ್ಯಪ್ರಾಪ್ತಿಯ ವರೆಗೆ ಶಾಂತವಾದ ಒಂದಾದರೂ ಉದಾಹರಣೆಯು ಜಗತ್ತಿನ ಇತಿಹಾಸದಲ್ಲಿ ಇಲ್ಲದಿರುವಾಗ ನಮ್ಮ ದೇಶವು ಅದಕ್ಕೆ ಹೇಗೆ ಅಪವಾದವಾದೀತು? ಮುಂದೆ ಎರಡೇ ವರುಷಗಳಲ್ಲಿ ಸುರುವಾದ, ಇತಿಹಾಸಪ್ರಸಿದ್ಧ

(೧೨ನೇ ಪುಟಕ್ಕೆ ಮುಂದರಿಸಿಯುದೆ)





ಆಶ್ಚರ್ಯವಾಗುವಂತೆ
ದಣುವಾರಿಸುವುದು.

ಖಸ್ (ಲಾವಂಚ) ಶೈತ್ಯೋಪಚಾರದ ಗುಣಗಳಿಗಾಗಿ ಯಾವಾಗಲೂ ಪ್ರಸಿದ್ಧಿಪಡೆದಿದೆ; ಮತ್ತೂ ಈ ಖಸ್ (ಲಾವಂಚದ) ಸಾಬೂನಿನ ಆಶ್ವಾಸನಕರವಾದ ಸುವಾಸನೆಯು ನಿಮ್ಮನ್ನು ವಿಸ್ಮಯಗೊಳಿಸಿ, ಆನಂದಪಡಿಸುವುದು. ಅದು ಆಂದವಾಗಿ ನೊರೆ ಬಿಡುವುದು. ಅಲ್ಲದೆ, ಸೆಕೆಯ ಬೆವರಿನ ದಿನಗಳಲ್ಲಿ ಅದು ಒಂದು ವರ ಪ್ರಸಾದವಾಗಿರುವದು. ಅದು ಬಹಳ ತಂಪಾಗಿಯೂ, ದಣುವಾರಿಸುವುದಾಗಿಯೂ ಇದೆ. ಅದರ ಗುಣವು ಅದರ ಒಂದು ಸಾಬೂನಿನ ಉಪಯೋಗದಿಂದಲೇ ನಿಮಗೆ ಖಚಿತವಾಗುವುದು.

ಸ್ವಸ್ತಿಕಾ
ಖಸ್
ಟ್ರೊಲೆಟ್ ಸಾಬೂನು.

ದಕ್ಷಿಣ ಕನ್ನಡದ ಏಜಂಟರು:—
ಸೂಜೀರ ರಾಯಪ್ಪ ನ್ಯಾಕ,
ಎಸ್. ಎನ್. ವಿ. ನ್ಯಾಕ ಎಂಡ್ ಕೋ., ಮಂಗಳೂರು.

ಉತ್ತರ ಕನ್ನಡದ ಏಜಂಟರು:—
ಎನ್. ಎಸ್. ರಂಗೈಶೆಣ್ವೈ, ಪೋಸ್ಟ್ ಹಲಿಯಾಲ್.

(೧೧ನೇ ಪುಟದಿಂದ)

ವಾದ, ಎಂದೂ ಮರೆಯದಂತಹ, ಹಿಂದಿನ ಎಲ್ಲ ಚಳವಳಿಗಳನ್ನೂ ಮರೆಯಿಸುವಂತಹ, ಕಾಂಗ್ರೆಸಿನ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆಯಲ್ಪಡುವಂತಹ ಉಪ್ಪಿನ ಚಳವಳಿಯನ್ನು ಕಂಡು ಇಡೀ ಜಗತ್ತೇ ಬೆರಗಾಗಿ ನೋಡಹತ್ತಿತು. ಮುಂದೆ ಕಾಂಗ್ರೆಸಿನ ಒಪ್ಪಂದವಾಗಿ ಕಾಂಗ್ರೆಸು ಶ್ರೇಷ್ಠಸಂಸ್ಥೆಯೆಂದೂ ಹೇಳಿಸಿಕೊಂಡಿತು. ಈ ವಿಜಯಕ್ಕೆ ಸರಿಯಾದ ವಿಜಯವು ಮುಂದಿನ ಚಳವಳಿಯಲ್ಲಿಯೇ ಯಾವದೇ ರಾಷ್ಟ್ರದ ಸ್ವಾತಂತ್ರ್ಯಸಂಗ್ರಾಮದ ಇತಿಹಾಸದಲ್ಲಿ ದೊರೆಯಲಾರದೆಂದೂ ದಿವಂಗತ ವಿಠ್ಠಲಭಾಯಿ ಪಟೇಲರು ಸಾರಿ ಸಾರಿ ಹೇಳಿದರು. ಈ ಚಳವಳಿಯಲ್ಲಿ ಸುಮಾರು ೧ ಲಕ್ಷ ವೀರರು ಸೆರೆಮನೆಯ ಕಷ್ಟ ಅನುಭವಿಸಲಿಕ್ಕೆ ಆನಂದದಿಂದ ಮುಂದೆ ಬಂದರು. ಆದರೆ ವಿಜಯೋನ್ಮಾದದಿಂದ ಮೈಮರೆತು ಕಾಂಗ್ರೆಸು ಕೂತಾಗ ಫಕ್ಕನೆ ಕಾಂಗ್ರೆಸಿನ ಶಕ್ತಿಯು ನಷ್ಟಹೊಂದುವ ಪ್ರಸಂಗವು ಬಂದಿತು. ದುರ್ದೈವದಿಂದ ಅಥವಾ ಸುದೈವದಿಂದ ಈ ಸಾರೆಯ ಅಂದರೆ ೧೯೩೨ರ ಸತ್ಯಾಗ್ರಹ ಯುದ್ಧದಲ್ಲಿ ಅಪಯಶ ಒಂತು. ಈ ಸಾರೆ ಸುಮಾರು ೧೫ ಲಕ್ಷ ವೀರರು ಕಾರಾಗೃಹಕ್ಕೆ ತೆರಳಿದರು. ಅಗಣಿತ ಕಷ್ಟನಷ್ಟಗಳನ್ನು ಪಟ್ಟರು. ವೇಳೆಯು ಅನುಕೂಲವಿದ್ದಿಲ್ಲ; ಅಥವಾ ಸೃಷ್ಟಿಯ ನಿಯಮಕ್ಕನುಸರಿಸಿ ಅಥವಾ ನಮ್ಮ ದೇಶದ ಹಿಂದಿನ ೨೦ ವರುಷಗಳ ಚಳವಳಿಯ ಇತಿಹಾಸಕ್ಕನುಸರಿಸಿ ಈ ಸಾರೆ ಹಿಂದೆಗೆಯುವ ಪ್ರಸಂಗ ಬಂತು. ಈಗ ಎಲ್ಲೆ ನೋಡಿದಲ್ಲಿ ಪುನಃ ನೈರಾಶ್ಯವು ಆವರಿಸಿಕೊಂಡು ಒಬ್ಬರೊಬ್ಬರಲ್ಲಿ ತಾಳವಿಲ್ಲ; ಪ್ರತಿಯೊಬ್ಬನು ನನ್ನ ಮತ ಹೀಗೆ ಅದೆ ಎಂದು ಅನ್ನುತ್ತ ಮತಭೇದವು ಹಬ್ಬಿಹೋಗಿದೆ.

ಆದರೆ ಈ ನೈರಾಶ್ಯವು ಬಲು ದಿನ ತಾಳಲಾರದೆಂಬದಕ್ಕೆ ನಮ್ಮ ಇತಿಹಾಸವೇ ಸಾಕ್ಷಿಯಾಗಿರುವಾಗ, ಜೋಲುಮೋರೆ ಮಾಡಿಕೊಂಡು ಹತಾಶರಾಗಲಿಕ್ಕೆ ಕಾರಣವೇನು? ಪ್ರತಿಯೊಂದು ಚಳವಳಿಯಲ್ಲಿ ಒಮ್ಮೆ ಜಯ, ಒಮ್ಮೆ ಅಪಜಯ ಹೀಗೆ ಬಿಸಿಲು, ನೆಳಲುಗಳಂತೆ ಹಗಲು ರಾತ್ರಿಗಳಂತೆ ಚಕ್ರವು ತಿರುಗುತ್ತಿರುವದು. ಪ್ರತಿಯೊಂದು ವಿಜಯವು ತನ್ನ ಹಿಂದಿನ ವಿಜಯಕ್ಕಿಂತ ಹೆಚ್ಚಿನದೂ ಎಲ್ಲ ನಿರಾಶೆಯನ್ನೂ ಹೊಡೆದೋಡಿಸುವಂತಹದೂ ಇರುವದೆಂಬದನ್ನು ಚೊಕ್ಕಾಗಿ ಕಾಣಬಹುದು. ಒಮ್ಮೆ ಭರತ ಒಮ್ಮೆ ಇಳಿತಗಳಂತೆ ಒಮ್ಮೆ ಜಯ ಒಮ್ಮೆ ಪರಾಜಯ ಹೀಗೆ ಆಗುತ್ತಾಗುತ್ತ ನಮಗೆ ದೊರೆಯುವ ಕಟ್ಟಕಡೆಯ ಜಯವೇ ಸ್ವರಾಜ್ಯವಾಗಿ ಪರಿಣಮಿಸುವದು.

ಜಗತ್ತಿನೊಳಗಿನ ಉಳಿದ ದೇಶಗಳ ಸ್ವಾತಂತ್ರ್ಯದ ಇತಿಹಾಸವಾದರೂ ಇದೇ ಮಾತನ್ನು ಸ್ಪಷ್ಟೀಕರಿಸುತ್ತದೆ. ಮರಾಠಿಯಲ್ಲಿಯ ಒಂದು ಗಾದೆಯ ಮಾತಿನಂತೆ ಎಂದಾದರೂ ಯಾವ ಡಾದರೂ ದೇಶವು ಒಂದೇ ಗಳಿಗೆಯಲ್ಲಿ ಸ್ವಾತಂತ್ರ್ಯ ಸಂಪಾದಿಸಿಲ್ಲ. ಇಟಲಿಯ ಕರ್ಣಧಾರನೂ ಪ್ರಸಿದ್ಧ ಸ್ವಾತಂತ್ರ್ಯಭಕ್ತನೂ ಆದ ಮ್ಯಾಝಿನಿಯು ಒಮ್ಮೆಯಲ್ಲ, ಎರಡು ಸಾರೆಯಲ್ಲ, ಅನೇಕ ಸಾರೆ ಪರಾಜಯ ಹೊಂದಿದ ಮೇಲೆ ಸ್ವಾತಂತ್ರ್ಯದೇವಿಯು ಅವನಿಗೆ ಒಲಿದಳು. ಆಯುರಂತವೂ ಹೋರಾಟ ನಿರಾಶೆಯ ಸಮುದ್ರದಲ್ಲಿಯೇ ಈಜಾಡಿದ ಮೇಲೆ ಈಗೇನೊ ಅವಳ ದರ್ಶನವು ಅವರಿಗಾಗಹತ್ತಿದೆ. ಅದರಂತೆಯೇ ಧೈರ್ಯದಿಂದ ಕಾದುತ್ತ ಕೇವಲ ೩೫ ವರುಷಗಳಲ್ಲಿ ರಾಷ್ಟ್ರೀಯ ಸಭೆಗೆ ಆದ ಯಶವು ನಿಶ್ಚಯವಾಗಿಯೇ ಪ್ರಶಂಸನೀಯವಾಗಿದೆ. ನಮಗೆ ದೊರೆತ ಈ ಯಶಸ್ಸನ್ನು ರೂಪಾಯಿ ಆಣೆ ಪೈಗಳಿಂದ ಅಳೆಯಲಿಕ್ಕೆ ಬರಲಾರದೆಂಬುದು ಸತ್ಯವಾಗಿದ್ದರೂ ಸ್ಥೂಲಮಾನದಿಂದ ನೋಡುವವರಿಗೂ ಓಡೆದು ಕಾಣಿಸುವಷ್ಟು ಆ ಯಶವು ಸ್ಪಷ್ಟವಾಗಿದೆ. ಇಷ್ಟು ವರುಷ ಬಡಿದಾಡಿ ಲಕ್ಷಾವಧಿ ಜನರು ಸೆರೆಮನೆಗೆ ಹೋಗಿ ನೂರಾರು ವೀರರು ಪ್ರಾಣ ಕಳಕೊಂಡು ಅಸಂಖ್ಯರು ತಮ್ಮ ಹೊಲಮನೆ ಕಳಕೊಂಡು ಗಳಿಸಿದ್ದೇನು? ಸ್ವರಾಜ್ಯವು ಎಲ್ಲಿ ಇದೆ ಎಂದು ಕೇಳುವವನಿಗೆ ಕರ್ಮಯೋಗಿಯಾದ ನಮ್ಮ ಒಕ್ಕಲಿಗನ ಉದಾಹರಣೆಯೇ ಸಾಕು. ಕಷ್ಟಪಟ್ಟು ಬಿಸಿಲು ಗಾಳಿಯೆನ್ನದೆ ಬೆನರು ಸುರಿಯುವಂತೆ ದುಡಿದು ದನಕರುಗಳಿಗಾಗಿ ಮತ್ತು ಗೊಬ್ಬರ ಬೀಜ ಕಳೆಕಾಸಿಗೆ ಮುಂತಾದವುಗಳಿಗಾಗಿ ಹಣ ಖರ್ಚು ಮಾಡುವನನಿಗೆ 'ಹೀಗೇಕೆ ಕಷ್ಟ ಬಿಡುವಿ?' ಎಂದು ಯಾರಾದರೂ ಕೇಳಿದರೆ 'ಸುಗ್ಗಿಯ ಮಧುರ ಫಲ ಉಣ್ಣುವದರ ಸಲುವಾಗಿ' ಎಂದು ಹೇಳುವನು. ಸುಗ್ಗಿಯಲ್ಲಿಯೇ ಅವನ ಜಮಾ ಖರ್ಚು ಆಗುವಂತೆ ಸ್ವರಾಜ್ಯದ ಸುಗ್ಗಿಯಲ್ಲಿಯೇ ನಮ್ಮ ಲೆಕ್ಕಮಾಡಿ ಲಾಭ ಹಾನಿಗಳನ್ನು ನೋಡತಕ್ಕದಲ್ಲದೆ ಈಗ ಅಲ್ಲ. ಸ್ವದೇಶಬಾಂಧವರು ಸಹಾನುಭೂತಿಯನ್ನು ತೋರಿಸಿದರೆ ಸಾಕು. ದೇವರ ದಯೆಯಿಂದ ಜನತೆಯ ಈ ಸಹಾನುಭೂತಿಯನ್ನು ಈವರೆಗೆ ಕಾಂಗ್ರೆಸು ಸಂಪಾದಿಸಿದ್ದು ಮತ್ತೂ ಸಂಪಾದಿಸುತ್ತ ನಡೆದಿದೆ. ಕಾರ್ಯಕರ್ತರ ದೃಷ್ಟಿಯಿಂದಲೂ ನಿರಾಶೆಗೆ ಸ್ಥಳವಿಲ್ಲ. ಯಾವ ಕರ್ಣಾಟಕದಲ್ಲಿ ೧೯೦೮ರಲ್ಲಿ ಒಬ್ಬನೂ ಸೆರೆಮನೆಗೆ ಹೋಗಲು ದೊರೆಯಲಿಲ್ಲವೋ ಅದೇ ಕರ್ಣಾಟಕದಲ್ಲಿ ೧೯೨೦ರಲ್ಲಿ ೪೦ ವೀರರೂ ೧೯೩೦ರಲ್ಲಿ ೧,೯೦೦ ಶೂರರೂ ೧೯೩೨ರಲ್ಲಿ ೩,೦೦೦ ಕ್ಕಿಂತ ಹೆಚ್ಚು ಯುವಕರೂ ಆನಂದದಿಂದ ಸೆರೆಮನೆಗೆ ಹೋದರು. ಇದೇನು ನಿರಾಶೆಯ ಮಾತೋ?

ಆದ್ದರಿಂದ ಯಾರೂ ನಿರಾಶರಾಗದೆ ಈ ಎಲ್ಲ ಹಿಂದಿನ ಇತಿಹಾಸವನ್ನು ತಿಳಕೊಂಡು ಆಲಸ್ಯವನ್ನು ಕಿತ್ತು ಚಲ್ಲಿ ಭಾರತ ಮಾತೆಯ ಗತವೈಭವವನ್ನು ತಿರುಗಿ ಸಂಪಾದಿಸಲು ಈ ಹೊತ್ತಿನ ಸುವರ್ಣಮಹೋತ್ಸವದ ಸುಮಂಗಲ ಮುಹೂರ್ತದಲ್ಲಿ ಪ್ರಾರ್ಥಿಸುವ.

## ದಿವಂಗತ ಲೋಕಮಾನ್ಯ ತಿಲಕರು.

ಲೋಕಮಾನ್ಯರ ಹೆಸರನ್ನು ಅರಿಯದ ಭಾರತೀಯನಿಲ್ಲ. ಅವರಂತಹ ಪ್ರತಿಭಾಶಾಲಿಯಾದ ಮುಂದಾಳು ಬೇರೊಬ್ಬನಿರಲಿಲ್ಲವೆಂದರೆ ಹೆಚ್ಚಿನ ಮಾತಲ್ಲ. ಅವರು ನಮ್ಮ ಜನಾಂಗದ

ಪರಮ ಪೂಜ್ಯ ಪಾವನ ಪುರುಷರಾಗಿದ್ದಾರೆ. ಜನರಿಗೆ ಅವರಲ್ಲಿ ಅಖಂಡ ಭಕ್ತಿ ವಿಶ್ವಾಸಗಳಿವೆ. ಅವರ ಮಾತು ಜನರಿಗೆ ಒಂದು ಶಾಸನದಂತಿದೆ. ಅವರಿಗೆ ದೇಶಪ್ರೇಮ, ದೇಶಸೇವೆಗಳೇ ಒಂದು ಧರ್ಮ. ಅವರು ಪ್ರಜಾಸತ್ತಾವಾದಿಗಳು. ಸ್ವರಾಜ್ಯಸಾಧನೆಗಾಗಿ ಧೈರ್ಯದಿಂದ ಅಂದು ಕಾದಾಡಿದವರಿವರೇ ಮಹನೀಯರು. ಪೂರ್ಣ ಸ್ವರಾಜ್ಯ ಸಂಪಾದನೆಯೇ ಇವರ ಗುರಿ. ಇವರ ದಿವ್ಯನಾಮವು, ರಾಷ್ಟ್ರ ಮುಖಂಡರ ಇತಿಹಾಸದಲ್ಲಿ, ಭಾರತದ ಸಾರ್ವಜನಿಕ ಚಳವಳಿಯ ಚರಿತ್ರೆಯಲ್ಲಿ, ಅಜರಾಮರವಾಗಿ ಉಳಿವುದೆಂಬುದರಲ್ಲಿ ಸಂದೇಹವಿಲ್ಲ!

## 1936ನೇ ಇಸವಿಯ ಪ್ರಭಾಕರ ಕನ್ನಡ ಪಂಚಾಂಗ.

ತಿಥಿ, ನಕ್ಷತ್ರ, ಮುಹೂರ್ತಗಳೇ ಮೊದಲಾದ ಯಾವತ್ತು ಪಂಚಾಂಗ ಫಲಗಳಿಂದಲೂ, ವ್ಯವಹಾರಕ್ಕೆ ಅಗತ್ಯವಿರುವ ದಸ್ತಾವೇಜಿನ ಸ್ಟಾಂಪು ದರ, ಬಡ್ಡಿ ಲೆಕ್ಕ, ಪೋಸ್ಟಲ್ ಕ್ರಮ ಮೊದಲಾದ ಹಳವು ಬಗೆಯ ಮಾಹಿತಿಗಳಿಂದಲೂ ತುಂಬಿ, ಜನವರಿಯ ಪ್ರಥಮದಲ್ಲಿ ಪ್ರಕಟವಾಗುವುದು. ಕರ್ಣಾಟಕ ಪಂಚಾಂಗಗಳಲ್ಲಿ ಇದು ಅದ್ವಿತೀಯ. ಬೆಲೆ ಎರಡೇ ಆಣೆ. ವ್ಯಾಪಾರಿಗಳಿಗೆ ಧಾರಾಳ ಕಮಿಶನ್. ವಿಳಾಸ:—ಮ್ಯಾನೇಜರ್, **ಪ್ರಭಾಕರ ಪ್ರೆಸ್, ಉಡುಪಿ.**


# ಓರಿಯಂಟಲ್
## ಗವರ್ನಮೆಂಟ್ ಸೆಕ್ಯೂರಿಟಿ
### ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದುದು: 1874.: ಮುಖ್ಯ ಕಾರ್ಯಾಲಯ—ಮುಂಬಾಯಿ.

**1934ನೇ ವರ್ಷದ ವರದಿಯ ಸಾರಾಂಶ.**

| | | |
|---|---|---|
| ಕೊಡಲ್ಪಟ್ಟ ಹೊಸ ಪಾಲಿಸಿಗಳು . | ರೂ. | 7,62,42,761 |
| ವಾರ್ಷಿಕ ಆದಾಯ . . . | ,, | 3,14,01,970 |
| ಚಾಲ್ತಿಯಲ್ಲಿರುವ ಪಾಲಿಸಿಗಳು . | ,, | 54,20,38,518 |
| ತೆತ್ತ ಜುಮ್ಮಾ ವಿಮಾ ಹಣ | ,, | 16,29,88,814 |
| ಅಧಿಕವಾಗಿರುವ ನಿಧಿಗಳು | ,, | 15,53,88,843 |

**ಈ ಅಂಕೆಗಳು**

ಓರಿಯಂಟಲ್

ಕಂಪೆನಿಯ ಭದ್ರತೆಯ ಮತ್ತು ಜನಪ್ರಿಯತೆಯ ಪರಿಮಾಣತೆಯನ್ನು ತೋರಿಸುತ್ತವೆ.

**ತಡಮಾಡ ಬೇಡಿರಿ**

ನಿಮ್ಮ ಜೀವವಿಮೆಯನ್ನು, ಜನಪ್ರಿಯವೂ, ವೃದ್ಧಿಂಗತವೂ ಆದ ಈ ಹಿಂದೀ ವಿಮಾ ಸಂಸ್ಥೆಯಲ್ಲಿ ಉತ್ತರಾಯಿಸಲು.

**ಮಾಹಿತಿ ಬಗ್ಗೆ ಬರೆಯಿರಿ:—**

**ಜಿ ಮೆನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.**

ಅಥವಾ ಈ ಕೆಳಗೆ ಕಾಣಿಸಿದ ಕಂಪೆನಿಯ ಯಾವ ಆಫೀಸಿಗೂ ಬರೆಯಬಹುದು:—

| | | | |
|---|---|---|---|
| ಆಗ್ರಾ | ಕೊಲೊಂಬೊ | ಲಾಹೋರ್ | ರಾಯಿಪುರ |
| ಅಜ್ಮೀರ್ | ಡಾಕ್ಕಾ | ಲಕ್ನೊ | ರಾಜಶಾಹಿ |
| ಅಹಮ್ಮದಾಬಾದ್ | ಢಿಲ್ಲಿ | ಮದ್ರಾಸ್ | ರಾಂಚಿ |
| ಅಲ್ಲಹಾಬಾದ್ | ಗೌಹತಿ | ಮಾಂಡಲೇ | ರಂಗೂನು |
| ಅಂಬಾಲ | ಗುಂಟೂರು | ಮಧುರಾ | ರಾವಲ್ಪಿಂಡಿ |
| ಬಾರೇಲಿ | ಜಲಗಾಂ | ಮಡಿಕೇರಿ | ಸಿಂಗಾಪೂರ್ |
| ಬಳ್ಳಾರಿ | ಜಲಪೈಗುರಿ | ಮೊಂಬಾಸಾ | ಸಕ್ಕೂರ್ |
| ಕಲ್ಕತ್ತಾ | ಜಬಲ್‌ಪೂರ್ | ನಾಗ್ಪೂರ್ | ತ್ರಿಚಿನಾಪಳ್ಳಿ |
| ಕಲ್ಲಿಕೋಟೆ | ಕರಾಚಿ | ಪಾಟ್ನಾ | ತ್ರಿವೆಂಪ್ರಮ್ |
| ಕೊಯಂಬತ್ತೂರು | ಕೌಲಾಲಂಪೂರ್ | ಪೂನಾ | ವಿಶಾಖಪಟ್ಟಣ. |

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

**ಎಂ. ವಿ. ಮುತ್ತುಕೃಷ್ಣ ನ್ಯಾಡು,** ಬ್ರಾಂಚ್ ಸೆಕ್ರೆಟರಿ.

**ಡಿ. ವಾಸ್ ಎಂಡ್ ಸನ್ಸ್, ಪ್ರಿಜಂಟ್ಸ್,** ಮಂಗಳೂರು, ದ. ಕ.



# ವಜ್ರಗಳು ವಜ್ರಗಳು ವಜ್ರಗಳು

ನಮ್ಮಲ್ಲಿ ಎಂಟವರ್ಷ ನಿಂದ ಸೇದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.

ಏನೊಂದೂ ಕಲೆಗಳಿಲ್ಲದ ಉತ್ತಮ ವರ್ಗದ 'ಬ್ಲೂ ಜಾಗ್ಗರ' ವಜ್ರಗಳೂ, 'ಎಕ್ಸಟ್ರಾ ವ್ಹಾಯಿಟ್' ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ. ಬೆಲೆಗೆ ತಕ್ಕ ಒಡವೆ ವದಗಿಸಿ ಕೊಡುವವರು—

## ಸಾವಕಾರ ಶ್ರೀನಿವಾಸ ರಂಗಪೈ,

ಸಾವಕಾರ ಮಹಾಲ್—ರಥಬೀದಿ—ಮಂಗಳೂರು.

(ಸನ್ 1858ರಲ್ಲು ಸ್ಥಾಪಿತವಾದದ್ದು)

ನೂಲು ಮತ್ತು ಜವುಳಿ ವ್ಯಾಪಾರಸ್ತರು.



ನಕ್ಕು ನಗಿಸಿರಿ!
ಅಳಿಸಿ ನಗಿಸಿರಿ!!

# ನಗುವ-ನಂದ

ಹಾಸ್ಯರಸಭರಿತ ಸಚಿತ್ರ ಮಾಸಪತ್ರಿಕೆ

● ನಗೆಯ ನಿಲೆಯೇ ಆನಂದದ ಬೀಡು! ಇಂದು ನಕ್ಕ ನಗೆಯು ಮುಂದಿನ ರೋಗಕ್ಕೆ ಮದ್ದು. ನಗೆಯ ತಿರುಳನ್ನರಿತವನು ಸರ್ವಜನ ಪ್ರಿಯನು. ಜನಮನರಂಜನೆಯ ಲೇಖನ, ಕಥೆ, ಕವಿತೆ, ವ್ಯಂಗ್ಯ ಚಿತ್ರಗಳಿಂದ ರಂಜಿಸುವ 'ನಗುವ-ನಂದ'ನು ನಿಮ್ಮನ್ನು, ಆನಂದಗೊಳಿಸುವುದಲ್ಲದೆ ನಿಮ್ಮ ಗೃಹದಲ್ಲಿ ನಗೆಯ ಲಹರಿಯನ್ನೇ ಹರಿಸುವನು.

ವಾರ್ಷಿಕ ಚಂದಾ: ಒಂದು ರೂಪಾಯಿ.

ಬಿಡಿ ಪ್ರತಿ: ಒಂದಾಣೆ.

ಸೋಲ್ ಏಜೆಂಟರು: **ಸುಬೋಧ ಸಾಹಿತ್ಯ ಭಂಡಾರ, ಬೆಂಗಳೂರು ನಗರ.**

# ಕಾಂಗ್ರೆಸ್ ಸುವರ್ಣ ಮಹೋತ್ಸವ

## ನಮ್ಮ ಸಲುವಾಗಿ ಕಾಂಗ್ರೆಸ್ಸು ಏನು ಮಾಡಿದೆ?

(೧) ನಮ್ಮಲ್ಲಿಯ ಘೋರ ನಿದ್ರೆಯನ್ನು ತೆಗೆದುಹಾಕಿ ನಮ್ಮನ್ನು ಎಚ್ಚರಿಸಿದ್ದು — ಕಾಂಗ್ರೆಸ್ಸು

(೨) ನಮ್ಮಲ್ಲಿಯ ಪರಾಧೀನತೆಯನ್ನು ನಷ್ಟಪಡಿಸಿ ಸ್ವಾವಲಂಬನೆಯ ಬೀಜವನ್ನು ಬಿತ್ತಿದ್ದು — ಕಾಂಗ್ರೆಸ್ಸು

(೩) ನಮ್ಮಲ್ಲಿಯ ಸ್ವಾರ್ಥದ ಆಕುಂಚಿತ ವಿಚಾರಗಳನ್ನು ಬದಲಿಸಿ ರಾಷ್ಟ್ರಸೇವೆಗಾಗಿ ತ್ಯಾಗದ ಮಾರ್ಗಕ್ಕೆ ಹಚ್ಚಿದ್ದು — ಕಾಂಗ್ರೆಸ್ಸು

(೪) ನಮ್ಮಲ್ಲಿಯ ಸ್ವಸುಖದ ಕಲ್ಪನೆಯನ್ನು ಅಳಿಸಿ ಕಷ್ಟಸಹಿಷ್ಣುತೆಯನ್ನೂ ಆತ್ಮಾರ್ಪಣೆಯನ್ನೂ ಕಲಿಸಿದ್ದು — ಕಾಂಗ್ರೆಸ್ಸು

(೫) ನಮ್ಮಲ್ಲಿಯ ಆಲಸ್ಯ, ಅವ್ಯವಸ್ಥೆ, ಅಜಾಗರೂಕತೆ, ಒಡಕುಗಳನ್ನು ನಾಶಮಾಡಿ ಸುವ್ಯವಸ್ಥೆ, ಸ್ವಾಭಿಮಾನ, ಶಿಸ್ತುಗಳನ್ನು ನೆಲೆಗೊಳಿಸಿದ್ದು — ಕಾಂಗ್ರೆಸ್ಸು

(೬) ನಮ್ಮಲ್ಲಿಯ ಪುಕ್ಕತನವನ್ನು ನಿರ್ಮೂಲ ಮಾಡಿ ಧೈರ್ಯದ ಬೇರನ್ನೂರಿದ ಸಂಸ್ಥೆಯು — ಕಾಂಗ್ರೆಸ್ಸು

(೭) ನಮ್ಮಲ್ಲಿಯ ಪಾಶ್ಚಾತ್ಯ ಸಂಸ್ಕಾರದಿಂದ ಸೇರಿದ ಒಣಡೌಲನ್ನು ದೆಸೆದೆಟ್ಟು ಓಡಿಸಿ ಹಿಂದೀಯರ ಸಾದಾ ವೃತ್ತಿಯನ್ನು ಕೈಕೊಳ್ಳ ಹಚ್ಚಿದ್ದು — ಕಾಂಗ್ರೆಸ್ಸು

(೮) ನಮ್ಮಲ್ಲಿಯ ಉಚ್ಚ ನೀಚ ಭಾವನೆಯನ್ನು ತೆಗೆದುಹಾಕಿ ನಮ್ಮಲ್ಲಿ ಸಮಾನತೆಯನ್ನುಂಟುಮಾಡಿದ್ದು — ಕಾಂಗ್ರೆಸ್ಸು

(೯) ನಮ್ಮಲ್ಲಿಯ ಜಾತಿ ಪಕ್ಷ ಪಂಗಡಗಳ ವಿವಿಧತೆಯನ್ನು ಕಿತ್ತುಹಾಕಿ ಏಕರಾಷ್ಟ್ರೀಯತ್ವದ ಭಾವನೆಯನ್ನು ಹುಟ್ಟಿಸಿದ್ದು — ಕಾಂಗ್ರೆ

(೧೦) ನಮ್ಮಲ್ಲಿಯ ಪಾರತಂತ್ರ್ಯದ ಕತ್ತಲೆಯನ್ನು ಹೊಡೆದೋಡಿಸಿ ರಾಷ್ಟ್ರೀಯ ಸ್ವಾತಂತ್ರ್ಯದ ಕಾರಣವನ್ನು ತೋರಿಸಿದ್ದು — ಕಾ

**ಆದುದರಿಂದ ಇದೇ ತಾ. ೨೮ನೇ ತಾರೀಖಿನಿಂದ ಕಾಂಗ್ರೆಸ್ಸ್ ಸುವರ್ಣ ಮಹೋತ್ಸವವನ್ನಾಚರಿಸುವದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವು.**

ಪ್ರಾಂತಿಕ ಕಾಂಗ್ರೆಸ್ಸ್ ಜುಬಿಲೀ ಮಂಡಳ.

ಕೊಂಗ್ರೆಸಿನ ಸುವರ್ಣ ಮಹೋತ್ಸವದ ಸಂಬಂಧದಲ್ಲಿ ಮೊದಲಿನದಾದ ಈ ಪುಟ್ಟ ಸಂಚಿಕೆಗಾಗಿ ತಕ್ಕ ಲೇಖಗಳನ್ನೂ, ಕವಿತೆಗಳನ್ನೂ ದಯವಿಟ್ಟು ಒದಗಿಸಿ ಕೊಟ್ಟ ದೇಶಭಾಷಾಭಿಮಾನಿಗಳಾದ ಉತ್ತರ ಕರ್ಣಾಟಕದ ಲೇಖಕ ಬಂಧುಗಳಿಗೂ ಧಾರವಾಡದ ಕರ್ಣಾಟಕ ಪ್ರಾಂತಿಕ ಕಾಂಗ್ರೆಸು ಮಂಡಳಿಯವರಿಗೂ, ಹಲವು ಪಡಿಯಚ್ಚುಗಳನ್ನು ಅಭಿಮಾನಪೂರ್ವಕವಾಗಿ ಎರವು ಕೊಟ್ಟ ಉಡುಪಿಯ ಪ್ರಭಾಕರ ಮುದ್ರಾಯಂತ್ರದ ಮಾಲಕರಾದ ಶ್ರೀ. ಪಿ. ನಾರಾಯಣ ಪ್ರಭುಗಳವರಿಗೂ ಕಂಠೀರವನ ಹೃತ್ಪೂರ್ವಕವಾದ ವಂದನೆಗಳು.


LOW PREMIUM RATES! ATTRACTIVE FEATURES!!

**Safeguard your Family with a Policy in**

**THE CANARA MUTUAL ASSURANCE COMPANY LIMITED**

(Purely a Policy-holders' Company)

FIRST OF ITS KIND IN KARNATAKA

☞For Further Particulars Apply to:—

**The Canara Industrial & Banking Syndicate, Limited,**

UDIPI-OR ITS-BRANCHES.

ಕರ್ಣಾಟಕ ವಿಮಾ ಮಂಡಲದ ಕೀರ್ತಿಜ್ಯೋತಿ.

ಉತ್ತಮ ಭದ್ರತೆ! ಮಿತವ್ಯಯದ ಆಡಳಿತ!! ಕಡಿಮೆ ಪ್ರೀಮಿಯಂಗಳು!!!

ಅಖಿಲ ಕರ್ಣಾಟಕ ಮತ್ತು ಪಶ್ಚಿಮ ಕರಾವಳಿಯಲ್ಲಿ ಪಾಲಿಸಿದಾರರ ಮೊದಲನೇ ಸಂಸ್ಥೆಯಾದ

ದಿ ಕೆನರಾ ಮ್ಯುಚುಯಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

(ಬ್ರಿಟಿಷ್ ಇಂಡಿಯಾದಲ್ಲಿ ರಿಜಿಸ್ಟ್ರಿಯಾದದ್ದು.)

ಇದರ ಪಾಲಿಸಿಯನ್ನು ಘರೆಯದೆ ಈಗಲೇ ಪಡೆಯಿರಿ. ಇದು ಸಂಪೂರ್ಣ ಪಾಲಿಸಿದಾರರ ಸಂಸ್ಥೆಯಾಗಿದ.

**ಲಾಭವೆಲ್ಲಾ ವಿಮಾದಾರರದೇ!**

ಪ್ರಾರಂಭೋತ್ಸವದ ೬ ವಾರಗಳೊಳಗೇ ರೂ. ಏಳೂವರೆ ಲಕ್ಷ (೭.೫೦.೦೦೦)ಕ್ಕೆ ಮಿಕ್ಕಿದ ವಿಮಾಪತ್ರಗಳು ಬಂದಿರುತ್ತವೆ.

ವಿಮೆಯನ್ನಿಳಿಸಲಿಕ್ಕೂ, ವಿಮಾ ಪ್ರತಿನಿಧಿಯಾಗಲಿಕ್ಕೂ ಯೋಗ್ಯ ಸಂಸ್ಥೆ.

ಹೆಚ್ಚಿನ ಮಾಹಿತಿಗೆ ಸೆಕ್ರೆಟರಿಗಳಾದ ದಿ ಕೆನರಾ ಇಂಡಸ್ಟ್ರಿಯಲ್ ಅಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್,

ಹೆಡ್ ಆಫೀಸು— ಉಡುಪಿ

ಅಥವಾ ಅದರ ಇತರ ಬ್ರಾಂಚುಗಳಿಗೆ ಬರೆದು ತಿಳಿಕೊಳ್ಳಬಹುದು.

ಬೆಂಗಳೂರು ಕಛೇರಿ— ೧೫೪, ನರಸಿಂಹರಾಜಾ ರಸ್ತೆ.

# ಕಳೆದ ವಾರ

### ನಮ್ಮ ಜಿಲ್ಲಾ ಬೋರ್ಡು.

ಈಗ ನಮ್ಮ ಜಿಲ್ಲಾ ಬೋರ್ಡಿನ ಕಾರ್ಯನಿರ್ವಾಹವನ್ನು, ಎಕ್ಸ್-ಒಫೀಶಿಯೋ ಪ್ರೆಸಿಡೆಂಟರಾಗಿ, ನಮ್ಮ ಜಿಲ್ಲಾ ಕಲೆಕ್ಟರರವರು ಮಾಡುತ್ತಿರುವರಷ್ಟೆ. ಅವರ ಸಹಾಯಕರಾಗಿ, ಬೋರ್ಡಿನ ಕೆಲಸಗಳ ಮೇಲ್ವಿಚಾರದಲ್ಲಿ ಭಾಗಿಗಳಾಗಲು, ಹೊಸ ಪ್ರೆಸಿಡೆಂಟರ ಚುನಾವಣೆಯಾಗುವ ವರೆಗೆ, ಲೋಕಲ್ ಬೋರ್ಡ್ ಆಕ್ಟಿನ ಮೇರೆಗೆ, ನಮ್ಮ ಲೋಕಲ್ ಗವರ್ನಮೆಂಟು ಒಬ್ಬರನ್ನೀಗ ನೇಮಕ ಮಾಡಿದೆ. ಈ ವಾರ್ತೆಯಿಂದ ನಮ್ಮ ಜಿಲ್ಲೆಯವರಿಗೆಲ್ಲ ಸಂತೋಷವಾಗುವ ಸಂಭವವಿದೆ. ನಮ್ಮ ಸ್ಥಳೀಯ ಸೆಲ್ಫ್ ಗವರ್ನಮೆಂಟಿನ ಸಂಸ್ಥೆಗಳಿಲ್ಲ ಆದರ್ಶವೆನ್ನಿಸಿ ಬಾಳಿಕೊಂಡು ಬರಬೇಕಾದುದು ಅಪೇಕ್ಷಣೀಯವು. ಆದರೆ, ಹಲವು ಸಂದರ್ಭಗಳಲ್ಲಿ ನಾನ್‌ಆಫೀಶಿಯಲ್ ಪ್ರೆಸಿಡೆಂಟರು, ಈ ಸಂಸ್ಥೆಗಳನ್ನು ಮಾದರಿ ಸಂಸ್ಥೆಗಳಾಗಿ ನಡೆಸಿಕೊಂಡು ಲೂ, ಕಾರ್ಯಕ್ರಮಗಳನ್ನು ಸುವ್ಯವಸ್ಥೆಯಲ್ಲಿರಿಸಲೂ ಕೊಡುವುದಿಲ್ಲ. ಅವರಲ್ಲಿ ಅನೇಕರು, ಪ್ರೆಸಿಡೆಂಟರ ಯನ್ನೇರಿದ ಕ್ಷಣವೇ, ಅವರ ಪ್ರಜಾಸೇವೆಯ ಸ್ಫೂರ್ತಿ ಡಗಿ, ಹಿಂದಿನ ಉತ್ಸಾಹವೆಲ್ಲ ತಣ್ಣಗಾಗುತ್ತದೆ. ಇದರ ಂಣಾಮವೇನೆಂದು ಕಂಡೇ ಇದೆ—ಬೋರ್ಡಿನ ಕೆಲಸವು ನಿಧಾನವಾಗಿ, ಆದಷ್ಟಾಯಿತು, ಹೋದಷ್ಟು ಹೋಯಿತೆಂಬಂತೆ ಸಾಗುತ್ತದೆ. ಎಷ್ಟೋ ಕಾಗದ ಪತ್ರಗಳು ಉತ್ತರ ಬಾರದೆ, ಸ್ವೀಕಾರವೂ ಇಲ್ಲದೆ ತಿಂಗಳುಗಟ್ಟಲೆ, ವರ್ಷಗಟ್ಟಲೆ ಅಲ್ಲಿಯೇ ಕೊಳೆಯುತ್ತದೆ. 'ರಿಮ್ಯಾಂಡರು'ಗಳನ್ನು ಕಳುಹಿಸಿದರೂ ಫಲ ತಾಲೂಕುಗಳ, ಗ್ರಾಮಗಳ ಉಪಾಧ್ಯಾಯರ ಸಂಬಳ ತಿಂಗಳುಗಟ್ಟಲೆಯಾಗಿ ಬಾಕಿ! ಇಂತಹ ಹಲವು ಅಕ್ರಮ ತಿದ್ದುಪಡಿಗಾಗಿ, ಪೂರ್ಣ ಸಮಯವನ್ನು ಉಪಯೋಗಿಸ ಬಲ್ಲ, ಡೆಪ್ಯುಟಿ ಕಲೆಕ್ಟರರ ತರಗತಿಯ ಒಬ್ಬ ಸಮರ್ಥ ಗೆಜೆಟೆಡ್ ಆಫೀಸರರು ಯೋಗ್ಯರೆಂದು ಹೇಳಬೇಕಿಲ್ಲ. ಬೇಗನೇ ಇಂತಹ ಆಫೀಸರರೊಬ್ಬರು ಶಾಶ್ವತವಾಗಿರುವಂತೆ ನೇಮಕವಾದರೆ, ಇದು ಜಿಲ್ಲೆಯ ಮತ್ತೂ ಜನತೆಯ ಹಿತದೃಷ್ಟಿಯಿಂದ. ಒಳ್ಳೆದೆಂದು ನಮಗಂತೂ ತೋರುತ್ತದೆ.

### ನಮ್ಮ ಬೋರ್ಡಿಗೊಬ್ಬ ಹೊಸ ಆಫೀಸರು

ನೇಮಕವಾದರೆಂದು, ಪತ್ರಿಕೆ ಮುದ್ರಾಯಂತ್ರದ ಬಳಿ ಸಾರುತ್ತಿರುವಾಗಲೇ ತಿಳಿದುಬರುತ್ತಿದೆ. ನೇಮಕವಾದುದಷ್ಟೇ ಅಲ್ಲ; ಎಕ್ಸ್-ಒಫೀಶಿಯೋ ಪ್ರೆಸಿಡೆಂಟರ ಪರ್ಸನಲ್ ಅಸಿಸ್ಟಾಂಟರಾಗಿ, ಮಿ. ಇ. ಎಚ್. ಎಸ್. ಅಬ್ರಹಾಂರವರು, ತಮ್ಮ ಆ ಚಾರ್ಜನ್ನೂ ಆಗಲೇ ನಹಿಸಿಕೊಳ್ಳಲಿರುವರೆಂಬುದೂ ಸಂತೋಷದ ವಾರ್ತೆಯಾಗಿದೆ. ಇವರು ಆ ಸ್ಥಾನಕ್ಕೆ ಸಮರ್ಥರೂ, ಯೋಗ್ಯರೂ, ದಕ್ಷರೂ ಎನ್ನುವಲ್ಲಿ ಎರಡು ಅಭಿಪ್ರಾಯಗಳಿರಲಾರದು. ಈ ಮಹನೀಯರು ಕೆಲವು ಸಮಯದಿಂದ ಮೈಸೂರಲ್ಲಿ ರೆವಿನ್ಯೂ ಡಿವಿಜನಲ್ ಆಫೀಸರಂತಿರುವರು; ಇದಕ್ಕೆ ಮೊದಲೇ ಇವರು ನಮ್ಮ ಜಿಲ್ಲೆಯಲ್ಲಿಯೇ ಇದ್ದವರು. ಆದಕಾರಣ ನಮ್ಮ ಜಿಲ್ಲೆಯ ವಿದ್ಯಮಾನಗಳಲ್ಲಿ ಅನುಭವಶಾಲಿಗಳಾದ ಇವರು, ನಮ್ಮ ಎಕ್ಸ್-ಒಫೀಶಿಯೋ ಪ್ರೆಸಿಡೆಂಟರವರ ಸಮರ್ಥ ಮಾರ್ಗದರ್ಶಿತ್ವದಿಂದ, ಎಷ್ಟೋ ಕಾಲಕ್ಕೆ ಮೊದಲೇ ಆಗಬೇಕಾದ ಡಿ॥ ಬೋರ್ಡ್ ಆಫೀಸಿನ ದುರಸ್ತಿಯ ಕೆಲಸವನ್ನು ಸಮರ್ಪಕವಾಗಿ ಪೂರೈಸದಿರಲಾರರೆಂದು ನಂಬಬಹುದಾಗಿದೆ. ಇವರ ಕಾಲದಲ್ಲಿ ಡಿ॥ ಬೋರ್ಡ್ ಸಿಬಂದಿಯೂ, ಈ ಅಮೂಲ್ಯ ಸಂದರ್ಭವನ್ನು, ತಮ್ಮ ಸಂಪೂರ್ಣ ತರಬೇತಿಗಾಗಿ, ಮುಖ್ಯವಾಗಿ, ಕೂಡಲೇ ಕೆಲಸ ಕಾರ್ಯಗಳನ್ನು ಮುಗಿಸುವ ಈ ಶಿಕ್ಷಣಕ್ಕಾಗಿ, ಸದುಪಯೋಗ ಪಡಿಸಿಕೊಳ್ಳುವುದು ಸಮುಚಿತವೆಂದು ಸೂಚಿಸಬೇಕಾಗಿದೆ. ಒಮ್ಮೆ ಈ ಆಫೀಸರರು ಬೇಕಾದ ದುರಸ್ತು ಮಾಡಿ, ಬೋರ್ಡ್ ಆಫೀಸನ್ನು ಸುವ್ಯವಸ್ಥೆಗೆ ತಂದಿಟ್ಟರೆಂದರೆ, ಮುಂದೆ ಸೆಕ್ರೆಟರಿಗಳೂ ಇದೇ ಪದ್ಧತಿಯನ್ನು ಅನುಸರಿಸಿ ನಡೆಯುವಲ್ಲಿ ಸಂದೇಹ ತೋರದು. ಮಾತ್ರವಲ್ಲ. ಕಾಂಗ್ರೆಸಿನವರೆಂಬವರಿಂದ ನಾಮಕರಣ ಹೊಂದುವ ಆ ಕಾಂಗ್ರೆಸ್ ನಾಮದ ಹೊಸ ಪ್ರೆಸಿಡೆಂಟರೆನ್ನತಕ್ಕವರಾದರೂ, ಈ ಸುವ್ಯವಸ್ಥೆಯಿಂದ ಲಾಭ ಹೊಂದಿ, ಆ ಪದ್ಧತಿಯಂತೆಯೇ ನಡೆಯಲು ಮನಸ್ಸು ಮಾಡಿದರೆ, ಅವರಿಗೂ ಸುಖವುಂಟು; ಲೋಕಕ್ಷೇಮವೂ ಆದೀತು. ಒಟ್ಟಿನಲ್ಲಿ ಡಿ॥ ಬೋರ್ಡಿನ ಆರ್ಥಿಕ ಸ್ಥಿತಿ ಚೆನ್ನಾಗಿಲ್ಲವೆಂಬ ಮಾತುಂಟು. ಅದನ್ನು ಒಂದು ದಾರಿಗೆ ತಂದು, ಡಿ॥ ಬೋ॥ನ ಸಾಂಪತ್ತಿಕ ಸ್ಥಿತಿಯನ್ನು ಬಲಗೊಳಿಸಲು ನಮ್ಮ ಹೊಸ ಆಫೀಸರರು ತಮ್ಮ ಕೈಲಾದ ಪ್ರಯತ್ನಗಳನ್ನು ನಡೆಸಲೆಂದು ನಮ್ಮ ಹಾರೈಕೆ.

* * * * *

### ಲಾಹೋರು ಹೈಕೋರ್ಟಿನ ಚೀಫ್ ಜಸ್ಟೀಸರಾದ

ಸರ್ ಡಾಗ್ಲಸ್ ಯಂಗ್‌ರವರು, ಒಂದು ಖೂನೀ ಮೊಕದ್ದಮೆಯನ್ನು ಬಿಡುವಾಗ, ಪೋಲೀಸ್ ರುಜುವಾತುಗಳ ಕುರಿತು ಬಲವಾಗಿ ಆಕ್ಷೇಪಿಸಿರುವರು. 'ಸುಳ್ಳು ರುಜುವಾತುಗಳನ್ನು ಕಲ್ಪಿಸಿ ಮುಂದೆ ತಂದು ನ್ಯಾಯದಾನಕ್ಕೆ ಅಡ್ಡಿಯನ್ನುಂಟು ಮಾಡುವವರಿಗೆ' ಚೆನ್ನಾಗಿ ಎಚ್ಚರಿಸಿರುವರು. ಇಂತಹ ಮೊಕದ್ದಮೆಗಳು, ಒಂದೇ ವರ್ಷದಲ್ಲಿ ಆ ಕೋರ್ಟಿಗೆ ಹಲವು ಬಂದಿವೆ ಎಂದೂ ವಿಷಾದಿಸಿರುವರು. ಸುಳ್ಳು ರುಜುವಾತುಗಳನ್ನು ತರತಕ್ಕವರಿಗೆ ಪ್ರಾಶಿಕ್ಯೂಶನಿನ ಭಯವಿರಬೇಕಾದರೂ; ಪೋಲೀಸ್ ಶಾಖೆಯು ಅದನ್ನೇಕೆ ಹೀಗೆ ಅಲಕ್ಷಿಸುತ್ತಿರುವುದೋ ಇದನ್ನು ಬಲ್ಲವರುಂಟೇ? ಪೂಜಾರಿಗೆ ದೇವರ ಭಯವಿರಬಾರದೆಂದುಂಟೇ? ದೊರೆತನವಾದರೂ ಈ ಕೆಡುಕಿನ ವಿಚಾರಣೆಗಾಗಿ ಒಂದು ಸಮಿತಿಯನ್ನೇರ್ಪಡಿಸಿ, ಪೋಲಿಸರ ರುಜುವಾತುಗಳ ಮರ್ಮವನ್ನೇನೆಂದು ತಿಳಿಯಬಾರದೇ?

* * * * *

### ಬ್ರಿಟಿಶ್ ಸರಕಾರದ ಪಡಿನೆಳಲಾದ ಈಜಿಪ್ಟ್

ಅಲ್ಲಿನ ಸಾರ್ವಜನಿಕ ಚಳವಳಿಯನ್ನು ಮುರಿದೊತ್ತಲು ಉಗ್ರ ಉಪಾಯಗಳನ್ನು ಕೈಕೊಂಡಿದೆ. 'ಜೀವ ಮತ್ತೂ ಸ್ವಾಸ್ಥ್ಯಗಳ ರಕ್ಷಣೆಗಾಗಿ ಗುಂಡು ಹಾರುವುದೆಂದೇ' ಅಲ್ಲಿನ ಒಳದೇಶದ ಮಂತ್ರಿಗಳ ಡಂಗುರ. ಅದು ಸಹಜ. ಮಿಲಿಟರಿಯನ್ನು, ಮದ್ದುಗುಂಡಿನೊಡನೆ ತನ್ನ ಬಳಿ ಇಟ್ಟುಕೊಂಡ ಆಫೀಸರರಿಗೆ, ಅದನ್ನು 'ಜೀವ ಮತ್ತೂ ಸ್ವಾಸ್ಥ್ಯಗಳ ರಕ್ಷಣೆಗಾಗಿ' ಉಪಯೋಗಿಸಲು ಆಗಾಗ ಕೈ ತವಕಗೊಳ್ಳುವುದೇನಾಶ್ಚರ್ಯ? ಆಗಲೇ ಕೈರೋವಿನಲ್ಲಿ ಗುಂಡು ಹಾರಿ, ಕೆಲವು ಪ್ರಾಣಗಳೂ ಹಾರಿವೆ. ಇನ್ನು ಬ್ರಿಟಿಶ್ ಸರಕಾರವು ಈ ಏಂಗ್ಲೋ—ಇಜಿಪ್ಶಿಯನ್ ಸಮಸ್ಯೆಯನ್ನು ತೀರ್ಮಾನಿಸುವ ವರೆಗೂ, ಇನ್ನೂ ಕೆಲವು ಗುಂಡು ಹಾರಿ, ಇನ್ನೂ ಕೆಲವು ಪ್ರಾಣಗಳೂ ಯಮಪಟ್ಟಣಕ್ಕೆ ತೆರಳಬಹುದು. ಮೊನ್ನೆ ಇದೇ ಕುರಿತು ಕಾಮನ್ಸ್ ಮಂದಿರದಲ್ಲಿ ಮಾತು ಬಂದಾಗ, ಸರ್ ಹೋರ್ ಸಾಹೇಬರು 'ನಮಗೆ ಈಗ ಇದಕ್ಕೆಲ್ಲ ಹೊತ್ತಿಲ್ಲ. ಇಟಲಿ—ಅಬಿಸೀನಿಯದ ಯುದ್ಧವನ್ನು ನೀವು ಕಾಣಿರಾ? ಅಗೋ, ಅಲ್ಲಿ ನಮ್ಮ ತಲೆ ಇದೆ. ಆ ಯುದ್ಧ ಮುಗಿವ ವರೆಗೆ, ನಮ್ಮ ತಲೆ ಅಲ್ಲಿಂದ ಈಜಿಪ್ಟಿಗೆ ತಿರುಗಲು 'ಸಮಯವಿಲ್ಲ' ಎಂದುಬಿಟ್ಟರು. ಎಷ್ಟು ಜರೂರು ಕೆಲಸ! ಇದಕ್ಕೆ ನಮ್ಮ ಬ್ರಿಟಿಶ್ ವಿದೇಶೀ ಮಂತ್ರಿಗಳಿಗೆ ಖರ್ಚೇನಾದರೂ ಉಂಟೇ? ಅಂದ ಮೇಲೆ ಈಜಿಪ್ಟಿನಲ್ಲಿ ಎಷ್ಟು ಪ್ರಾಣಗಳು ಖರ್ಚಾದರೂ, ಆ ತಲೆಗಳ ಬೆಲೆ ಈ ಮಂತ್ರಿಗಳಿಗೆ ತಿಳಿಯುವುದು ಸಾಧ್ಯವೇ? ಹೇಗೆ?

* * * * *

### 'ಕೋರ್ಟಿನ ಅವಮಾನ'

ಈ ಅಪರಾಧವು ಮೊದಲು, ಪತ್ರಿಕಾ ಸಂಪಾದಕರು, ಗ್ರಂಥಕರ್ತರು, ಲಾಲಾ ಹರಿಕಿಶನ್ ಲಾಲರಂತಹ ದೊಡ್ಡ ಮನುಷ್ಯರು ಇಂತಹ ದೊಡ್ಡ ಮುಂಡಾಸಿನ ಸಾಲಿನವರಿಗೇ ಅನ್ವಯಿಸುತ್ತಿದ್ದರೆ, ಈಗ ಅದು ತಲೆ ಬಿಟ್ಟು ಓಡಾಡುವ ಸಾಮಾನ್ಯರ ಮೇಲೂ ತನ್ನ ಕಣ್ಣು ಹಾಕತೊಡಗಿದೆ. ಸಿಲ್ಹೆಟಿನಲ್ಲಿ ಒಬ್ಬ ಮೇಸ್ತ್ರಿ ಅವನು. ಸಬ್ ಡೆಪ್ಯುಟಿ ಕಲೆಕ್ಟರರ ಅಪ್ಪಣೆಯಂತೆ, ಕೆಲವು ಪೆಟ್ಟಿಗೆಗಳ ಬಾಯಿ ತೆಗೆಯುತ್ತಿದ್ದ. ಹತ್ತಿರದಲ್ಲಿಯೇ ಎಕ್ಸ್‌ಟ್ರಾ ಅಸಿ॥ ಕವಿಶನರರು, ತಮ್ಮ ಕೋರ್ಟಿನ ಕೋಣೆಯಲ್ಲಿ, ಏನೋ ಒಂದು ಮೊಕದ್ದಮೆಯ ವಿಚಾರಣೆ ನಡೆಸುತ್ತಾ ಇದ್ದರು. ಅವರಿಗೆ ಈ ಮೇಸ್ತ್ರಿ ಪೆಟ್ಟಿಗೆಯೊಡೆಯುವ ಶಬ್ದ ಸಹಿಸಲಾರದಾಯಿತು. ಕೂಡಲೇ ಮೇಸ್ತ್ರಿಗೆ ಹಾಗೆ ಮಾಡಬಾರದೆಂಬ ಅಪ್ಪಣೆ! ಪಾಪದ ಮೇಸ್ತ್ರಿ ಅಲ್ಲಿಂದೆದ್ದು ಸ್ವಲ್ಪ ದೂರ ಹೋಗಿ ಪುನಃ 'ಕಟಪಟ' ಶಬ್ದ ಮಾಡಲಾರಂಭಿಸಿದ. ಆದರೆ ಇದು ಕೂಡ ಕವಿಶನರರಿಗೆ ವಿಪರೀತವಾಗಿ, ಕೊನೆಗೆ ಅವನ ಮೇಲೆ ಕೋರ್ಟನ್ನು ಅವಮಾನಿಸಿದ ಆರೋಪ ಹೊರಿಸಿ, ೧೦ ರೂಪಾಯಿ ಜುಲ್ಮಾನೆ, ತಪ್ಪಿದರೆ ಜೈಲೆಂದು ಹುಕುಂ ಆಯಿತು. ಗ್ರಹಚಾರ ಹಿಡಿದ ಮೇಸ್ತ್ರಿಗೆ, ಕೂಲಿಗೆ ಬದಲು, ಹೊಟ್ಟೆ ತುಂಬ 'ಜುಲ್ಮಾನೆ'ಯೇ ಉಡುಗೊರೆ!

> *"We have increased our working expenses by embarking on a campaign of advertisement. Already, I think, we are beginning to see the results of that campaign in an increased knowledge and appreciation of the products, not only of our own factories, but of private enterprises in the State; in other words, we are on the way to proving again the truth of the adage that it pays to advertise."*
>
> *Sir M. Ismail, the Dewan of Mysore, addressing the Mysore Representative Assembly.*


# TO OUR UNKNOWN FRIENDS

THE OTHER DAY A BUSINESSMAN FROM ANOTHER TOWN CAME INTO THE BANK AND DEPOSITED A LARGE AMOUNT WITH US.

THE OFFICERS OF THE CANARA BANK ARE NOT SATISFIED MERELY TO HAVE PEOPLE PUT MONEY IN THE BANK. THEY WANT TO KNOW THE CUSTOMERS PERSONALLY—AN ACQUAINTANCE WHICH IS HELPFUL TO BOTH. ACCORDINGLY THE OFFICER ASKED THIS MAN WHETHER ANY ONE HAD RECOMMENDED HIM TO THE BANK.

HE SMILED AND SAID "I CAME INTO YOUR CITY FOR THE PURPOSE OF OPENING A BANK ACCOUNT, BUT WITH NO KNOWLEDGE OF BANKS. ON THE STREET, I SELECTED AN INTELLIGENT-LOOKING MAN PASSING BY AND ASKED HIM TO TELL ME THE NAME OF A GOOD BANK. HE REPLIED: CANARA BANK. I STOPPED A SECOND WITH THE SAME RESULT—AND THEY WERE MY RECOMMENDATIONS.

THIS MESSAGE IS DIRECTED TO THOSE "UNKNOWN FRIENDS". WE WANT TO THANK YOU AND THE SCORES OF OTHERS WHOSE FRIENDLINESS WE VALUE SO HIGHLY. MONEY CAN BUY MANY THINGS, BUT IT CANNOT PURCHASE REAL FRIENDSHIP. WE SHALL CONTINUE TO DO EVERYTHING POSSIBLE TO JUSTIFY YOUR CONFIDENCE AND MERIT YOUR RECOMMENDATION.

ESTD. 1906.

CANARA BANK

LIMITED.

# ವಿದೇಶ

ಇಂಗ್ಲಾಂಡಿನ ಓಡಿಹಾಮಿನಲ್ಲಿರುವ ಲೋರ್ಡ್ ಮತ್ತು ಲೇಡಿ ಡೊರ್ಹೆಸ್ಟರ್‌ರವರ ಸ್ವಾಧೀನದಲ್ಲಿದ್ದ ಟಿಪ್ಪು ಸುಲ್ತಾನನು ತನ್ನ ರುಮಾಲಿನಲ್ಲಿ ಧರಿಸುತ್ತಿದ್ದ ವಜ್ರವು ಕಳವಾಗಿದೆಯಾಗಿ ಪೋಲೀಸಿನವರಿಗೆ ತಿಳುಹಲಾಗಿದೆ.

ಈಗ ವಿಲಾಯತಿಯ ಪ್ರವಾಸವನ್ನು ಬೆಳಿಸುತ್ತಿರುವ ಢಿಲ್ಲಿಯ ಇಂಡೋ-ಜರ್ಮನ್ ಸ್ಕೂಸ್ ಎಕ್ಸ್‌ಟೆಂಜಿನ ಡಾ। ಎ. ಎಲ್. ಸಿಂಹರವರು ಬರ್ಲಿನಿನಲ್ಲಿ ಹರ್ ಹಿಟ್ಲರ್‌ರವರ ಭೇಟಿಯನ್ನು ಪಡಕೊಂಡರು.

ಹಾಲು ಮತ್ತು ಅದರ ಇತರ ಪದಾರ್ಥಗಳು ಅತಿ ಸಮೃದ್ಧವಾಗುತ್ತಿದೆಯಾದುದರಿಂದ ಡಚ್ ಸರಕಾರದವರು ಹಾಲನ್ನೀಯುವ ೧,೦೦,೦೦೦ ದನಗಳನ್ನು ಕೊಲ್ಲಲು ಅಲ್ಲೋಚಿಸುತ್ತಿರುವರು.

ಅಫಘಾನ್ ಸರಕಾರದವರು ೫ ರೂಪ್ಯಾ ಮೌಲ್ಯದ ಎರಡು ಮಿಲಿಯ ನೋಟುಗಳನ್ನು ಚಲಾವಣೆಗೆ ತಂದಿರುವರು.

ಕ್ರಿಸ್ಮಸಿಗೆ ಮುಂಚಿತವಾಗಿಯೇ ಸುಮಾರು ೩೭ ಸಾವಿರ ಕೈದಿಗಳನ್ನು ಬಿಡುಗಡೆ ಮಾಡಲು ಪೋಲೆಂಡ್ ಸರಕಾರದವರು ನಿಶ್ಚೈಸಿರುವರು.

ಗವರ್ನಮೆಂಟ್ ಒಫ್ ಇಂಡಿಯದ ಪುನರ್ಮುದ್ರಣದ ಬೀಲಿಗೆ ಸಾರ್ವಭೌಮರ ಸಮ್ಮತಿ ದೊರಕಿದೆ.

ಲೀಗ್ ಒಫ್ ನೇಶನ್ಸಿನ ಸಭೆಯು ಜನವರಿ ತಾ. ೧೫ರ ವರೆಗೆ ಮುಂದರಿಸಲಾಗಿದೆ.

ಊಸವನ್ನುಳ್ಳ ಮಕ್ಕಳ ಪೋಷಣೆಗಾಗಿ ಲೋರ್ಡ್ ನಫೀಲ್ಡ್ ವರು ೧,೩೫,೦೦೦ ಪವನುಗಳನ್ನು ದಾನ ಮಾಡಿರುವರು.

೧೯೨೪ರಲ್ಲಿ ನಡೆದ ಆಸ್ಟ್ರಿಯದ ನಾಜಿ ದಂಗೆಯಲ್ಲಿ ಭಾಗ ವಹಿಸಿದರೆಂದು ಆಲ್ಲಿಯ ಪೋಲೀಸು ಅಧಿಕಾರಿಗಳಾಗಿದ್ದ ಡಾ। ಒಟ್ಟೊ ಸ್ಟೈನ್ ಹೌಸ್ಲ್ಲರವರಿಗೆ ೬ ವರ್ಷಗಳ ಕಾರಾಗೃಹವಾಸವು ವಿಧಿಸಲಾಗಿದೆ.

ಈಗ ಅನೇಕ ದಿನಗಳಿಂದ ಡಚೆಸ್ ಒಫ್ ಯೊರ್ಕ್‌ರವರು ಇನ್‌ಫ್ಲುಯೆಂಜಾ ಜ್ವರಪೀಡಿತರಾಗಿರುವರು.

ಕೈರ್‌ಪುರದ ಸಂಸ್ಥಾನಾಧೀಶರು ಹೃದ್ರೋಗಪೀಡಿತರಾಗಿ ವಿಷಮ ಸ್ಥಿತಿಯಲ್ಲಿರುವರೆಂದು ತಿಳಿದುಬರುತ್ತದೆ.

ಸರ್ ಸಾಮ್ಯುವೇಲ್ ಹೋರರು ತಮ್ಮ ವಿದೇಶೀ ಕಾರ್ಯಭಾರಗಳ ಮಂತ್ರಿಪದವಿಗೆ ರಾಜಿನಾಮೆ ಕೊಟ್ಟರು. ಅಬಿಸೀನಿಯದವರ ಗತಿ ಏನಾದರೂ, ಅವರೊಪ್ಪಿದ್ದರೂ, ಮುಸಲೋನಿಯವರಿಗೆ ಅನುಕೂಲಿಸುವ ಒಂದು ಸಂಧಿಯಾಗಲೆಂದು, ಫ್ರಾನ್ಸಿನ ಲಾವಲ್ ರೊಡನೆ ಇವರು ಪ್ರಯತ್ನಿಸಿದುದು ಇವರ ಪಂಗಡದವರಿಗೇ ಸರಿಬೀಳದೆ, ಇವರಿಗೆ ಈ ಸ್ಥಿತಿ ಉಂಟಾಯಿತು. ಭಾರತದ ಸುಧಾರಣೆಗಳಲ್ಲಿ ಇವರ ಮಾತೇ ಮೇಲೆನಿಸಿ ಇವರು ಕೃತಾರ್ಥರಾದರೂ, ಈಜಿಪ್ಟಿನಲ್ಲಿ, ಅಬಿಸೀನಿಯದಲ್ಲಿ ಇವರ ಬೇಳೆ ಬೇಯಲಿಲ್ಲ. ಇಲ್ಲಿಗೆ ಇವರ ರಾಜನೀತಿ ಪಾಂಡಿತ್ಯದ ತಲೆ ಪೂರ್ಣ ವಿರಾಮ ಪಡೆಯಲಿರುವುದೇನೋ!

ಅಬಿಸೀನಿಯದವರ ದೆಸೆ ತಿರುಗಿ ಸ್ವಲ್ಪ ಸಮಯ ಬಿಟ್ಟಿತು. ಅಬಿಸೀನಿಯದವರು ಕಳೆದ ವಾರದಲ್ಲಿಯೂ ಜಯಲಾಭವನ್ನು ಪಡೆದು ಇಟೆಲಿಯವರನ್ನು ಹಿಂದಕ್ಕಟ್ಟಿದ್ದಾರೆ. ರಣರಂಗದ ಎಲ್ಲ ಕಡೆಗಳಲ್ಲಿಯೂ ಯುದ್ಧ ನಡೆಯುತ್ತಿದ್ದು, ಇಟೆಲಿಯವರಿಗೆ ಜಯಲಾಭದ ಕುರುಹುಗಳು ತೋರುವುದಿಲ್ಲ. ಡೆಂಬಿಗ್ವಿಸ ಕಣಿವೆಯಲ್ಲಿ ನಡೆದ ಕಾಳಗದಲ್ಲಿ ಇತ್ತಂಡದವರೂ ವೀರಾವೇಶದಿಂದ ಹೋರಾಡಿಯೂ ಇಟೆಲಿಯವರು ಹಿಮ್ಮೆಟ್ಟಿರುವರು. ಇಷ್ಟು ಕಠಿನ ಯುದ್ಧ ನಡೆದುದು ಇದೇ ಮೊದಲು. ಅಬಿಸೀನಿಯದವರಿಗೆ ಮೆಶೀನ್ ಗನ್ನು, ವಿಮಾನಗಳ ಬಾಂಬ್ ಇವುಗಳ ಭಯವೀಗ ತಪ್ಪಿ, ಹೋರರ ರಾಜೀನಾಮೆಯಿಂದ ರಣೋತ್ಸಾಹವು ಉಕ್ಕೇರಿದಂತಿದೆ.


ಕೆನರಾ ಬೇಂಕಿಂಗ್ ಕಾರ್ಪರೇಶನ್,

ಲಿಮಿಟೆಡ್.

ಈ ಸಂಸ್ಥೆಯ ೧೦—೧೨—'೭ಕ್ಕರ ವರೆಗಿನ ಅಭಿವೃದ್ಧಿಯ ವರದಿಯು ನಮ್ಮ ಹಸ್ತಗತವಾಗಿದೆ. ಈ ವರದಿಯಲ್ಲಿ ಕಳೆದ ೧೭ ವರ್ಷಗಳ ಸಂಬಂಧದ ಅಭಿವೃದ್ಧಿ ಸ್ಥಿತಿಯು ವಿವರಿಸಲ್ಪಟ್ಟಿದೆ. ಈ ಕೆಲವು ವರ್ಷಗಳಲ್ಲಿ, ಮುಖ್ಯವಾಗಿ ೧೯೨೦ರಿಂದ ೭ಕ್ಕರ ವರೆಗೆ, ಧಾನ್ಯದವಸಗಳ ಬೆಲೆ ಇಳಿದು, ವ್ಯಾಪಾರವು ಮಂದವಾಗಿ, ಜನರ ಕೈಯಲ್ಲಿ ದುಡ್ಡಿಲ್ಲದೆ ತಾಪತ್ರಯಕ್ಕೆ ಈಡಾಗಿದ್ದರೂ ಕೂಡ, ಜನತೆಗೆ ಈ ಸಂಸ್ಥೆಯಲ್ಲಿರುವ ಸ್ಥಿರವಾದ ವಿಶ್ವಾಸದಿಂದ, ಈ ಸಂಸ್ಥೆಯು 'ಡಿಪೊಜಿಟು'ಗಳು ಲಕ್ಷಗಟ್ಟಲೆಯಾಗಿ ವರ್ಷದಿಂದ ವರ್ಷಕ್ಕೆ ಹೇಗೆ ಏರಿವೆ, ಸರಕಾರದ ಭದ್ರತೆಗಳನ್ನು ಹೆಚ್ಚಾಗಿ ಪಡೆದುಕೊಳ್ಳಲು ಹೇಗೆ ಶಕ್ತವಾಗಿದೆ ಎಂಬುದು, ಈ ಸಂಬಿಕೆಯ ಇನ್ನೊಂದು ಕಡೆ ಪ್ರಕಟವಾದ ಆ ಸಂಸ್ಥೆಯ ಜಾಹಿರಾತಿನ ಅಂಕೆಸಂಖ್ಯೆಗಳಿಂದ ಸಂಪೂರ್ಣ ಖಚಿತವಾಗುತ್ತದೆ. ಪ್ರತ್ಯೇಕವಾಗಿ ಈ ವರ್ಷದ 'ಬೇರೆ ಬೇಂಕುಗಳಲ್ಲಿ ಶೇವಣಾತಿ' ಎಂಬ ಈ ವಿಭಾಗವು, ಈ ಸಂಸ್ಥೆಯ ಮುಂದಿನ ವ್ಯವಹಾರಕ್ಕೆ ಬೇಕಾದ ಮುಂಜಾಗರೂಕತೆಯ ಯೋಜನೆಯ ಪರಿಣಾಮವಾಗಿದೆ. ಒಟ್ಟಿನಲ್ಲಿ, ಈ ಜಿಲ್ಲೆಯಲ್ಲಿ ಪ್ರಥಮತಃ ಸ್ಥಾಪಿಸಲ್ಪಟ್ಟ ಈ ಮೊದಲನೆಯ ಬೇಂಕಿಂಗ್ ಸಂಸ್ಥೆಯ ಕ್ರಮಬದ್ಧಿತ ಸರ್ವತೋಮುಖವಾದ ಅಭಿವೃದ್ಧಿಯ ಕುರಿತು ಹೆಚ್ಚು ಹೇಳಬೇಕಿಲ್ಲ. ಇದರ ಮ್ಯಾನೇಜರರಾದ ಶ್ರೀ. ಎಂ. ಶ್ರೀನಿವಾಸ ಪ್ರಭುಗಳ ಹೊರದರ್ಶಿತ್ವದ ಕಾರ್ಯದಕ್ಷತೆಯಿಂದಲೂ, ಅವರ ಸಿಬಂದಿಯ ನಿರಂತರವಾದ ಪರಿಶ್ರಮದಿಂದಲೂ, ಇದರ ಈಗಿನ ಸಮರ್ಥ ಪೈಸಿಡೆಂಟರಾದ ಡಾ. ಸುಂದರರಾಮ ಪೈಗಳ ಮತ್ತೂ ಜಾಣ ಡೈರೆಕ್ಟರ್ ಮಂಡಲದ ಸಹಾಯಸಹಕಾರಗಳಿಂದಲೂ ಸುಭದ್ರವಾದ ತಳಹದಿಯ ಮೇಲೆ ನಿಂತಿರುವ ಈ ನಮ್ಮ ಸ್ಥಳೀಯ ಸಂಸ್ಥೆ ಇನ್ನಷ್ಟು ಉತ್ತರೋತ್ತರವನ್ನು ಹೊಂದಲೆಂದು ಹಾರೈಕೆ.


## ವೀರ ಕಾರವಾರ

### (ಫ್ರಾಂತಿಕ ಕಾಂಗ್ರೆಸ ಜುಬಿಲಿ ಮಂಡಳಿ)

(ಧಾಟಿ:—'ಮಾತೃಭೂಮಿ ಜನನಿ ನಿನ್ನ । ಎಂಬಂತೆ)

೧

ಕಾರವಾರ ಸೀಮೆ ತಾನೆ ತಾನು ಕಂಟಿಯೆಂಬದೆ
ದೂರಿ ಮೂಗು ಮುರಿದು ಗಂಜಿ ಕುಡಿವ ನಾಡದೆಂಬದೆ
ಮಾರುನುಡಿಯೆ ಸುರನರೋರಗಾಗಿ ಸರ್ವ ಸೃಷ್ಟಿಯ
ತೋರಿ ಸಂದ ಸಹ್ಯ ಸೃಷ್ಟಿ ಸೈಪಿನೊಸಗೆ ಸೀಮೆಯು

೨

ಹೊಗರೊಕ್ಕಲಿಗರ ನಾಡವಾದಿ ಜನರ ಬೀಡಿದೊ
ತೂಗಿ ನೋಡೆ ಕರಿಯ ನಾಡ ಕರನಿರೋಧದೆಡೆಯಿದೊ
ಬಾಗಿ ಬರದೆ ಬವರದಲ್ಲಿ ಬೆಂದ ಮುಂದಿ ಭುವಿಯಿದೊ
ತ್ಯಾಗೆ ತನಗೆ ಭೋಗ ಭುವಿಗೆಯೆಂಬ ಯೋಗಬಲವಿದೊ

೩

ಯೋಗ ರೂಪಯಾಗದಲ್ಲಿ ಯುವತಿಜನವೆ ಮುಂದಿದೆ
ರಾಗದಿಂದ ಸಾಗಿ ಬಂದ ಯೋಗಮಾಯೆಯಂತಿದೆ
ನೀಗಿ ನಿಂದನಾಥಗೇಹ ವೃಂದದಿಂದೆ ಸಂದಿದೆ
ಭೋಗಭೂಮಿ ತ್ಯಾಗಮೂರ್ತಿ ಮೂರ್ತಿಭವಿಸಿ ನಿಂದಿದೆ

೪

ಆಗು ಹೋಗು ತಾಗು ಬಾಗು ಜಾಗುಗೀಗು ಸಾಗಿವೆ
ಹೋಗದಿರುವ ಹೊಗೆಯದೊಂದು ಯುಗದಿ ಎದ್ದು ಮುಂದಿದೆ
ಭೋಗಭೂಮಿ ಭಾರತಾಂಬೆ ಇಂಬಿಗೆಡೆಯಗೊಟ್ಟಿದೆ
ಹೊಗೆಯ ಹಿಂದೆ ಯುಗದ ಧರ್ಮ ನಗುತೆ ಈಗ ನಿಂದಿದೆ

**ಸೂಚನೆ:**—ಈ ಪದ್ಯವನ್ನು ಕಾಂಗ್ರೆಸ ಮಹೋತ್ಸವದ ಕಾಲಕ್ಕೆ ಅನ್ವಯಿಸಬಹುದು.

**ಸರ್ ಸಿ. ಶಂಕರನ್ ನಾಯರರು.**

೧೯೨೬ನೇ ಇಸವಿಯ ಅಮರಾವತಿ ಕಾಂಗ್ರೆಸಿನ ಅಧ್ಯಕ್ಷರು. ಪಶ್ಚಿಮ ಕರಾವಳಿಯ ಕಾಂಗ್ರೆಸು ಅಧ್ಯಕ್ಷರೆಂದರೆ ಇವರೇ.

## ವಾರದ ಭವಿಷ್ಯ

### (ನಮ್ಮ ಜೋಯಿಸರಿಂದ)

**ಅಕ್ಕಿ:**—ತಾ. ೨೪ರ ನಂತರ ಮಾರ್ಕೆಟ್ ಸ್ವಲ್ಪ ಕುಸಿದು ತಾ. ೨೬ರ ನಂತರ ಸ್ಥಿರವಾಗಿರುವುದು. **ಬೆಳ್ಳಿ:**—ತಾ. ೨೪ರ ನಂತರ ಈ ಮಾರ್ಕೆಟ್‌ನಲ್ಲಿ ದುರ್ಬಲತೆಯೂ ನಿರಾಶೆಯೂ ಹುಟ್ಟುವುದು. **ಚಿನ್ನ:**—ತಾ. ೨೨ರ ನಂತರ ಕುಸಿದ ಮಾರ್ಕೆಟು ಸ್ಥಿರತ್ವವನ್ನು ಹೊಂದುವುದು. **ಕಾಫಿ:**—ತಾ. ೯ರ ನಂತರ ಸ್ವಲ್ಪ ಮಟ್ಟಿಗೆ ಬೆಲೆಯು ಊರ್ಧ್ವಮುಖವಾಗಿ ವಾತಾವರಣವು ಆಶಾಜನಕವಾಗುವುದು. **ಏಲಕ್ಕಿ:**—ತಾ. ೨೭ರ ನಂತರ ಸ್ವಲ್ಪ ತೇಜಿಯ ಸಂಭವ. **ತೆಂಗಿನ ಎಣ್ಣೆ:**—ಈ ವಾರದಲ್ಲಿ ಬೆಲೆಯು ಕಮ್ಮಿಯಾಗುವುದು ನಿಶ್ಚಯ. **ಗೇರು ಬೀಜ:**—ಈ ವಾರದಲ್ಲಿನ ಮಂದಿಯು ನಿರಾಶೆಯನ್ನು ಹುಟ್ಟಿಸುವುದು. **ಅರಳೆ:**—ತಾ. ೨೮ರ ನಂತರ ತೇಜಿಯ ಲಕ್ಷಣಗಳು ತೋರುತ್ತವೆ.

**ಸಾಮಾನ್ಯ ವಿಚಾರಗಳು:**—೧೯೨೬ನೇ ಮಾರ್ಚ ಮಾಸದಲ್ಲಿ ವಿಷಮ ಸ್ಥಿತಿಯಲ್ಲಿರುವ ರಾಜಕೀಯ ಪರಿಸ್ಥಿತಿಯು ಅಲ್ಲಿಂದಲ್ಲೇ ತಮ್ಮಣೆ ಆಗಬಹುದು. ಮಹಾತ್ಮಾಜಿಯವರು ರಾಜಕೀಯ ಜೀವನದಿಂದ ತಾವಾಗಿಯೇ ನಿವೃತ್ತರಾಗಬಹುದು. ಅಥವಾ ಸಂದರ್ಭ ವಿಶೇಷಗಳಿಂದ ಅವರು ರಾಜಕೀಯ ಶರಸನ್ಯಾಸವನ್ನು ಸ್ವೀಕರಿಸಲೂ ಬಹುದು. ಇವನ್ನು ಅವರು ಯಾವ ರೀತಿಯಲ್ಲೂ ತಡೆಯಲಾರರು. ೧೯೨೬ನೇ ಜೂನಿನಲ್ಲಿ ಇಂಡಿಯದ ರಾಜಕೀಯ ಕ್ಷೇತ್ರದಲ್ಲಿ ಉಗ್ರ ಪಕ್ಷದ ಮುಡಿ ಪಂತರು ತಮ್ಮ ಪ್ರತಾಪವನ್ನು ತೋರಬಹುದಾದರೂ ಕೊನೆಯಲ್ಲಿ ಅವರ ಪ್ರಯತ್ನಗಳೆಲ್ಲಾ ವ್ಯರ್ಥವಾಗುವವು. ಹಿಂದೀ ಯುವಕರು ಇದುವರೆಗೆ ಗುಪ್ತವಾಗಿರಿಸಿಕೊಂಡ ಶಕ್ತಿಯನ್ನು ಈಗ ತಾನೇ ಪ್ರಯೋಗಿಸಲು ಪ್ರಯತ್ನಿಸುವರು. ಬರುವ ವರ್ಷದ ಅಧಿಯಲ್ಲಿ ಹಲವು ರಾಷ್ಟ್ರಗಳ ಕಿರೀಟಪತಿಗಳು ಮತ್ತು ಅಧಿಕಾರನಿಯುಕ್ತ ಪ್ರಭುಗಳೂ ಶಾಂತಿ ಸಂಧಾನಗಳಿಗಾಗಿ ಕೈಲಾದಷ್ಟು ಹೋರಾಡುವರು; ಆದರೆ ನಿರರ್ಥಕ. ೧೯೨೬ನೇ ಇಸವಿ ದ್ವಿತೀಯ ತ್ರೈಮಾಸಿಕ ಕಾಲದಲ್ಲಿ ಇಟೆಲಿ ತನ್ನ ಯುದ್ಧ ವೀರನಾದ ಮುಸ್ಸೊಲನಿಯ ಸಹಿತ ಅಬಿಸೀನಿಯದಲ್ಲಿ ತನ್ನ ಸ್ವಾಸ್ಥ್ಯಗಳ ಕುರಿತು ಸಂಧಾನ ಮಾಡಿಕೊಳ್ಳುವದು; ಆದರೆ ಅದಕ್ಕೆ ಇದರಿಂದ ಹೆಚ್ಚಿನ ಲಾಭವೇನೂ ಇಲ್ಲ. ಇದೇ ಸಮಯದಲ್ಲಿ ಭಾರತವು ಕುಂಭದ ಒಂದು ಹೊಸ ರಾಜ್ಯಭಾರದ ಕನುಕ್ಕೊಳ್ಳಪಡುವದು. ಆಗ ನಮ್ಮ ರಾಷ್ಟ್ರೀಯ ಮಂದಾಳುಗಳು ಹೊಸ ಹುರುಪು ತಳೆಯುವರು. ಅವರ ನಿರ್ಧಾರವು ಬಲಗೊಳ್ಳುವದು. ಭಾರತದಲ್ಲಿ ಸೆಲ್ಫ್ ಗವರ್ನಮೆಂಟನ್ನು ಪಡೆಯಲು ಮುಂದೊತ್ತಲು ನೋಡುವರು. ಆಗ ಹಿಂದೂಸ್ಥಾನಕ್ಕೆ ತನ್ನ ಅಮೂಲ್ಯ ಸೇವೆಯನ್ನು ಅರ್ಪಿಸಿರುವ ಮಹಾತ್ಮರು ವಿಶ್ರಾಂತಿಯನ್ನು ಪಡೆಯಲೆಳಸುವರು. ಈ ಸಂದರ್ಭದಲ್ಲಿ ಅವರು ತೆರೆಮರೆಯ ಹಿಂದೆ ನಿಂತು ಸೂತ್ರಗಳನ್ನು ಆಡಿಸುವರೋ ಅಥವಾ ಅವರ ಚರಿತ್ರೆಯ ಪಟಿಕೆಗಳಿಂದ ವಿಶ್ರಾಂತಿಯನ್ನೇ ಪಡೆಯುವರೋ ಎಂಬುದನ್ನು ಮುಂದಿನ ಇತಿಹಾಸದಿಂದಲೇ ತಿಳಿಯಬೇಕಾದರೂ, ದೇಶದ ರಾಜನೀತಿಯಲ್ಲಿ ವಿಶೇಷ ಉತ್ಸಾಹವು ಕಂಡುಬರುವುದು. ಈ ಉತ್ಸಾಹದ ಫಲವಾಗಿ ಅಲ್ಪಸ್ವಲ್ಪ ಜಯಲಾಭವೂ ದೊರಕಲೂ ಬಹುದು.


### ಕಾಂಗ್ರೆಸಿನ ಕುರಿತು ಮಾಜಿ ಪ್ರಧಾನ ಮಿ. ಮೆಕ್ಡನಾಲ್ಡರೆಂದಿರುವುದೇನು?

ಭಾರತ ರಾಷ್ಟ್ರೀಯ ಮಹಾಸಭೆಯ ಇತಿಹಾಸವು, ನ್ಯಾಶನಲ್ ಚಳವಳಿಯ ಇತಿಹಾಸವೇ ಆಗಿದೆ. ೧೮೮೫ರಲ್ಲಿ ಆರಂಭವಾದ ಸಂಸ್ಥೆ . . . . ಪೂರ್ಣ ರಾಜಕೀಯವಾಗಿದೆ. ಓಟಿನ ಹಕ್ಕು ಮತ್ತೂ ಜವಾಬುದಾರಿ ಇವೆರಡು ಅವರ ಕೇಳಿಕೆ. ಈ ಕೇಳಿಕೆಗಳು ಎಂದೂ ಬ್ರಿಟಿಷರಿಗೆ ವಿರುದ್ಧವಾದುದಲ್ಲ; ಈ ಸಂಸ್ಥೆ ಬ್ರಿಟಿಷ ರಾಜರ ಕೈಕೆಳಗೆ, ಸೆಲ್ಫ್ ಗವರ್ನಮೆಂಟ್ ಸಾಕೆಂದು ಕೇಳುವಷ್ಟರಲ್ಲಿ ಮಾತ್ರವೇ ತೃಪ್ತವಾಗಿದೆ. ಆದರೆ, ಇದರಿಂದ ಎಡ ರೆಕ್ಕೆ ಎಂಬುದೊಂದು ತಂಡವು ಹುಟ್ಟಿ, ಕ್ರಮಶಃ ಅದು ಸ್ವತಂತ್ರಸ್ಥಾನವನ್ನು ದೊರಕಿಸಿಕೊಂಡು, ತಾನೇ ತಾನಾಗಿ ವ್ಯಾಪಿಸತೊಡಗಿದೆ. ಆಂಗ್ಲೋ ಇಂಡಿಯನ್ ರಾಜ್ಯಭಾರಕರ್ತೃವು, ಈ ದೆಸೆಯಿಂದ, ತನ್ನ ಸುಯೋಗವನ್ನು ಕಳೆದುಕೊಂಡನು. ಯಾವ ಕಾಂಗ್ರೆಸು, ಉಪಕಾರಕ್ಕೆ ಬೇಳುವ ಒಂದು 'ವಿಷುಶಾಸಂಸ್ಥೆ' ಎಂದು ಪರಿಭಾವಿಸಲ್ಪಡಬೇಕಾಗಿತ್ತೋ, ಆ ಸಂಸ್ಥೆಯನ್ನು ಆ ರಾಜ್ಯಭಾರಕರ್ತೃವು, ಎಂದೂ ಸಂಧಿಗೊಪ್ಪದ ಶತ್ರುವೆಂದು ತಿಳಿಕೊಂಡನು. ಅದನ್ನು ವಕ್ರದೃಷ್ಟಿಯಿಂದ ನೋಡಿದನು. ಅವನೀ ಕಾಸನ್ನು ಆ ಎಡ ರೆಕ್ಕೆಯ ದಯಾಭಾವದ ಪೋಷಣೆಗೇ ಬಿಪ್ಪಿಸಿಬಿಟ್ಟಿನಿನ್ ಫಿನಿನ ರೀತಿಯ ತತ್ವವೂ, ರಾಜಕೀಯ ಬಹಿಷ್ಕಾರದ ಸ್ವಪ್ನ ತಪ್ಪುಗಳಿಂದಲೇ ಉತ್ತೇಜಿಸಗೊಳಿಸಲ್ಪಟ್ಟುವು!

'ಚಿತ್ರಾ ಟಾಕೀಸಿ'ನಲ್ಲಿ ಸದ್ಯದಲ್ಲೇ ಬರುವ 'ಚಂದ್ರಸೇನಾ'ದ ಒಂದು ದೃಶ್ಯವಿದು.

### ಬಿಳೇ ತೊನ್ನು—

### ಮತ್ತೂ ಕುಷ್ಠ ರೋಗ.

ಈ ಔಷಧದ ಕೆಲವು ದಿನಗಳ ಸೇವನೆಯಿಂದಲೇ ಬಿಳೇ ತೊನ್ನೂ ಕುಷ್ಠರೋಗವೂ ಸಂಪೂರ್ಣವಾಗಿ ಗುಣವಾಗುತ್ತದೆ. ಸೂರಾರು ಮಂದಿ ಹಕೀಮರೂ, ಡಾಕ್ಟರುಗಳೂ, ಕವಿರಾಜರೂ, ಜಾಹೀರಾತುಗಳನ್ನು ಪ್ರಕಟಿಸಿದವರೂ ಈ ಭಯಂಕರ ವ್ಯಾಧಿಯನ್ನು ಗುಣಮಾಡಲಾರದೆ ಹೋಪರೂ [illegible] ಕೈಬಿಟ್ಟಿರುವ ಈ ಔಷಧವನ್ನು ಒಮ್ಮೆ ಪರೀಕ್ಷಿಸಿ ನೋಡಿ. ಇದು ವ್ಯರ್ಥವೆಂದು ರುಜುವಾತಾದಲ್ಲಿ ನಮ್ಮ ಬಹುಮಾನ ರೂ. 500.

**Vaidiya Raj Akhila Kishori Ram,**
*No. 223, P. O., Katri Sarai. (GAYA).*

ಪತ್ರ ವ್ಯವಹಾರ ಇಂಗ್ಲೀಷಿನಲ್ಲೇ.

### ಗುಪ್ತ ಮಂತ್ರ

### 100 ರೂಪಾಯಿಗಳ ಬಹುಮಾನ.

ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದರೂ ಸಾಧಿಸಬಹುದಾದ ಕೆಲಸಗಳು ಈ 'ಮಂತ್ರ'ದ ಏಳು ಬಾರಿಯ ಪುನರುಚ್ಚಾರಣೆಯಿಂದಲೇ ಸಾಧ್ಯವಾಗುವುವು. ಆದರ ಪರಿಣಾಮವು ನೆಟ್ಟಗಾಗುವಂತೆ ಮಾಡಲು ನೀವು ಸ್ವಲ್ಪವೂ ಕಷ್ಟಪಡಬೇಕಾಗಿಲ್ಲ. ಯಾವ ಸಿದ್ಧತೆಯೂ ಇಲ್ಲದೆ ಅದು ಒಳ್ಳೆಯ ಫಲ ಕೊಡುವುದು. ಅಕೆ ಎಷ್ಟೇ ಕಠಿನ ಮನಸ್ಸಿನವಳಾಗಿಯೂ, ಗರ್ವಿಷ್ಠೆಯಾಗಿಯೂ ಇರಲಿ! ಈ ಮಂತ್ರವನ್ನು ಓದಿದಾಗ ಅವಳಲ್ಲಿ ನಿಮ್ಮ ಮೇಲಿನ ಮಮತೆಯುಂಟಾಗಿ, ನಿಮ್ಮೊಡನೆಯೇ ಯಾವಾಗಲೂ ಇರಬೇಕೆನ್ನುವ ಹಂಬಲು ಹುಟ್ಟುವುದು. ಇದಕ್ಕೆ 'ವಶೀಕರಣ ಮಂತ್ರ'ವೆನ್ನುವರು. ಅದು ನಿಮ್ಮನ್ನು ಅದೃಷ್ಟಶಾಲಿಯನ್ನಾಗಿ ಮಾಡುವುದು; ನಿಮಗೆ ಕೆಲಸವನ್ನೂ 'ಎಡ್ವಾನ್ಸ್'ನ್ನೂ ಕೊಡಿಸುವುದು; ವ್ಯಾಜ್ಯ ವ್ಯವಹಾರಗಳಲ್ಲಿ ನೀವು ಗೆಲ್ಲುವಂತಾಗುವುದು; ವ್ಯಾಪಾರದಲ್ಲಿ ನಿಮಗೆ ಲಾಭ ಬರುವುದು. ಇದು ಸುಳ್ಳೆಂದು ರುಜುವಾತಾದಲ್ಲಿ ನಿಮಗೆ ನಮ್ಮ ಬಹುಮಾನ—ರೂ. 100! ಪೋಸ್ಟೇಜ್ ಕೂಡ ಬೆಲೆ ರೂ. 2—7—0.

ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

**Siddha Manthra Ashram,**
*No. 174, P. O. Katri Sarai, (GAYA.)*

### ಸಿದ್ಧ ಮಂತ್ರ.

### ಇದೇ ಸಿದ್ಧ ವಶೀಕರಣ ಮಂತ್ರವಾಗಿದೆ.

ಈ ಮಂತ್ರವನ್ನು ಉಚ್ಚರಿಸಿದ ಮಾತ್ರದಿಂದಲೇ ಅತ್ಯಂತ ಕಷ್ಟತರವಾದ ಉದ್ದೇಶವಾದರೂ ಸಫಲವಾಗುವುದು. ನಿಮಗೆ ಬೇಕಾದಾಕೆ ಬಹಳ ಕಠಿನ ಹೃದಯಿಯೂ, ಗರ್ವಿಷ್ಠಳೂ ಆಗಿದ್ದರೂ ಕೂಡ, ಆಕೆ ಈ ಮಂತ್ರದಿಂದ ನಿಮ್ಮ ಬಳಿಗೆ ಬರುವಳು. ಈ ಮಂತ್ರಬಲದಿಂದ ನಿಮಗೆ ಪರೀಕ್ಷೆಗಳಲ್ಲಿ ಜಯ, ವ್ಯಾಪಾರದಲ್ಲಿ ಲಾಭ, ವ್ಯಾಜ್ಯ ವ್ಯವಹಾರಗಳಲ್ಲಿ ಯಶಸ್ಸು ಉಂಟಾಗುವುದು ಮಾತ್ರವಲ್ಲದೆ, ನಿಮಗೆ ಅದರಿಂದ ಅಭಿವೃದ್ಧಿಯೂ, ಪುತ್ರ ಐಶ್ವರ್ಯಾದಿಗಳ ಪ್ರಾಪ್ತಿಯೂ ಲಭಿಸುತ್ತವೆ. ಅದು ನಿಮ್ಮನ್ನು ಅದೃಷ್ಟ ಶಾಲಿಯನ್ನಾಗಿ ಮಾಡುತ್ತದೆ. ನೀವು ಬಂದು ರೂಪಾಯಿಯನ್ನು ವೆಚ್ಚಮಾಡಿ, ವಿಜಯವನ್ನು ಪಡೆಯಿರಿ! ಅಥವಾ ಇದು ಸುಳ್ಳೆಂದು ರುಜುಪಡಿಸಿ 50 ರೂಪಾಯಿಗಳ ಬಹುಮಾನಕ್ಕೆ ಪಾತ್ರರಾಗಿರಿ.

**Gupta Mantra Bhandar,**
No. 43, P. O. Katri Sarai (Gaya.).

ನನ ಸೌಖ್ಯಕ್ಕಿಂತಲೂ ಸ್ವಾತಂತ್ರ್ಯವೇ ಮೇಲೆಂದು ಂದು ಜನಾಂಗವು ಅನುಭವಕ್ಕೆ ತಂದುಕೊಂಡಿದೆ! ೆದು ತಾನು ಸಹಿಸಬೇಕಾದ ಕಷ್ಟಗಳೇನು, ಅಪಾಯಗಳೇನು ಎಂಬುದನ್ನು ಚೆನ್ನಾಗಿ ತಿಳಿದೇ, ಅದು ಸ್ವತಂತ್ರವಾಗಲು ನಿರ್ಧರಿಸಿದೆ. ಅಷ್ಟೇ ಅಲ್ಲ; ಹೊರಗಿನ ಪಕ್ಷಿಗಳಿಂದ ಯಾವ ರೀತಿಯ ಆಕ್ರಮಣಗಳುಂಟಾದರೂ, ಅದನ್ನು ಎದುರಿಸುವು ದಕ್ಕೆ ಕೂಡ ಸಿದ್ಧವಾಗಿದೆ. ಇತರರೊಡನೆ ಅದಕ್ಕೆ ಕಲಹ ಇಲ್ಲವೆಂದು ಅದಕ್ಕೆ ಗೊತ್ತಿದೆ. ಆದುದ ರಿಂದ ಇತರರು ಅದನ್ನು ಆಕ್ರಮಿಸಲು ಉದ್ರೇಕ ಗೊಳ್ಳುವ ಕಾರಣವಿಲ್ಲ. ಆತ ಏನೆ, ಮಿತ್ರರೇ, ನಾವು ಸ್ವತಂತ್ರರಾಗಲು ಮನಸ್ಸು ಮಾಡಿದ್ದೇವೆ.

ಬಾಬು ರಾಜೇಂದ್ರ ಪ್ರಸಾದ.

XVII] ಮಂಗಳೂರು, ತಾ. ೨೪—೧೨—೧೯೨೫ [ಕ್ರಿಸ್ತ ೧೯೨೬ ಯುವ ಸಂ| ಮಾರ್ಗಶಿರ ಬ| ೧೪ ಶುಕ್ರವಾರ

# ಭಾರತ ರಾಷ್ಟ್ರೀಯ ಮಹಾಸಭೆಯ ಇತಿಹಾಸ.

## ೧೮೮೫ನೇ ಇಸ್ವಿಯಿಂದ ೧೯೨೪ರ ವರೆಗಿನ ಸಿಂಹಾವಲೋಕನ.

೧೮೮೫ನೇ ಇಸ್ವಿ ದಶಂಬರ ತಾ. ೨೮ರಲ್ಲಿ ಬೊಂಬಯಿಯಲ್ಲಿ ಈ ಕಾಂಗ್ರೆಸ್ ಸಂಸ್ಥೆಯ ಉದ್ಭವವಾಯಿತು. ಇಂಡಿಯದ ಹಿತ ಕ್ಕಾಗಿ ಕೆಲಸ ಮಾಡಲು ಬದ್ಧಕಂಕಣರಾದ ಕೆಲವು ಮಂದಿ ಭಾರತ ವಿದ್ಯಾವಂತರೂ, ಮಿ. ಹ್ಯೂಮ್ ಸಾಹೇಬರೂ ಇದನ್ನು ಸ್ಥಾಪಿಸಿದ ಕೀರ್ತಿಯನ್ನು ಪಡೆದರು. ಇದರ ಪ್ರಥಮ ಅಧಿ ವೇಶನವು ಜನರಲ್ಲಿ ಯಾವ ಬಗೆಯ ಉತ್ಸಾಹವನ್ನೂ ಹುಟ್ಟಿಸ ಲಿಲ್ಲ. ಇದಕ್ಕೆ ಮುಖ್ಯ ಕಾರಣಗಳೆರಡು. ಜನರು ಆಗ ತಮಗೆ ಇದ್ದುದೇ ಸಾಕೆಂದು ತೃಪ್ತರಾಗಿದ್ದರು. ಅಲ್ಲದೆ, ಈ ಕಾಂಗ್ರೆಸಿಗೆ ಮೊದಲೇ [illegible] ಈ ಸಂಸ್ಥೆಯ ಅಧಿವೇಶನಗಳೂ ನಡೆದುಬರುತ್ತಿದ್ದುವು. ಹೀಗಾಗಿ ಜನರ ಲಕ್ಷ್ಯ ಇದರ ಕಡೆಗೆ ಬೀಳಲಿಲ್ಲ. ಈ ಸಂಸ್ಥೆಯ ಸಂಬಂಧ ಯಾರಿಂದಲೂ ಯಾವ ಪ್ರಚಾರಕಾರ್ಯವೂ ನಡೆಯ ಲಿಲ್ಲ. ಅಂತೂ ಕಾಂಗ್ರೆಸ್ ಸಂಸ್ಥೆಯು ಹುಟ್ಟಿತೆಂದು ಮಾತ್ರ ಕೆಲವು ಮಂದಿ ವಿದ್ಯಾವಂತರಿಗೆ ತಿಳಿದಿದ್ದಿತು. ಆಗಳಿನ ಕಾಂಗ್ರೆಸಿನ ಭಾಗಕ್ಕೆ ಸಾಮಾನ್ಯ ಜನತೆಯ ಸಂಬಂಧವೇನೂ ಇರದೆ, ಆ ಜನತೆಯು ಮೂಕರೆಂದೂ, ಕೆಸ್ಪರೆಂದೂ, ಸಾರ್ವಜನಿಕ ಗುರಿ ಯನ್ನು ಮುಂದೊತ್ತುವಲ್ಲಿ ಕೆಲಸಕ್ಕೆ ಬಾರದವರೆಂದೂ ಪರಿ ಭಾವಿಸಲಾಗಿದ್ದಿತು.

ಕ್ರಮಶಃ ಈ ಕಾಂಗ್ರೆಸಿನ ಬೆಳವಣಿಗೆಗೆ ಆರಂಭವಾಯಿತು. ಹಲವು ಪ್ರಾಂತಗಳ ಮುಂದಾಳುಗಳು ಸೇರಿ, ಆಲೋಚಿಸಿ, ಈ ಕ್ಕಾಂಗ್ರೆಸಿನ ವಾರ್ಷಿಕ ಅಧಿವೇಶನವೊಂದೆನ್ನು ಜರುಗಿಸಲು ನಿಶ್ಚೈಸಿದರು. ಅದರಂತೆ ೧೮೮೫ನೇ ದಶಂಬರ ೨೮ನೇ ಮಧ್ಯಾಹ್ನ ಗಂಟೆ ೧೨ಕ್ಕೆ ಸರಿಯಾಗಿ ಕಾಂಗ್ರೆಸಿನ ಪ್ರಥಮ ಅಧಿವೇಶನವು ಬೊಂಬಯಿಯಲ್ಲಿ ಜರುಗಿತು. ಇದಕ್ಕೆ ೭೨ ಮಂದಿ ಪ್ರತಿ ನಿಧಿಗಳೂ, ೪೦ ಮಂದಿ ಮಿತ್ರರೂ ಬಂದಿದ್ದರು. ಸರಕಾರಿ ನವುಕರರು ಕೂಡ ಇದಕ್ಕೆ ಕೆಲವರು ಬಂದಿದ್ದರು. ಆದರೆ ಕಾಂಗ್ರೆಸಿನ ಕಾರ್ಯಕಲಾಪಗಳಲ್ಲಿ ಅವರೇನೂ ಭಾಗ ವಹಿಸದವರಾಗಿದ್ದರು. ಈ ಅಧಿವೇಶನವು ೯ ನಿರ್ಣಯಗಳನ್ನು ಮುಂಜೂರು ಮಾಡಿತು. ಹಿಂದೀ ರಾಜ್ಯಭಾರದ ವಿಚಾರಣೆ ಗಾಗಿ ಒಂದು; ಸ್ಟೇಟ್ ಸೆಕ್ರಟರಿಗಳ ಕೌನ್ಸಿಲಿನ ರದ್ದಿಯಾತಿ ಗಾಗಿ ಒಂದು; ನ್ಯಾಯವಿಧಾಯಕ ಸಭೆಗಳ ಸುಧಾರಣೆಗಳಿಗಾಗಿ ಒಂದು; ಏಕಕಾಲದ ಪರೀಕ್ಷೆಗಳಿಗಾಗಿ ಒಂದು; ೧೮೮೭ರಲ್ಲಿ ಇದ್ದ ಮಿಲಿಟರಿ ವೆಚ್ಚ ೧೧,೪೦೨,೦೦೦ ಪೌಂಡುಗಳು ೧೮೮೪ ರಲ್ಲಿ ೧೬,೯೭೫,೭೫೦ ಪೌಂಡುಗಳಿಗೇರಿದ್ದುದರ ಕುರಿತು ಒಂದು; ಬರ್ಮವನ್ನು ಸೇರಿಸಿಕೊಳ್ಳಬಾರದೆಂಬುದಕ್ಕೊಂದು. ಅಂತೂ 'ಮೂರ್ತಿ ಸಣ್ಣದಾದರೂ ಕೀರ್ತಿ ದೊಡ್ಡದೆಂಬಂತೆ' ಜನಸ್ತೋಮ ವಿಲ್ಲದಿದ್ದರೂ ಪ್ರಾಮುಖ್ಯ ನಿರ್ಣಯಗಳನ್ನು ಮುಂಜೂರು ಮಾಡಿ, ಈ ಅಧಿವೇಶನವು 'ಬೆಳೆಯ ಗುಣ ಮೊಳೆಯಲ್ಲಿ'ಯೇ ತೋರಿತು. ಇಷ್ಟು ಮುಖ್ಯವಾದ ಸಭೆ ಹಿಂದುಸ್ಥಾನದಲ್ಲಿ ಎಂದೂ ನಡೆದಿಲ್ಲವೆಂದು ಅನಿಸಿಕೊಂಡಿತು. ಈ ಸಂದರ್ಭ ದಲ್ಲಿಯೇ ಈಗ, ಇಂಡಿಯಾ ಗವರ್ನಮೆಂಟಿನ ನಿವೃತ್ತ ಹೋಮ್ ಸೆಕ್ರಟರಿಗಳಾದ ಮಿ. ಏ. ಓ. ಹ್ಯೂಮ್ ಸಾಹೇಬರೂ, ಕಾಂಗ್ರೆಸಿನ ನಡವಳಿಕೆಯಲ್ಲಿ ಉತ್ಸಾಹಪೂರ್ವಕವಾಗಿ ಭಾಗ ವಹಿಸಿ, 'ಇವರೇ ಕಾಂಗ್ರೆಸಿನ ಜನಕ'ರೆಂದೂ ಪ್ರಸಿದ್ಧಿಗೆ ಬಂದುದು!

ಕಾಂಗ್ರೆಸಿನ ೨ನೆಯ ಅಧಿವೇಶನವು, ಕಲ್ಕತ್ತೆಯಲ್ಲಿ ಜರು ಗಿತು. ೪೪೦ ಮಂದಿ ಡೆಲಿಗೇಟರುಗಳು ಹಾಜರಿದ್ದರು. ಅಧ್ಯ ಕ್ಷರು ಶ್ರೀ. ದಾ. ನವರೋಜಿಯವರು. ಈ ಅಧಿವೇಶನದ ಮುಖ್ಯ ವಿಚಾರವೇನೆಂದರೆ—ಹೆಚ್ಚುತ್ತಿರುವ ಭಾರತದ ಬಡತನದ ಸಂಬಂಧ ಸವಿಾಚೀನವಾದ ಪ್ರಾತಿನಿಧ್ಯದ ಸಂಸ್ಥೆಗಳನ್ನೇರ್ಪಡಿಸ ಬೇಕೆಂಬುದೇ. ಸಂಯುಕ್ತಭಾರತದ ಏಕಕಂಠದ, ಏಕ ಮುಖದ ಈ ರೀತಿಯ ಪ್ರಯತ್ನಗಳನ್ನು ಕಂಡು ಸರಕಾರವು ಸಂಶಯಪಡಲು ತೊಡಗಿತು. ಮುಂದೆ ೧೮೮೮ರಲ್ಲಿ, ಮದ್ರಾಸಿ ನಲ್ಲಿ ಕಾಂಗ್ರೆಸಿನ ಮುಂದಾಳುಗಳು ಸಾಮಾನ್ಯ ಜನತೆಯಲ್ಲಿ ಕಾಂಗ್ರೆಸಿನ ಸಂಬಂಧ ಪ್ರಚಾರಕಾರ್ಯವನ್ನು ವಿಸ್ತಾರವಾಗಿ ನಡೆಸತೊಡಗಲು, ಅಧಿಕಾರಿಗಳ ವಕ್ರದೃಷ್ಟಿಯೇ ಇವರ ಮೇಲೆ ಬಿದ್ದಿತು. ಸಂಯುಕ್ತ ಪ್ರಾಂತದ ಆಗಿನ ಗವರ್ನರರಾದ ಸರ್ ಆಕ್ಲಾಂಡರವರು ಎಚ್ಚೆರಿಕೆಯ ಒಂದು ತುತ್ತೂರಿಯನ್ನೂದಿದರು. ಆಗ ಮಿ. ಹ್ಯೂಮ್ ಸಾಹೇಬರಿಗೂ, ಸರ್ ಆಕ್ಲೇಂಡ್‌ರವರಿಗೂ ಪತ್ರಿಕೆಗಳಲ್ಲಿ ಜಿಜ್ಞಾಸೆ ನಡೆದು ಜನರಲ್ಲಿ ನಡೆಸತಕ್ಕ ಪ್ರಚಾರ ಕಾರ್ಯದ ವಿಚಾರ ಬಿದ್ದುಹೋಯಿತು.

ಅನಂತರ ಲಾರ್ಡ್ ಕರ್ಜನರ ಆಳಿಕೆಯಲ್ಲಿ ಜನತೆಯ ಕಣ್ಣು ತೆರೆಯಿತು. ಅವರು ಎಚ್ಚೆತ್ತರು. ಅವರು ಇದುವರೆಗೆ ಸರಕಾರವು ಏನಾದರೂ ಕೈಪೆ ತೋರುವುದೆಂದು ಕಾಯುತ್ತ ಸುಮ್ಮನಿದ್ದರು. ಆದರೆ ಪರಿಣಾಮವೇನಾಯಿತು? ಅವರ ಸಾಮಾನ್ಯವಾದ ಕೇಳಿಕೆಗಳೂ ಮೂಲೆಗೇ ಬಿದ್ದುವು. ಅವರ ಆಶಾಕಾಂಕ್ಷೆಗಳನ್ನು ಕೇಳುವವರಿಲ್ಲವಾಯಿತು. ಠರಾವುಗಳು, ಶಬ್ದಾಡಂಬರದಲ್ಲಿ ಮಾತ್ರ ಕೊನೆಗಾಣುವುದೆಂದು ಖಚಿತ ವಾಯಿತು. ಸ್ವನಿರ್ಧಾರಕ್ಕೆ ಸ್ವಸಹಾಯ, ಸ್ವಾವಲಂಬನ, ಆತ್ಮ ವಿಶ್ವಾಸಗಳೇ ಬೆಂಬಲವೆಂದು ಅನುಭವಕ್ಕೆ ಬಂದಿತು. 'ಬಹಿ ಷ್ಕಾರ ವ್ರತವೇ ಸರಿ. ಕೂಡಲೇ ಅದು ಬ್ರಿಟಿಶರ ಸಂಪಾದನೆಗೆ ಅಡ್ಡ ಬಂದು, ಅವರಿಗೆ ಬುದ್ಧಿ ಕಲಿಸುವುದೆಂಬ' ಮಾತು ಹುಟ್ಟಿತು. ಆದರೆ ಈ ಅಸ್ತ್ರವನ್ನು ಉಪಯೋಗಿಸಲು, ಹಿರಿಯ ರಾದವರು ನಾಚಿ, ಹಿಂಜರಿದರು. ಕೊನೆಗೆ, ೧೯೦೫ರಲ್ಲಿ ನಡೆದ ಬೆನಾರಸ್ ಕಾನ್ಫರೆನ್ಸಿನಲ್ಲಿ, ವಂಗವಿಭಜನೆಗೆ ಬಹಿಷ್ಕಾರವೇ ನಿಷೇಧದ ಸೂಚನೆ ಎಂದು ನಿರ್ಧಾರವಾಯಿತು. ಆದರೆ ಇದು ಸಾಮಾನ್ಯ ಕಾರ್ಯಕ್ರಮದ ಒಂದು ಭಾಗವಾಗಿರಕೂಡದೆಂದು ತಿರಸ್ಕರಿಸಲ್ಪಟ್ಟಿತು.

೧೯೦೬ರಲ್ಲಿ ಕಲ್ಕತ್ತೆಯಲ್ಲಿ, ಕಾಂಗ್ರೆಸ್ ಆಗಲೇ ತಿಲಕ ರನ್ನು ಅಗ್ರಪೂಜೆಗೆ ಸೂಚಿಸಲಾಯಿತು. ಆದರೆ 'ಟ್ರಾಮ್ಸ್ ಆಫ್ ಇಂಡಿಯಾ' ಪತ್ರಿಕೆ ತಿಲಕರು ಉಗ್ರಪಕ್ಷದವರೆಂದು ಕಲ ಕಲವೆಬ್ಬಿಸಿತು. ಅದರಿಂದ ಕಳವಳಗೊಂಡವರು ದಾದಾಭಾಯಿ ಯವರನ್ನು ಸೂಚಿಸಿದರು. ಈ ಹೆಸರನ್ನು ವಿರೋಧಿಸುವವರು ಯಾರು? ಆದರೆ ದಾದಾಭಾಯಿಗಳು ಈ ಸೂಚನೆಗೆ ಕೊಂಚಕ್ಕೆ ಒಪ್ಪಲಿಲ್ಲ. ಕೊನೆಗೆ ಒಪ್ಪಿದರೂ ಅತಿಗಾಮಿಗಳ ಧ್ಯೇಯ ಕೆಡ ದಂತೆ 'ಸ್ವರಾಜ್ಯ' ಶಬ್ದವನ್ನೇ ಹಿಡಿದು ಮುಂದೊತ್ತಿ ಬಿಟ್ಟರು!

೧೯೦೭ರಲ್ಲಿ ಸೂರತ್ತಿನ ಕಾಂಗ್ರೆಸು. ಇದು ಇತಿಹಾಸ ಪ್ರಸಿದ್ಧವಾಗಿದೆ. ಇಲ್ಲಿ ಎರಡು ರಾಜಕೀಯ ಪಕ್ಷಗಳ ಮನ ಸ್ತಾಪದಿಂದ ಗಲಭೆಯಾಯಿತು. ಈ ಗಲಭೆಯಲ್ಲಿ ಸರ್ ಫಿರೋಜಾ ಶಾ ಮೇಥರ ಮೇಲೆ ಯಾರೋ ಅವಾಚ್ಯ ವಸ್ತು ವನ್ನು ಬಿಸಾಟರು. ಅಲ್ಲಿಗೆ ಆ ಅಧಿವೇಶನವು ನಿಲ್ಲಿಸಲ್ಪಟ್ಟಿತು. ಕಾಂಗ್ರೆಸಿಗಾಗಿ ಒಂದು ರಾಜ್ಯರಚನೆಯನ್ನು ಸಿದ್ಧಪಡಿಸಲು ಒಂದು ಕಮಿಟಿ ನೇಮಕವಾಯಿತು. ನ್ಯಾಯವಿಹಿತ ಮಾರ್ಗದಿಂದ 'ಡೊಮಿನಿಯನ್ ಸ್ಟ್ಯಾಟಸನ್ನು' ಸಂಪಾದಿಸುವುದೇ ಭಾರತದ ಗುರಿ ಎಂದು ಆ ಕಮಿಟಿ ನಿರ್ಧರಿಸಿತು.

೧೯೧೪ರಲ್ಲಿ ಯುದ್ಧವು ಆರಂಭವಾಯಿತು. ಆ ಸಮಯ ದಲ್ಲಿ ಇಂಡಿಯವು ತನ್ನ ಎಲ್ಲ ಸುಖಕಷ್ಟಗಳನ್ನು ಮರೆತು, ಸಾಮ್ರಾಜ್ಯರಕ್ಷಣೆಗಾಗಿ ತನ್ನ ರಕ್ತವನ್ನು ಸುರಿಸಿತು. ಆಗಿನ ಬ್ರಿಟಿಶ್ ಅಮಾತ್ಯರಾದ ಮಿ॥ ಲಾಯ್ಡ್ ಜಾರ್ಜ್‌ರವರು, 'ಇಂಡಿಯವು ಈ ಸಮಯದಲ್ಲಿ ಮಾಡಿದ ಪ್ರಬಲ ಸಹಾಯ ವನ್ನು, ಯುದ್ಧದ ನಂತರ ಮರೆಯುವುದಲ್ಲ' ಎಂದರು. ಯುದ್ಧ ಮುಗಿಯುವಾಗಲೂ 'ನಾಲ್ಕು ವರ್ಷಗಳ ಕಾಲ ನಾವೂ ಇಂಡಿಯಾದವರೂ ಅಣ್ಣತಮ್ಮಂದಿರ ಹಾಗಿದ್ದೆವು. ಇದಿಲ್ಲಿಗೇ ಅಂತ್ಯವಾಗದಿರಲಿ!' ಎಂದರು. ಆದರೆ ಇಷ್ಟಾಗಿ ೫ ತಿಂಗಳು ಕಳೆಯಲಿಲ್ಲ. ರೌಲೆತ್ ಬಿಲ್ಲು ಬಂದಿತು. ದೇಶವು ಬೇಡ ವೆಂದರೂ, ಸರಕಾರಕ್ಕೆ ಅದೇ ಬೇಕಾಯಿತು!

ಇಷ್ಟರಲ್ಲಿ ಗಾಂಧಿಜಿಯವರ ಸತ್ಯಾಗ್ರಹ! ಇದು ಆತ್ಮ ಶುದ್ಧಿಯ ಒಂದು ವ್ರತ. ಇದಕ್ಕೆ ಪ್ರಾರ್ಥನೆಯೂ, ಉಪ ವಾಸವೂ ಮುಖ್ಯ. ಈ ದಿನದ ಆಚರಣೆಯೂ, ಅದೊಂದು ದಿನ ಸಮಗ್ರ ಭಾರತದಲ್ಲಿ ನಡೆದು, ಭಾರತವಾಸಿಗಳಲ್ಲಿ ಅದ್ಭುತ ವಾದ ಜಾಗೃತಿಯುಂಟಾಗಲು ಕಾರಣವಾಯಿತು. ಆಗಲೇ ಗಾಂಧಿ, ಡಾಕ್ಟರ್ ಕಿಚಲೂ, ಡಾ. ಸತ್ಯಪಾಲ್ ಇವರ ದಸ್ತಗಿರಿ ದಂಡನೆಗಳೆ ಪರಿಣಾಮವಾಗಿ ಅಮೃತಸರ, ಅಹಮ್ಮದಾಬಾದು ಗಳಲ್ಲಿ ಹಿಂಸಾಮಯ ಕೃತ್ಯಗಳು ನಡೆದುಹೋದುವು. ಗಾಂಧಿ ಯವರು ತಮ್ಮ ತಪ್ಪನ್ನು ಕಂಡುಕೊಂಡು, ಸತ್ಯಾಗ್ರಹವನ್ನು ನಿಲ್ಲಿಸಿದರು.

ಪಂಜಾಬಿನ ಜಲಿಯನ್‌ವಾಲಾ ಬಾಗಿನ ಗಲಭೆ ಏನೆಂಬುದು ಎಲ್ಲರೂ ಬಲ್ಲ ಸಂಗತಿ. ಜನರಲ್ ಡಾಯರ್, ಅಲ್ಲಿ ಜನಗಳನ್ನು ಎಚ್ಚೆರಿಸದೆ ಗುಂಡು ಹಾರಿಸಿ, ಸುಮಾರು ೪೭೯ ಮಂದಿಯನ್ನು ಕೊಂದು, ನೂರಾರು ಜನಗಳನ್ನು ಗಾಯ ಪಡಿಸಿದ ಸಂಗತಿ ಪ್ರಕಟವಾದ ಕೂಡಲೇ ದೇಶವು ಕಾತರ ಗೊಂಡಿತು. ವಿಚಾರಣೆಯನ್ನು ನಡಿಸಿರೆಂದು ಸರಕಾರಕ್ಕೆ ದೂರಿಟ್ಟಿತು. ಹೀಗೆ ಅತ್ತ ಅಫೀಶಿಯಲ್ ಕಮಿಟಿಯೂ, ಕಾಂಗ್ರೆಸಿನ ವಿಚಾರಣೆಯ ಮಂಡಲವೂ ಈ ವಿಷಯದಲ್ಲಿ 'ತನಿಖೆ' ನಡೆಸುತ್ತಿರಲು, ಚಕ್ರವರ್ತಿಗಳ ಅನುಮತಿ ದೊರೆತ ಸುಧಾರಣೆಗಳು ಇಂಡಿಯಕ್ಕೆ ಬಂದುವು. ಇದರಿಂದ ಪಂಜಾಬು ಗೊಂದಲದ ಸಂಬಂಧ ದಂಡನೆಗೆ ಗುರಿಯಾಗಿದ್ದವರಿಗೆ ರಾಜ್ ಕೃಪೆ ದೊರಕಿ ಅವರ ಬಿಡುಗಡೆಯಾಯಿತು. ಜಲಿಯನ್‌ವಾಲಾ ಬಾಗಿನ ನ್ಯಾಯಾಧಿಕಾರದಲ್ಲಿ ಸಿಕ್ಕುಬಿದ್ದಿದ್ದ ಅಧಿಕಾರಿಗಳು ಸುಲಭದಲ್ಲಿ ಪಾರಾಗುವಂತಾಯಿತು.

೧೯೨೦ರಲ್ಲಿ ಗಾಂಧಿಯವರು ಅಸಹಕಾರ ವ್ರತವನ್ನು ಆರಂಭಿಸಿದರು. ಅದು ಬೇಗನೇ ವ್ಯಾಪಿಸಿತು. ಕಾಂಗ್ರೆಸಿ ನವರೂ ಇದನ್ನು ಅಂಗೀಕರಿಸಿದುದರಿಂದ ಇದು ಮತ್ತಷ್ಟು ಪ್ರಬಲ ದೆಸೆಗೇರಿತು. ಆದರೆ ಪ್ರಿನ್ಸ್ ಆಫ್ ವೇಲ್ಸರು ಬೊಂಬಯಿಗೆ ಬಂದಿಳಿವಾಗಲೇ, ಬೊಂಬಯಿಯಲ್ಲಿ ಹಿಂಸಾ ಮಯ ಕೃತ್ಯಗಳು ನಡೆದುದರಿಂದ, ಮಹಾತ್ಮರಿಗೆ ಬಹಳ ದುಃಖ ವಾಯಿತು. ಇದು ಅಧಿಕಾರಿಗಳಿಗೆ ಅತೃಪ್ತಿಯನ್ನುಂಟು ಮಾಡಿದುದಷ್ಟೇ ಅಲ್ಲದೆ, ಹರತಾಳಗಳೂ ದೇಶದಲ್ಲೆಲ್ಲ ಸಾರೋದ್ಧಾರವಾಗಿ ನಡೆದುದರಿಂದ, ಕಾನೂನುಗಳು ಹೊಸ ರೂಪದಲ್ಲಿ ಅವತರಿಸಿ, ಕಾಂಗ್ರೆಸ್, ಖಿಲಾಫತ್ ಸಂಸ್ಥೆಗಳ ನವದ್ವಾರಗಳನ್ನೂ ಬಂಧಿಸಿಬಿಟ್ಟುವು. ಇದನ್ನು ಕಂಡು, ಅಹಮ್ಮದಾಬಾದ್ ಕಾಂಗ್ರೆಸು, ಅಧಿಕಾರಿಗಳಿಗೆ ಇದಿರಾಗಿ, ಭುಜತಟ್ಟಿ, ವಾಲಂಟಿಯರರ ದಳಗಳನ್ನೇರ್ಪಡಿಸಿಕೊಂಡು ಶಾಸನ ಭಂಗ ಚಳವಳಿಕ್ಕೆ ಇನ್ನಷ್ಟು ಬೆಂಬಲ ಕೊಟ್ಟಿತು. ಅಲ್ಲಲ್ಲಿ ತೆರಿಗೆಯ ನಿರಾಕರಣೆ, ದಸ್ತಗಿರಿ, ಜೈಲು ವಾಸಗಳೊಡನೆ, ಚರಕದ ಪ್ರಚಾರ, ಖಾದೀ ಪ್ರಚಾರ, ರಾಷ್ಟ್ರೀಯ ಶಾಲಾ ಸ್ಥಾಪನೆ, ಅಸ್ಪೃಶ್ಯೋದ್ಧಾರ ಮೊದಲಾದ ಹಲವು ಹದಿನೆಂಟು ಕಾರ್ಯಕ್ರಮಗಳೂ ಜಾರಿಗೆ ಬಂದುವು.

೧೯೨೧ರಲ್ಲಿ ಗಾಂಧಿಯವರ ದಸ್ತಗಿರಿಯಾಯಿತು. ದಿವಂಗತ ಶ್ರೀ. ಸಿ. ಆರ್. ದಾಸರ ನಾಯಕತ್ವದೊಡನೆ, 'ಸ್ವರಾಜ್ಯ ಪಾರ್ಟಿಯೂ' ಹೊರಟು, ಕೌನ್ಸಿಲ್ ಪ್ರವೇಶವು ಮನ್ನಿಸಲ್ಪಟ್ಟಿತು. ಕಾಹಿಲೆಯ ದೆಸೆಯಿಂದ ಗಾಂಧಿಯವರು ಬಿಡುಗಡೆ ಹೊಂದಿ ದರು. ಮುಂದೆ ಪಂಡಿತ ಮೋತಿಲಾಲರ ಕಮಿಟಿಯು ಮೂಲಕ ಹಿಂದುಸ್ಥಾನದ ರಾಜ್ಯರಚನೆಯು ವರದಿ ಸಿದ್ಧವಾಗಿ, ಸ್ವಾತಂತ್ರ್ಯದ ನಿರ್ಧಾರವು ಪ್ರಕಾಶಗೊಳ್ಳಲು, ಗಾಂಧಿಯವರು ಉಪ್ಪಿನ ಶಾಸನ ವನ್ನು ಮುರಿಯುವ ಚಳವಳಿ ಹೂಡಿದರು. ೧೧ ಪ್ಯಾಂಟುಗಳನ್ನು ಮುಂಡಿಸಿ ವೈಸರಾಯರಿಗೆ ಪತ್ರ ಬರೆದರು. ಅದಕ್ಕೆ ಮನ್ನಣೆ ದೊರೆಯದಿರಲು, ೧೯೩೦ನೇ ಇಸ್ವಿ ಮಾರ್ಚಿ ೧೨ರಲ್ಲಿ ಅವರು ದಂಡಿಗೆ ಯಾತ್ರೆ ಮಾಡಿ, ಉಪ್ಪಿನ ಕಾನೂನುಗಳನ್ನು ಮುರಿದ ಕಾಲದಲ್ಲಿ, ಅನೇಕ ಮಂದಿ ವಾಲಂಟಿಯರುಗಳೂ, ದೇಶ ಮುಖಂಡರೂ ಜೈಲಿಗೆ ಹೋದರು.

ಅನಂತರವೇ ದುಂಡು ಮೇಜಿನ ಪರಿಷತ್ತು. ಇದಕ್ಕೆ ಗಾಂಧಿಜಿಯವರೂ ಹೋಗಿದ್ದು ಅಲ್ಲಿ ತಮ್ಮ ಅಭಿಪ್ರಾಯಗಳನ್ನು ಮುಂದಿರಿಸಿದರೂ, ಕೇಳಿದವರಿಲ್ಲದ ಕಾರಣ ತಿರುಗಿ ಅವರು ಶಾಸನಭಂಗನನ್ನೇ ಹೂಡಿದರು. ಆಗ ಹಲವು ಹೊಸ ಆರ್ಡಿ ನೆನ್ಸುಗಳೂ, ಶಾಸನಗಳೂ ಮೂಡಿದುವು. ಗಾಂಧಿಜಿಯವರಿಗೆ ಪುನಃ ೧೯೩೨ರಲ್ಲಿ ಬಂಧನ ಪ್ರಾಪ್ತಿಯಾಯಿತು. ಅದರೊಂದಿಗೆ ಸುಮಾರು ೭೦ ಸಾವಿರ ಮಂದಿ ಸ್ತ್ರೀಪುರುಷರೂ ಸೆರೆಮನೆಗೆ ನಡೆ ದರು. ಏತನ್ಮಧ್ಯೇ ಹರಿಜನರಿಗಾಗಿ ಗಾಂಧಿಜಿಯವರು ೨೧ ದಿನದ ಉಪವಾಸವನ್ನು ಕೈಕೊಂಡು, ಆರಂಭಿಸಿದುದರಿಂದ, ಅವರ ಬಿಡು ಗಡೆಯಾಯಿತು!

ಪುನಃ ಗಾಂಧಿಯವರು ರಾಸಿನ ಕಡೆಗೆ ದಂಡಯಾತ್ರೆ ಎಂದು ಪ್ರತಿಜ್ಞೆ ಹಾಕಿ, ಶಾಸನವನ್ನು ಉಲ್ಲಂಘಿಸಿದುದರಿಂದ ಪುನಃ ದಸ್ತಗಿರಿಯಾಯಿತು. ಆಗ ತಮಗೆ ಕೊಟ್ಟ ಜೈಲಿನ ಸೌಕರ್ಯಗಳು ಸಾಲವೆಂದು ಅವರು ಉಪವಾಸವನ್ನು ಆರಂಭಿ ಸಲು, ಸರಕಾರದವರು ಬಿಟ್ಟುಬಿಟ್ಟರು.

ಈಗ ಶಾಸನಭಂಗ ಚಳವಳಿವು ನಿಂತಿದೆ. ಕಾಂಗ್ರೆಸ್ ನ್ಯಾ॥ ವಿ॥ ಸಭೆ, ಡಿ॥ ಬೋರ್ಡುಗಳಲ್ಲಿ ನುಗ್ಗಿ ಕೆಲಸಮಾಡು ತ್ತಿದೆ. ಗ್ರಾಮೋದ್ಧಾರದ ಕಡೆ ಅದರ ದೃಷ್ಟಿ ಇದೆ. ಇನ್ನು ಈ ಲಕ್ಕೋ ಅಧಿವೇಶನದ ಫಲವನ್ನೂ ನಿರೀಕ್ಷಿಸುತ್ತಿರುವ!

# ಹಿಂದೂದೇಶ

ಪ್ರಖ್ಯಾತ ಕೇದಾರನಾಥ ದೇವಸ್ಥಾನದ ಸುಮಾರು ೨೦,೦೦೦ ರೂಪಾಯಿ ಬೆಲೆಬಾಳುವ ನಗನಾಣ್ಯಗಳನ್ನು ಅಪಹರಿಸಿದ ಅಪರಾಧದ ಮೇಲೆ ಅದರ ಮೆನೇಜರರನ್ನೂ, ಇನ್ನಿಬ್ಬರನ್ನೂ ಡ್ಹೇರಾಡ್ಹೂನ್ ಪೊಲೀಸ್ಕಿನವರು ಕೈದುಮಾಡಿರುವರು.

ಕಾಂಗ್ರೆಸ್ ಎಮ್. ಎಲ್.ಎ.ಗಳಾಗಿದ್ದ ಕೈ. ವಾ. ದೀಪ್ ನಾರಾಯಣ ಸಿಂಗ್‌ರವರು ತಮ್ಮ ಆಸ್ತಿಯ ಹುಟ್ಟುವಳಿಯ ಹೆಚ್ಚಿನ ಅಂಶವನ್ನು ಬಿಹಾರಿನಲ್ಲಿ ಕಲಾಶಿಕ್ಷಣಕ್ಕಾಗಿ ವಿನಿಯೋಗಿಸಬೇಕೆಂದು ವೀಲು ಮಾಡಿರುವರು. ಇದಕ್ಕಾಗಿ ೫ ಜನ ಟ್ರಸ್ಟಿಗಳು ನೇಮಕವಾಗಿದ್ದು, ಸ್ಮಾರಕ ಸಮಿತಿಯವರು ಭಾಗಲ್ಪೂರಿನಲ್ಲಿ ಪಬ್ಲಿಕ್ ಹಾಲನ್ನೂ ವಾಚನಾಲಯವನ್ನೂ ಸ್ಥಾಪಿಸಲು ಒಂದು ಲಕ್ಷ ರೂಪಾಯಿಗೆಳನ್ನು ಕೊಡಿಸಲು ನಿಶ್ಚೈಸಿರುವರು.

ಮದ್ರಾಸಿನ ಕಾಂಗ್ರೆಸು ಎಗ್ಜಿಬಿಷನು ಈ ಬಾರಿ ಹಿಂದಿನ ಸಲಕ್ಕಿಂತಲೂ ಉತ್ತಮವಾಗಿರುತ್ತದೆ. ನಾನಾ ಸ್ವದೇಶಿ ಸ್ಟಾಲು ಗಳಿರುತ್ತವೆ.

ಪೂನೆಯ ಹರಿಜನ ಮುಂದಾಳುಗಳಾದ ಶ್ರೀ. ಪಿ. ಎನ್. ರಾಜಭೋಜರವರು ಡಾ. ಅಂಬೇಡ್ಕರರ ಚಳವಳಿಯ ವಿರುದ್ಧವಾಗಿ ಒಂದು ಹಿಂದೀ ಸಾಪ್ತಾಹಿಕವನ್ನು ಹೊರಡಿಸಲು ನಿಶ್ಚೈಸಿರುವೆರು.

ಕಾಶ್ಮೀರ ಸಂಸ್ಥಾನದ ಅರಣ್ಯ ಶಾಖೆಯಲ್ಲಿ ದುರುಪಯೋಗ ನಡೆದುದರಿಂದ ಮಿ. ಗಂಗಾಪ್ರಸಾದ್, ಡಿ. ಎಫ್. ಓ. ಮತ್ತಿತರ ಹಿಂದೀ ಅಧಿಕಾರಿಗಳು ಡಿಸ್ಮಿಸ್ ಮಾಡಲ್ಪಟ್ಟಿರುವರು. ಫೊರೆಸ್ಟ್ ಕನ್ಸರ್‌ವೇಟರರಾದ ಮಿ. ಟಿ. ಸಿ. ಹೊನ್‌ರವರು ಕೂಡಲೇ ಕೆಲಸದಿಂದ ನಿವೃತ್ತರಾಗಬೇಕಾಗಿದೆ. ಅರಣ್ಯವನ್ನು ವಾಯಿದೆಗೆ ಪಡಕೊಂಡಿದ್ದ ಡಿಂಗಾ ಸಿಂಗ್ ಮತ್ತು ಕಂಪೆನಿಯವರು ಗುರುತಿಸಲ್ಪಡದ ಮರಗಳನ್ನು ಕಡಿದರೆಂದು ಅನೇಕ ಲಕ್ಷ ರೂಪಾಯಿಗಳ ಜುರುಮಾನೆಗೊಳಗಾಗಿರುವರು.

ರಾಮನಾಡ ಜಿಲ್ಲೆಯ ಕಾರಾಯ್ಕುಡಿಯ ಮಿ. ಮರುತಪ್ಪ ಕಿಳೈಯವರ ಮನೆಯಲ್ಲಿ ಹುಣಿಸೆ ನಾರಿನಿಂದ ಸೇಂದಿಯಂಥಾ ರಸವು ಬರತೊಡಗಿದೆ.

ಕಲ್ಕತ್ತೆಯಲ್ಲಿ ವಿಚಿತ್ರವಾದೊಂದು ರೋಗವು ಆರಂಭವಾಗಿದ್ದು ಅನೇಕರು ಸಾಯುತ್ತಿರುವರು. ಈ ರೋಗವೇನೆಂದು ಇನ್ನೂ ಕಂಡುಹಿಡಿಯಲ್ಪಟ್ಟಿಲ್ಲ.

ಅನಂತಶಯನದಲ್ಲಿ ನಡೆಯುವ ಅಖಿಲಭಾರತ ಮಹಿಳೆಯರ ಸಮ್ಮೇಳನದ ಅಧ್ಯಕ್ಷತನವನ್ನು ವಹಿಸಲು ಟ್ರಾವಂಕೂರಿನ ಮಹಾರಾಣಿ ಸೇತು ಪಾರ್ವತಿ ಬಾಯಿಯವರು ಸಮ್ಮತಿಸಿರುವರು.

ಪಾಟ್ನಾದ ಪ್ರಾಚ್ಯವಸ್ತುಪರಿಶೋಧನೆಯ ಶಾಖೆಯವರು ಬಿಲಂಗಾ ಎಸ್ಟೇಟಿನಲ್ಲಿ, ಮಯೂರಕುಲದ ರಾಜರ ದೊಡ್ಡ ದೊಂದು ಅರಮನೆಯನ್ನು ಕಂಡುಹಿಡಿದಿದ್ದಾರೆ. ಅರಮನೆಗೆ ಹಾಸಿದ ಇಟ್ಟಿಗೆಗಳು ಭತ್ತ ಮತ್ತೂ ಹೊಟ್ಟುಗಳಿಂದ ನಿರ್ಮಾಣವಾಗಿವೆ.

ಅಲ್ಲಹಾಬಾದ್ ಪ್ರಾಂತದ ಮಹಿಕನಾಥ ಏಜೆನ್ಸಿಯ ಒಂದು ತಾಲೂಕಿನಲ್ಲಿ ಇದೇ ಕಳೆದ ನವೆಂಬರದಿಂದ ಹೊಸ ಸುಂಕವೇರಿರುವುದರಿಂದ ಅಲ್ಲಿನ ೧೨ ಗ್ರಾಮದವರು ತೆರಿಗೆ ಕೊಡಲಾರೆವೆಂದು ಬೆದರಿಸುತ್ತಿದ್ದಾರೆ. ಇಷ್ಟರಲ್ಲಿಯೇ ಅನೇಕ ಮಂದಿ ಪಟೇಲರೂ ತಮ್ಮ ಉದ್ಯೋಗಕ್ಕೆ ರಾಜೀನಾಮೆಯನ್ನೂ ಬರೆದೊಪ್ಪಿಸಿದ್ದಾರೆ.

ಕಾಶಿಯ ಹಿಂದೂ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ ಪತ್ರಿಕಾ ಉದ್ಯೋಗದ ಶಿಕ್ಷಣವೂ ದೊರೆಯುವಂತೆ, ಪಂಡಿತ ಮಾಳವ್ಯರು ಆಲೋಚಿಸುತ್ತಿರುವುದಾಗಿ ತಿಳಿದುಬರುತ್ತಿದೆ. ಅಲ್ಲದೆ ಈ ಶಿಕ್ಷಣದಲ್ಲಿ ಭಾಗ ವಹಿಸುವ ಹಾಗೆ, ಕೆಲವು ಮಂದಿ ಪ್ರಸಿದ್ಧ ಪತ್ರಿಕಾ ಉದ್ಯೋಗಿಗಳ ಸಹಾಯವನ್ನೂ ಅವರು ಕೋರಿರುತ್ತಾರೆ.

ಸಿಂಧ್ ಪ್ರಾಂತದಲ್ಲಿ ವರದಕ್ಷಿಣೆಯ ಹಾವಳಿ ಬಹಳವಾಗಿದೆ. ಅಲ್ಲಿ ಅದರ ದರ ಬಹಳ ವಿಪರೀತ. ಹುಡುಗ ನೂರು ರೂಪಾಯಿ ಸಂಪಾದಿಸತಕ್ಕನನಾದರೆ, ಅವನಿಗೆ ವರ ದಕ್ಷಿಣೆಯ ಮಾರ್ಕೆಟ್ ದರ ರೂ. ೧೦ ಸಾವಿರ. ಹುಡುಗ ಐ. ಸಿ. ಎಸ್. ಆದರೆ ದಕ್ಷಿಣೆ ರೂ. ೫೦ ಸಾವಿರ. ಈಚಿಗೆ ಒಬ್ಬ ವರನು ೧೫ ಸಾವಿರ ದಕ್ಷಿಣೆ ತೆಗೆದುಕೊಂಡು ಒಂದು ಲಗ್ನಕ್ಕೆ ಒಪ್ಪಿಗೆ ಕೊಟ್ಟಿದ್ದರೂ, ಇನ್ನೊಬ್ಬ ಮಾವ ೧೮ ಸಾವಿರ ಕೊಡುವೆನೆನ್ನಲು ಮೊದಲಿನ ಲಗ್ನ ರದ್ದು. ಹೀಗೆ ಅಲ್ಲಿ ಧಾರೆಯಾಗುವ ವರೆಗೂ ವರನ ಏಲಂ ನಡೆಯುವುದು ಸಾಮಾನ್ಯವಾಗಿದೆಯಂತೆ! ವಿಚಿತ್ರ!

# ಮಂಗಳೂರು

ಇದೇ ತಿಂಗಳ ತಾರೀಕು ೨೬ರಿಂದ ೩೦ ವರೆಗೆ ಮಂಗಳೂರು ಗವರ್ನಮೆಂಟ್ ಕೊಲೇಜಿನಲ್ಲಿ ಕೃಷಿ ಮತ್ತು ಕೈಗಾರಿಕೆಗಳ ಪ್ರದರ್ಶನವು ನಡೆಯಲಿರುವುದು. ಈ ಸಂದರ್ಭದಲ್ಲಿ ಜೇನು ನೊಣ ಸಾಕುವಿಕೆಯಲ್ಲಿ ಚೆನ್ನಾಗಿ ಅನುಭವವುಳ್ಳ ಶ್ರೀ. ಬೈಲೂರು ಲಕ್ಷ್ಮೀನಾರಾಯಣರಾಯರು ಆ ವಿಷಯದಲ್ಲಿ ಸಾಕಷ್ಟು ಅನುಭವವನ್ನು ಜನರಿಗೆ ಕೊಡಲಿರುವರು.

ಇಲ್ಲಿ ಇದೇ ಈಗ ನಡೆದ 'ಅಲ್ಬುಕರ್ಕ್ ಕಪ್ಪಿನ ಕ್ರಿಕೆಟ್ ಪಂದ್ಯಾಟ'ದಲ್ಲಿ ಎಂ. ಸಿ. ಸಿ.ಯವರು ೧೯೧ ರನ್ನುಗಳನ್ನೂ, ಎಚ್. ಸಿ. ಸಿ.ಯವರು ೪೦ ರನ್ನುಗಳನ್ನೂ ಪಡೆದು ಮೊದಲಿನವರು ಗೆದ್ದರು.

ಕೊರನೇಶನ್ ಕಪ್ಪಿನ ಕ್ರಿಕೆಟ್ ಪಂದ್ಯಾಟದಲ್ಲಿ, ಕಳೆದ ವಾರ, ಎಚ್. ಸಿ. ಸಿ. ಮತ್ತೂ ಎಂ. ಸಿ. ಸಿ.ಗಳೊಳಗೆ ಕೊನೆಯ ಆಟವು ಜರುಗಿ ಎಚ್. ಸಿ. ಸಿಯವರು ಗೆದ್ದಿರುವರು.

ಕಾಂಗ್ರೆಸ್ ಸುವರ್ಣ ಮಹೋತ್ಸವದ ಸಂಬಂಧ ಇಲ್ಲಿಯ ಸ್ವದೇಶೀ ಸ್ಟೋರ್ಸಿನವರು ಖಾದಿ ಮತ್ತೂ ಸ್ವದೇಶೀ ಪದಾರ್ಥಗಳ ದೊಂದು ಪ್ರದರ್ಶನವನ್ನು ಜರುಗಿಸಲಿರುವರು. ಇದು ತಾ. ೩೦ರಿಂದ ಆರಂಭವಾಗಿ ಜನವರಿ ತಾ. ೩ರ ವರೆಗೆ ನಡೆಯುವುದು.

ಮಂಜೇಶ್ವರದ ಜೈನ ಮಹನೀಯರಾದ ಶ್ರೀ. ನಾಗಪ್ಪ ಶೆಟ್ಟರು, ತಮ್ಮ ೯೧ನೇ ವರ್ಷ ಪ್ರಾಯದಲ್ಲಿ, ಕಳೆದ ಗುರುವಾರ ದಿವಂಗತರಾದರೆಂದು ತಿಳಿಸಲು ತುಂಬ ವಿಷಾದ. ಇವರು ಧಾರ್ಮಿಕ ವಿಚಾರಗಳಲ್ಲಿ ತುಂಬ ಶ್ರದ್ಧೆಯುಳ್ಳವರಾಗಿದ್ದು, ಜೈನ ಬಸದಿಯ ಜೀರ್ಣೋದ್ಧಾರವೇ ಮೊದಲಾದವನ್ನು ಮಾಡಿಸಿದ ಪುಣ್ಯವಂತರು. ಇವರ ಆತ್ಮಕ್ಕೆ ಶಾಂತಿ ಇರಲೆಂದು ಒಂದು ಬಾತ್ಮಿ.

ಇಲ್ಲಿ ನಮ್ಮ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಡೆಯಿಂದ ಬಂದು ಜುಬಿಲಿ ಕಮಿಟಿಯು ಏರ್ಪಟ್ಟಿದೆ. ಇದಕ್ಕೆ ಪ್ರೆಸಿಡೆಂಟರು ಶ್ರೀಮತಿ ಕಮಲಾದೇವಿಯವರೆಂದು ಆರಿಸಲ್ಪಟ್ಟಿದ್ದಾರೆ. ವೈಸ್ ಪ್ರೆಸಿಡೆಂಟರುಗಳು ಶ್ರೀ.ಗಳಾದ ಎ. ಬಿ. ಶೆಟ್ಟರು, ಉಮೇಶರಾಯರು, ಬಿ. ವೈಕುಂಠ ಬಾಳಿಗರು. ಶ್ರೀ. ವೆಂಕಟೇಶ ಪೈಗಳು ಖಜಾನ್ಜಿಗಳು. ಶ್ರೀ. ಎ. ಎನ್. ಶೆಟ್ಟರೂ ಬಿ. ಭೋಜರಾಯರೂ ಜತೆ ಕಾರ್ಯದರ್ಶಿಗಳು. ಈ ಕಮಿಟಿಯು ಸುವರ್ಣೋತ್ಸವದ ಸ್ಮಾರಕಕ್ಕಾಗಿ ಮಂತಿಗೆ ಎತ್ತುವ ಕೆಲಸ ನಡೆಸುವುದು. ಕೆ. ಬ್ಯಾಂಕಿಂಗ್, ಕಾರ್ಪರೇಶನ್ ಉಡುಪಿ, ಈ ಸಂಸ್ಥೆಯಲ್ಲಿ ಇದರ ಲೆಕ್ಕಾಚಾರ ನಡೆಯುವಂತೆ ವ್ಯವಸ್ಥೆಯಾಗಿದೆ.

ಇದೇ ಕಳೆದ ಶನಿವಾರ ತಾ. ೨೧ನೇ ಸಂಜೆ ಗಂಟೆ ೫½ಗೆ ಇಲ್ಲಿಯ ಹಳೆಯ ವಿದ್ಯಾಸಂಸ್ಥೆಯಾದ ಬಿ. ಇ. ಎಂ. ಹ್ಯಾಸ್ಕೂಲಿನ ವಾರ್ಷಿಕ ವರ್ಧಂತಿಯು, ಕಿಕ್ಕಿರಿದು ತುಂಬಿದ ಮಹಾಜನ ಸಭೆಯಲ್ಲಿ ಶ್ರೀಮಾನ್ ಬಿ. ಮಾಧವರಾವ್, ಬೀ. ಏ., ಎಂ. ಎಲ್., ಟ್ರೆಜರಿ ಡಿಪ್ಟಿ ಕಲೆಕ್ಟರ್, ಮಂಗಳೂರು, ಇವರ ಸಮರ್ಥ ಅಧ್ಯಕ್ಷತೆಯಲ್ಲಿ ಸಂಭ್ರಮಪೂರ್ವಕವಾಗಿ ಜರುಗಿತು. ಪ್ರೆಸಿಡೆಂಟರ ಆರಂಭ ಭಾಷಣ, ಶ್ರೀ. ಪಿ. ರಾಮಚಂದ್ರ ರಾವ್, ಬೀ. ಏ., ಬಿ. ಎಲ್., ಎಡ್ವೊಕೇಟ್, ಇವರ ಶಾಲಾ ಶ್ರೇಯಃ ಪ್ರಾರ್ಥನೆ, ಹೆಡ್ಮಾಸ್ಟರರಿಂದ ಶಾಲಾ ವರದಿಯ ವಾಚನ, ಬಹುಮಾನ ವಿನಿಯೋಗ ಮೊದಲಾದುವುಗಳೊಡನೆ, ಲೇಜಿಂ ಡ್ರಿಲ್, ಇಂಗ್ಲೀಷ್, ನಾಟಕ, 'ನೀಲಕಂಠ ಶಾಸ್ತ್ರೀಯ ನೀಲಾಂಜನ'ವೆಂಬ ಕನ್ನಡ ನಾಟಕ ಪ್ರತಿಮಾ ಪ್ರದರ್ಶನ, ಸಂಗೀತಾದಿಗಳೂ ನಡೆದು, ರಾಜಗೀತದೊಡನೆ ಸಭೆ ಮುಕ್ತಾಯವಾಯಿತು.

ಪ್ರೊಬೆಶನರಿ ಇನ್‌ಕಮ್ ಟೇಕ್ಸ್ ಆಫೀಸರರಾದ ಶ್ರೀ. ಎ. ಪಿ. ಚೌಧುರಿಯವರು ನಮ್ಮ ಮಂಗಳೂರ ಸರ್ಕಲಿಗೆ ವರ್ಗಾಯಿಸಲ್ಪಟ್ಟು ಚಾರ್ಜು ವಹಿಸಿಕೊಂಡಿರುವರು.

ಕದ್ರಿ ಶ್ರೀ. ಮಂಜುನಾಥ ಕೃಪಾಪೋಷಿತ ಯಕ್ಷಗಾನ ಕಲಾವರ್ಧಕ ಸಂಘದ ಆಶ್ರಯದಲ್ಲಿ ಕಾಂಗ್ರೆಸ್ಸಿನ ಸುವರ್ಣಮಹೋತ್ಸವದ ಸಲುವಾಗಿ ಇದೇ ತಿಂಗಳ ತಾ. ೨೮ನೇ ಶನಿವಾರ ರಾತ್ರೆ ಘಂಟೆ ೯ರಿಂದ ಕದ್ರಿ ದೇವಸ್ಥಾನದ ಪಟಾರದಲ್ಲಿ ಯಕ್ಷಗಾನ ಕಾಲಕ್ಷೇಪವು ಜರುಗಲಿರುವುದರಿಂದ ದೇಶಾಭಿಮಾನಿಗಳೂ ಕಲಾಭಿಮಾನಿಗಳೂ ಈ ಸತ್ಕಾರ್ಯದಲ್ಲಿ ಭಾಗವಹಿಸಿ ಚಂದಗಾಣಿಸಬೇಕೆಂದು ಸಂಘದ ಉಪಾಧ್ಯಕ್ಷರಾದ ಯಂ. ಆರ್. ಶಾಸ್ತ್ರಿಗಳು ತಿಳಿಸುತ್ತಾರೆ.

ಕೊಯಂಬತ್ತೂರಿನ ಟೆಲಿಗ್ರಾಫ್ ಡಿವಿಜನಲ್ ಇಂಜಿನೀಯರರಾದ ಮಿ. ಬಿ. ಪಿ. ದೇಸಾಯಿ, ಬಿ. ಏ., ಬಿ. ಎಸ್. ಸಿ, ಎ. ಎಮ್. ಐ. ಈ. ಯವರು ತಾ. ೧೬ರಲ್ಲಿ ಇಲ್ಲಿಗೆ ಬಂದು ತಾ. ೧೭ರಲ್ಲಿ ಪ್ರಯಾಣಿಸಿದರು. ಟ್ರಂಕ್ ಟೆಲಿಫೋನ್ ಸಿಸ್ಟಂಗೆ ಮಂಗಳೂರನ್ನು ಕೆಲಸವು ಭರದಿಂದ ಸಾಗುತ್ತಿದ್ದು, ಈಗ ಮಂಗಳವಾಡಿಯ ಪೈಗಳನ್ನು ಹಾಕುವ ಕೆಲಸವು ನಡೆದಿದೆ. ಜನವರಿ ತಾ. ೧೫ರಲ್ಲಿ ಸಸವು ಪೂರ್ತಿಯಾಗುವದು. ಆಗ್ಗೆ ಮಂಗಳೂರಿನಿಂದ ಟೆಲಿಫೋ ಮೂಲಕ ಇಂಡಿಯಾದ ನಾನಾ ಭಾಗಗಳಿಗೂ ಪ್ರಪಂಚದ ಅನೇಕ ಕಡೆಗಳಿಗೂ ಮಾತನಾಡಲು ಸಾಧ್ಯವಾಗುವದು.

ರೆವಿನ್ಯೂ ಬೋರ್ಡಿನ ಪ್ರಥಮ ಮೆಂಬರರಾದ ಮಿ. ಥೊಮಸ್ ರವರು ತಾ. ೧೫ರಲ್ಲಿ ಇಲ್ಲಿಗೆ ಚಿತ್ತೈಸಿ, ಮರುದಿನ ಇಲ್ಲಿದ್ದು ತಾ. ೨೦ರಲ್ಲಿ ಮದ್ರಾಸಿಗೆ ತೆರಳಿದರು.

ಪುತ್ತೂರು ರೆವಿನ್ಯೂ ಡಿವಿಜನಲ್ ಆಫೀಸರರಾದ ಮಿ. ಈ. ಎಚ್. ಎಸ್. ಆಬ್ರೆಹಾಮ್‌ರವರು, ಜಿಲ್ಲಾ ಬೋರ್ಡಿನ ಕಾರ್ಯಗಳಿಗಾಗಿ ಕಲೆಕ್ಟರರ ಪರ್ಸನಲ್ ಅಸಿಸ್ಟಾಂಟರಾಗಿ ನೇಮಿಸಲ್ಪಟ್ಟಿರುವದರಿಂದ, ಕಳ್ಳಿಕೋಟೆಯ ಹುಜೂರು ಶಿರಸ್ತೇದಾರರಾದ ಮಿ. ಎ. ಜೆ. ಮಸ್ಕರೇಂಜಸ್‌ರವರು ಅವರ ಸ್ಥಾನಕ್ಕೆ ಬಂದಿರುವರು.

ಮದ್ರಾಸ್ ಅಧಿಪತ್ಯದಲ್ಲಿ ಸಹಕಾರ ಸಂಘಗಳ ಡೆಪ್ಯುಟಿ ರೆಜಿಸ್ಟ್ರಾರರಾದ ಶ್ರೀ. ಗಿರಿಯಪ್ಪ, ಬೀ. ಎ. ಇವರು ಅನೇ ಸಂಘಗಳ ಜತೆ ರಿಜಿಸ್ಟ್ರಾರರಾಗಿ ಮೇಲಿನ ಸ್ಥಾನಕ್ಕೇರಿರುವರು. ಇವರು ನಮ್ಮ ಜಿಲ್ಲೆಯಲ್ಲಿ

ಇಲ್ಲಿಯ ಕೆನರಾ ಹ್ಯಾಸ್ಕೂಲಿನ ವರ್ಧಂತ್ಯುತ್ಸವವು, ವಾಡಿಕೆಯಂತೆ, ಅತ್ಯಂತ ಉತ್ಸಾಹಪೂರ್ವಕವಾಗಿ, ಕಳೆದ ತಾ. ೨೩ನೇ ಆಹಿತ್ಯವಾರ ಸಂಜೆ ಆ ಶಾಲೆಯ ವಠಾರದಲ್ಲಿ ಬಲು ಸೊಗಸಾಗಿ ನಡೆಯಿತು. ನಮ್ಮ ಜನಪ್ರೀತ ಜಡ್ಜರ ಪತ್ನಿಯವರಾದ, ಸುಲ್ತಾನಾ ಬೇಗಂ ಅವಿರುದ್ವೀನ್‌ರವರು ಇಂದಿನ ಅಧ್ಯಕ್ಷಪದವಿಯನ್ನು ಅಲಂಕರಿಸಿ, ತಮ್ಮ ಅನುಭವಪೂರ್ಣವಾದ ದಿವ್ಯವಾಣಿಯ ಭಾಷಣದಿಂದ ಸಭಿಕರ ಆನಂದಗೊಳಿಸಿದರು. ವಿ. ಬ ಯು. ರಾಮರಾಯರು ಶಾಲೆಯ ಪ್ರಾರ್ಥನೆಯ ಉಪಸನ್ಯಾಸವನ್ನು ಕೊಟ್ಟರು. ಹಲವು ಬಗೆಯ ಮನೋಹರ ಕಾರ್ಯಕ್ರಮಗಳಿಂದ ಈ ಉತ್ಸವವು ಜರುಗುವುದರೊಡನೆ, ಶಾಲೆಯ ಹಿಂದಿನ ಮ್ಯಾನೇಜರುಗಳಾದ ಶ್ರೀಮಾನ್ ಎ. ಶ್ರೀನಿವಾಸ ಪೈಗಳವರ ಮತ್ತೂ ದಿವಂಗತ ಬಾಳು ಪೈಗಳವರ ತೈಲಚಿತ್ರಗಳನ್ನು ಸುಬ್ಬರಾಯ ಪೈ ಸ್ಮಾರಕ ಭವನದಲ್ಲಿ ಸುಲ್ತಾನಾ ಬೇಗಂ ಅವಿರುದ್ವೀನ್‌ರವರ ಹಸ್ತದಿಂದ ಇರಿಸುವ ಒಂದು ಏರ್ಪಾಡೂ ನಡೆದಿದ್ದಿತು.

ಮಂಗಳೂರು, ಫಲ್ಗುಣಿನ ವಾರ್ಡು ನಂಬ್ರ ೧೫ರ ಸಂಬಂಧ ಇಂಡಿಯನ್ ಕ್ರಿಶ್ಚಿಯನ್ನರಿಗಾಗಿ ಕಾಯ್ದಿಟ್ಟ ಒಂದು ಸ್ಥಾನವು, ಮುನಿಸಿಪಲ್ ಕೌನ್ಸಿಲರ್ ಡಾ|| ಎ. ಎಫ್. ಕೊಯಿಲೊರವರ ರಾಜೀನಾಮೆಯಿಂದ ಖಾಲಿಯಾಗಿ ಆದಕ್ಕೀಗ ಹೊಸ ಚುನಾವಣೆಯಾಗಲಿವೆ. ಈ ಸಂಬಂಧ ಉಮೇದುವಾರರ ನಾಮಿನೇಶನ್ ಪತ್ರಗಳು ೧೫ನೇ ಇಸ್ವಿ ಜನವರಿ ತಾ. ೭ರಲ್ಲಿ ಬೆಳಗ್ಗೆ ೧೦ ಗಂಟೆಯಿಂದ ಸಂಜೆ ೪ ಗಂಟೆಯೊಳಗೆ ಮುನಿಸಿಪಲ್ ಆಫೀಸಿಗೆ ತಲುಪಬೇಕು. ಚುನಾವಣೆಯ ತಾರೀಕು ಆದೇ ತಿಂಗಳ ತಾ. ೩೦. ಮತಗಳ ಎಣಿಕೆ ಆದೇ ತಾ. ೩೧.

## ಮಂಗಳೂರು ಬಂದರಿನಲ್ಲಿ ಸ್ಟೀಮರುಗಳು.

ಬಿ. ಎಸ್. ಎನ್. ಕಂಪೆನಿಯವರ ಎಸ್. ಎಸ್. ದಯಾವತಿಯು ಸೋಮವಾರ ಪ್ರಾತಃಕಾಲ ಮುಂಬಾಯಿಯಿಂದ ಬಂದು, ಇಂದು ಪ್ರಾತಃಕಾಲ ೯ ಘಂಟೆಗೆ ಹಿಂತಿರುಗಿತು. ಎಸ್. ಎಸ್. ಪಾರ್ವತಿಯು ಬೃಹಸ್ಪತಿವಾರ ಪ್ರಾತಃಕಾಲ ಮುಂಬಾಯಿಯಿಂದ ಬಂದು, ಅಂದೇ ರಾತ್ರಿ ಕಲ್ಲಿಕೋಟೆಗೆ ತೆರಳಿ, ಶುಕ್ರವಾರ ರಾತ್ರಿ ಹಿಂತಿರುಗಿ, ಶನಿವಾರ ಪ್ರಾತಃಕಾಲ ೧೦ ಘಂಟೆಗೆ ಮುಂಬಾಯಿಗೆ ಹೊರಟು ಹೋಗುವದು.


## ನಮ್ಮ ಬ್ಯಾಲೆನ್ಸ್ ಷೀಟುಗಳೇ ಇರುವ ವಿದ್ಯಮಾನಗಳನ್ನು ಪ್ರಕಟಿಸುತ್ತವೆ.

"ಸ್ವದೇಶಿ"ಯ ಜಾಗ್ರತಿಯ ಕಾಲದಲ್ಲಿ ಸ್ಥಾಪನೆಗೊಂಡ, ಕಲ್ಕತ್ತೆಯ "ನ್ಯಾಶನಲ್" ದಿನದಿನಕ್ಕೂ ಬಲಗೊಂಡು ಪುಷ್ಟಿಯಾಗಿ, ಪರಿಣಾಮದಲ್ಲಿ, ಅದು ಇಂದು ಪೂರ್ವದೇಶಗಳ ಜೀವವಿಮಾ ಕಾರ್ಯಾಲಯಗಳಲ್ಲಿ ಪ್ರಮುಖವೆನ್ನಿಸಿದೆ. ಈ ಸಂಸ್ಥೆಯು, ಈ ವ್ಯವಹಾರ ನಡೆಸಿರುವ ಸುಮಾರು 30 ವರ್ಷಗಳ ಕಾಲದಲ್ಲಿ, ಪಾಲಿಸಿದಾರರಿಗೂ, ಅವರ ಹಕ್ಕುದಾರರಿಗೂ ಇಷ್ಟೊಂದು ಅಲ್ಪಾವಧಿಯಲ್ಲಿಯೇ "ಕ್ಲೈಮುಗಳ" ಪಾವತಿಗಾಗಿ 1,30,00,000 ರೂಪಾಯಿಗಳಿಗೂ ಮಿಕ್ಕು ಸಲ್ಲಿಸಿರುವ ದಷ್ಟೇ ಅಲ್ಲದೆ, ಕಂಪೆನಿಯ ಆಸ್ತಿಯ ರೂಪದಲ್ಲಿ ರೂಪಾಯಿ 2,50,00,000ಗಳಿಗೂ ಹೆಚ್ಚಾಗಿ ಸಂಗ್ರಹಿಸಿಡಲೂ ಸಮರ್ಥವಾಗಿದೆ. ಜೀವನದಲ್ಲಿ ಉಳಿಸಲಾದ ಗಂಟಿನೊಡನೆ ಜೂಜಾಡಲು ಬಯಸದವರ ಆತುರಪೂರ್ವಕವಾದ ಆಲೋಚನೆಗೆ ಒಳಗಾಗಲು ಈ ನಿಜ ವಿದ್ಯಮಾನಗಳೇ ಸಾಕೆನ್ನಬಹುದಾಗಿದೆ. ಇದು ನಿಮ್ಮ ಪರ್ಯಾಲೋಚನೆಗೂ ಏತಕ್ಕೆ ಒಳಗಾಗಬಾರದು?

ನಿನುಗೆ ಬೇಕಾದುದೇನೆಂದು ನೀವು ನನುಡೆ ತಿಳಿಸಿದರೇ ಸಾಕು; ಮಿಕ್ಕ ವಿಚಾರಗಳನ್ನೆಲ್ಲ ನಾವೇ ನೋಡಿಕೊಳ್ಳುವೆವು.

**ನ್ಯಾಶನಲ್ ಇನ್ಶುರೆನ್ಸ್ ಕಂಪೆನಿ, ಲಿಮಿಟೆಡ್,**
ಹೆಡ್ ಆಫೀಸು, ಕಲ್ಕತ್ತ.

**ಏಜನ್ಸಿಯ ಶರ್ತಗಳಿಗೆ ಬರೆದುಕೊಳ್ಳಿ:—**
ಬ್ರಾಂಚ್ ಸೆಕ್ರಟರಿ, **ನ್ಯಾಶನಲ್ ಇನ್ಶೂರೆನ್ಸ್ ಕೊ., ಲಿಮಿಟೆಡ್,**
362, ಚೈನಾ ಬಜಾರ್ ರೋಡ್, ಎಸ್ಪ್ಲನೇಡ್, ಮದ್ರಾಸ್.

**ಅಥವಾ**

ದಿ ಆರ್ಗನೈಜಿಂಗ್ ಸೆಕ್ರಟರಿ,
ಸಬ್ ಆಫೀಸ್,
171, ನ್ಯೂ ಸ್ಟ್ರೀಟ್, ಮಧುರೆ.

ದಿ ಚೀಫ್ ಏಜೆನ್ಸಿ,
ಅಕ್ಕಾಟ್ ಶ್ರೀನಿವಾಸಾಚಾರ್ ಸ್ಟ್ರೀಟ್,
ಬೆಂಗಳೂರು ಸಿಟಿ.

ಬೆಂಕಿ ಮತ್ತೂ ಮೋಟರ್ ಅಪಘಡಗಳ ಇನ್ಶೂರೆನ್ಸಿಗಾಗಿ
ದಿ ಅಸೋಸಿಯೇಟೆಡ್ ನ್ಯಾಶನಲ್ ಫಯರ್ ಮತ್ತೂ ಜನರಲ್ ಇನ್ಶುರೆನ್ಸ್ ಕೋ., ಲಿಮಿಟೆಡ್,
**ಎಂಬೀ ಸಂಸ್ಥೆಯೊಡನೆ ವಿಚಾರಿಸಿರಿ.**

# ತಾಲೂಕು ವರ್ತಮಾನ.

**ಸುಳ್ಯ:**—ಇಲ್ಲಿ ಸಹಕಾರಿ ಸಂಘ ಕೂಟದ ಆಶ್ರಯದಲ್ಲಿ ನಾಲ್ಕನೇ ಸಹಕಾರಿ ವ್ಯವಸಾಯ ಮತ್ತು ಕೈಗಾರಿಕೆ ಪ್ರದರ್ಶನವು ಸುಳ್ಯ ಮಂದಿರದ ಕಟ್ಟೋಣದಲ್ಲಿ ೧೯೩೬ ಜನವರಿ ತಾ. ೯, ೧೦, ೧೧ ರಂದು ನಡೆಯುವುದು. ಇದೇ ಸುಳ್ಯ ಜಾತ್ರೆಯ ಸಮಯ ಪ್ರದರ್ಶನಕ್ಕೆ ಬರುವ ವಸ್ತುಗಳು:—ಧಾನ್ಯಗಳು, ಫಲವಸ್ತುಗಳು, ಬೀಜಗಳು, ಉಪಕರಣಗಳು, ಮೇವಿನ ಪೈರುಗಳು, ಹಾನುವಾರುಗಳು, ಉತ್ತಮ ಜಾತಿಯ ಕೋಳಿಗಳು, ತರಕಾರಿಗಳು, ಗೆಡ್ಡೆಗೆಣಸುಗಳು, ಕೃಷಿಗಿಡಗಳು, ಇತರ ಕೈಗಾರಿಕೆ ಸಾಮಾನುಗಳು. ಪ್ರತಿದಿವಸ ಸಾಯಂ ೪ ಘಂಟೆ ಳರಿಂದ ಕೃಷಿ, ಕೈಗಾರಿಕೆ, ಗೋರಕ್ಷಣೆ, ಸಹಕಾರ, ಆರೋಗ್ಯ ಇವುಗಳ ಕುರಿತು ಬಲ್ಲವರಿಂದ ಭಾಷಣಗಳು ನಡೆಯುವವು.

**ಕಾರ್ಕಳ:**—ತಾ. ೧೪-೧೨-೧೯೩೫ರಲ್ಲಿ ಕಾರ್ಕಳ ತಾಲೂಕು ಕಾಂಗ್ರೆಸ್ ಕಮಿಟಿಯ ಮಹಾಸಭೆಯು ಕಮಿಟಿಯ ಅಧ್ಯಕ್ಷರಾದ ಶ್ರೀಯುತ ಕಾರ್ಕಳ ನಾಗಣ್ಣ ಹೆಗ್ಡೆರ ಅಧ್ಯಕ್ಷತೆಯಲ್ಲಿ ಜರಗಿ ಬರುವ ವರ್ಷಕ್ಕೆ ಕಮಿಟಿಯ ಕಾರ್ಯಕಾರಿ ಮಂಡಳಿಗೆ ಈ ಕೆಳಗಿನವರು ಆರಿಸಲ್ಪಟ್ಟರು. ಶ್ರೀಮಾನ್ ಕೆ. ಪದ್ಮನಾಭ ಕಾಮತ್ (ಅಧ್ಯಕ್ಷರು) ಆರ್. ಜಿ. ಶೆಣೈ ಮತ್ತು ಯಂ. ಯಸ್. ಅಧಿಕಾರಿ (ಜತೆ ಕಾರ್ಯದರ್ಶಿಯವರು) ಸಿ. ಮಂಜುನಾಥ ಕಾಮತ್ (ಖಜಾನ್ಜಿಯರು). ಸಹಾಯಕ ಸದಸ್ಯರು:—ಶ್ರೀಮಾನ್ ಜೆ. ನಾಗಣ್ಣ ಹೆಗ್ಡೆ, ಡಿ. ವೆಂಕಟೇಶ ಭಟ್ಟ, ಸಿ. ಸುಬ್. ಕೇಶವ ಶ್ಯಾನುಭಾಗ, ಕೆ. ಶ್ರೀನಿವಾಸ ಹೆಗ್ಡೆ, ಕೆ. ಪಿ. ಎ ಪೂಡುವಾಲ್. ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಶ್ರೀಮಾನ್ ಕೆ. ಪದ್ಮನಾಭ ಕಾಮತ್, ಜೆ. ನಾಗಣ್ಣ ಹೆಗ್ಡೆ, ಮತ್ತು ಯಂ. ಯಸ್. ಅಧಿಕಾರಿ ಇವರನ್ನು ಪ್ರತಿನಿಧಿಗಳನ್ನಾಗಿ ಆರಿಸಲಾಯಿತು.

**ಪಡುಬಿದ್ರೆ:**—ಇಲ್ಲಿ ಕಳೆದ ತಿಂಗಳಲ್ಲಿ "ತೆರೆಯಲ್ಪಟ್ಟ ೨೫ ವಿದ್ಯಾರ್ಥಿಗಳ ಸರ್ವೆ ತರಬೇತಿ ಕ್ಲಾಸು ಮಾಜಿ ರೆವಿನ್ಯೂ ಇನ್ಸ್‌ಪೆಕ್ಟರ್ ಜನಪ್ರೀತ ಶ್ರೀ। ಯಚ್. ನರಸಿಂಹಯ್ಯನವರ ನೇತೃತ್ವದಲ್ಲಿ ತನ್ನ ಅವಧಿಯ ೪೨ ದಿನಗಳನ್ನು ಕಳೆದು, ಇನ್ಸ್‌ಪೆಕ್ಟಿಂಗ್ ತಹಸಿಲ್ದಾರರವರ ಸಮದಲ್ಲಿ ಪೂರ್ಣತೆಯನ್ನೈದಿತು. ಸಭೆಯು ಉಪಹಾರ, ಕೂಟದ ವಿಚಿತ್ರವೇ ಮೊದಲಾದ ಕಾರ್ಯಭಾಗಗಳಿಂದಾರಂಭವಾಗಿ ಭಾಷಣ ಗಾಯನಗಳ ಅಂತ್ಯದಲ್ಲಿ ಧನ್ಯವಾದಗಳೊಡನೆ ಕೊನೆಗಂಡಿತು. ಶೂರ ಮಹನೀಯರ ಪರವಾಗಿ ಸ್ಥಳೀಕ ಬೋ। ಹೈ। ಎ। ಶಾಲೆಯಲ್ಲಿ ಒಂದು ಸತ್ಕಾರ ಕೂಟವೂ ಜರಗಿಸಲ್ಪಟ್ಟು ಅಧಿಕಾರಿಗಳಿಂದ ಯೋಗ್ಯತಾ ಪತ್ರಗಳು ಹಂಚಲಾದುವು.

**ತೋಕೂರು ಜೋಗಟ್ಟೆ:**—ಇಲ್ಲಿಯ ಹಿಂದೂ ಎಲಿಮೆಂಟರಿ ಶಾಲೆಯಲ್ಲಿ ಸ್ಥಾಪಿತವಾದ ಯಕ್ಷಗಾನೋಜ್ಜೀವಿನಿ ಸಂಘದ ೧೧ನೇ ವರ್ಷದ ವರ್ಧಂತಿ ಉತ್ಸವವು ಇದೇ ತಾ. ೨೯-೧೨-'೩೫ನೇ ಆದಿತ್ಯವಾರ ರಾತ್ರಿ ಜರಗಲಿಕ್ಕಿರುವುದು. ಆ ಪ್ರಯುಕ್ತ ಯಕ್ಷಗಾನ ಪ್ರೇಮಿಗಳೆಲ್ಲರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.

**ಕುಂದಾಪುರ:**—ಇಲ್ಲಿಯ ಬೋರ್ಡು ಹೈಸ್ಕೂಲಿನ 'ಶಾಲಾ ವರ್ಧಂತಿ'ಯು ಇದೇ ತಿಂಗಳು ತಾರೀಕು ೨೧ರಲ್ಲು ಇಲ್ಲಿಯ ಸಬ್ ಕಲೆಕ್ಟರವರಾದ ಶ್ರೀಯುತ ವೆಂಕಟೇಶ್ವರನ್, ಎಮ್. ಎ., ಐ. ಸಿ. ಎಸ್. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಶಾಲೆಯ ಹಳೆ ವಿದ್ಯಾರ್ಥಿಗಳ ಕೂಟವು ಇದೇ ತಿಂಗಳ ತಾರೀಕು ೨೨ರಲ್ಲು ನಡೆಯಿತು.

**ಕಡಬ:**—ಹೊಸತಾಗಿ ಚುನಾವಣೆ ಹೊಂದಿದ ಕಡಬ ಪಂಚಾಯತ ಬೋರ್ಡು ಮೆಂಬರರ ಪ್ರಥಮ ಸಭೆಯು ತಾ. ೧೧—೧೨—'೩೫ ರಲ್ಲು ಬೋರ್ಡಿನ ಆಫೀಸಿನಲ್ಲಿ ನೇರಿತು. ಶ್ರೀಯುತ ಬಿ. ಟಿ. ಅರಿಗ ಜೈನಿಯವರು ಬೋರ್ಡಿನ ಅಧ್ಯಕ್ಷರಾಗಿ ಮೂರನೆಯ ಬಾರಿಗೆ ಸರ್ವಾನು ಮತದಿಂದ ಆರಿಸಲ್ಪಟ್ಟರು.

**ಪಡುಬಿದ್ರೆ:**—ಇಲ್ಲಿಯ ಪೂರ್ವಾಪರ ಪ್ರಕಾರ ಆಗುವ ಸೀಮೆಯ ಕಂಬಳವು ಇದೇ ಯುವ ಸಂವತ್ಸರದ ಧನುರ್ಮಾಸ ೩೩ ನೆಯ ಶುಕ್ರವಾರ (ತಾ. ೬—೧—೧೯೩೬ನೇ) ದಿವಸ ಜರಗುವುದು.

**ಬೈಲು-ಕೊಳೆಂಬೆ:**—ಈ ಗ್ರಾಮದ ತಲ್ಲಡ ಬೀಡಿನಲ್ಲಿದ್ದ ಜಿನಧರ್ಮಪಾಲ ಬಲ್ಲಾಳರು ತನ್ನ ೭೩ನೇ ವರ್ಷದಲ್ಲಿ ಸ್ವರ್ಗಸ್ಥರಾದರು. ಇವರು ಜೈನ್ ಸ್ವಾಮಜದಲ್ಲಿ ಶ್ರೀಮಂತರಾಗಿದ್ದು, ಜ್ಯೋತಿಷ್ಯ, ವೈದ್ಯ, ಯಂತ್ರ, ಮಂತ್ರ, ತರ್ಕಶಾಸ್ತ್ರ ಇವುಗಳ ಅನುಭವವನ್ನು ತುಂಬಾ ಪಡೆದು, ಪರೋಪಕಾರಿ, ಪ ಧಾರ್ಮಿಕರಾಗಿದ್ದು ಮಾ ಯ ವಾ ಗಿ ಹೋದದ್ದು ತುಂಬಾ ಶೋಚನೀಯಕರವಾಗಿದೆ. ಮೃತರ ಆತ್ಮಕ್ಕೆ ಶಾಂತಿಯನ್ನು ಭಗವಂತನು ಅನುಗ್ರಹಿಸಲಿ.

**ಕಾಸರಗೋಡು:**—ತಾ. ೧೭ರಲ್ಲು ಸ್ಥಳೀಯ ಕೊ-ಓಪರೇಟಿವ್ ಕಟ್ಟಡದಲ್ಲಿ ಸಂಗೀತ ವಿದ್ವಾನ್ ಜಿ. ಆನಂದರಾಯರ ಸುಮನೋಹರ ವಾದ ಮುರಲೀಗಾನವಿತ್ತು.

ಕಳೆದ ವಾರದಲ್ಲಿ ಮಂಗಳೂರಿನಿಂದ ಇಲ್ಲಿಗೆ ಬಂದ ಎಸ್. ಆರ್. ಎಸ್ ಹೋಮಿನವರು ಸ್ಥಳೀಯರೊಡನೆ ಫುಟ್‌ಬೋಲ್, ಹೊಕ್ಕಿ ಮತ್ತು ಟೆನ್ನಿಸ್ ಆಟಗಳನ್ನಾಡಿದರು. ಫುಟ್‌ಬೋಲಿನಲ್ಲಿ ಇತ್ತಂಡ ತಜರು ಸರಿಸರಿಯಾಗಿ ಹೊಕ್ಕಿಯಲ್ಲಿ ಸ್ಥಳೀಯರೇ ಜಯಶಾಲಿಗಳಾಗಿರುವರು.

ಇಲ್ಲಿಯ ಬೋರ್ಡು ಹೈಸ್ಕೂಲಿನ ವಾರ್ಷಿಕೋತ್ಸವವು ಸ್ಥಳೀಯ ಮುನ್ಸೀಫರಾದ ಮಿ. ಪಿ. ಎ. ನಜರೇತ, ಬಿ. ಎ., ಎಲ್. ಎಲ್.,ರವರ ಅಧ್ಯಕ್ಷತೆಯಲ್ಲಿ ತಾ. ೨೨ರಲ್ಲಿ ಜರಗಿತು. ತಾ. ೨೧ರಲ್ಲು ಮಿಸೆಸ್. ನಜರೇತರ ಅಧ್ಯಕ್ಷತೆಯಲ್ಲಿ ಮಹಿಳೆಯರ ಕೂಟವು ಸೇರಿ ಇನಾಮು ಹಂಚೋಣ, ಅಧ್ಯಕ್ಷರ ಭಾಷಣ, 'ವೆರೈಟಿ ಎಂಟರ್‌ಟೈನ್‌ಮೆಂಟ್' ಮುಂತಾದ ಕಾರ್ಯಕ್ರಮಗಳು ಯಶಸ್ವಿಯಾಗಿ ಜರಗಿದುವು. ಮರು ದಿನ ಪ್ರಾತಃಕಾಲ ಶ್ರೀ. ಕೆ. ವಿಠ್ಠಲ ನ್ಯಾಕರ ಅಧ್ಯಕ್ಷತೆಯಲ್ಲಿ ಹಳೆ ವಿದ್ಯಾರ್ಥಿಗಳ ಕೂಟವೊಂದು ಸೇರಿ 'ಹಳೆ ವಿದ್ಯಾರ್ಥಿಗಳ ಸಂಘ'ವನ್ನು ಸ್ಥಾಪಿಸಿದರು. ಅಪರಾಹ್ನ ೫ ಘಂಟೆಗೆ ಮಿ. ಪಿ. ಎ. ನಜರೇತರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಹಳೆ ವಿದ್ಯಾರ್ಥಿಗಳಾದ ಶ್ರೀ. ಕೆ. ನಾರಾಯಣ ನ್ಯಾಕ, ಎಂ. ಎ., ಬಿ. ಎಲ್.ರವರ ಪಾಲಾ ಟೋಸ್ಟು, ಶಾಲಾ ವರದಿ ವಾಚನ, ಮೊದಲನೆ ದಿನ ಕೊಟ್ಟು ಬಾಕಿ ಉಳಿದವರಿಗೆ ಇನಾಮು ಹಂಚುವುದು, ಅಧ್ಯಕ್ಷರ ಭಾಷಣ, ಧನ್ಯವಾದ ಸಮರ್ಪಣೆ, 'ವೆರೈಟಿ ಎಂಟರ್‌ಟೈನ್‌ಮೆಂಟ್' ಮುಂತಾದ ಕಾರ್ಯಕ್ರಮಗಳು ಜನ ಮನಾಕರ್ಷಕವಾಗಿ ಜರಗಿದುವು.

## ಕರ್ನಾಟಕ ಸೇವಾಸಂಘ ಸ್ಥಾಪನೆ.

ಬೊಂಬಾಯಿ ಕರ್ನಾಟಕರ ಉಪಕಾರಾರ್ಥವಾಗಿ ಸಾಹಿತ್ಯ ಮತ್ತು ಸಾಮಾಜಿಕ ಕಾರ್ಯಗಳನ್ನು ಕೈಕೊಳ್ಳುವ ಉದ್ದೇಶದಿಂದ ಕಳೆದ ಭಾನುವಾರ 'ಕರ್ನಾಟಕ ಸೇವಾಸಂಘ' ಎಂಬ ಹೆಸರಿನಿಂದ ಒಂದು ಸಂಘವು ಸ್ಥಾಪಿಸಲ್ಪಟ್ಟಿತು. ಶ್ರೀಮಾನ್ ವಿ. ಆರ್. ಸೆಟ್ಟೂರ್, ಬಿ. ಇ., ಎ. ಎಂ. ಐ. ಈ.ಯವರು ಅಧ್ಯಕ್ಷರಾಗಿಯೂ, ಶ್ರೀಯುತ ಹೆಚ್. ಕೆ. ಗುಂಡೂರಾಯರು ಕಾರ್ಯದರ್ಶಿಗಳಾಗಿಯೂ ಮತ್ತು ಈ ಕೆಳಗೆ ಕಂಡ ಮಹನೀಯರುಗಳು ಸಂಘದ ಸಮಿತಿಯ ಸದಸ್ಯರುಗಳಾಗಿಯೂ ಚುನಾಯಿಸಲ್ಪಟ್ಟರು. (೧) ಶ್ರೀ. ಎ. ಆರ್. ಅಳಸಿಂಗಾಚಾರ್ಯರು. (೨) ಶ್ರೀ. ವಿ. ಕಡಾಂಬಿ, ಬಿ. ಎಸ್. ಸಿ. (ಆನರ್ಸ್) (೩) ಶ್ರೀ. ಡಿ. ಎನ್. ಮೂರ್ತಿ, ಬಿ. ಎ., ಪ್ರಿನ್ಸಿಪಾಲ್, ಮಾಡಲ್ ಹೈ ಸ್ಕೂಲ್, ಬರೋಡ, (೪) ಶ್ರೀ. ಎಂ. ಸಿ. ಶೇಷಾದ್ರಿ ಆಯ್ಯಂಗಾರ್, ಬಿ. ಎಸ್. ಸಿ. ಬಿ. ಈ. (೫) ಶ್ರೀ. ಟಿ. ಎಸ್. ರಾಮರಾವ್. (೬) ಶ್ರೀ. ಹೆಚ್. ಎಸ್. ರಮೇಶ. (೭) ಶ್ರೀ. ಹೆಚ್. ವಿ. ವೆಂಕಟಸ್ವಾಮಿ. (೮) ಶ್ರೀ. ಯು. ವಿ. ರಾಮನ್.. ಕರ್ನಾಟಕದ ಎಲ್ಲಾ ಭಾಗಗಳಿಂದಲೂ ಸಹಾನುಭೂತಿ ಮತ್ತು ಸಹಾಯವು ಕೋರಲ್ಪಟ್ಟಿದೆ. ವಿಶೇಷಗಳಿಗೆ ದಯವಿಟ್ಟು ಬರೆಯಿರಿ. ಕಾರ್ಯದರ್ಶಿ, ಕರ್ನಾಟಕ ಸೇವಾ ಸಂಘ, ೧೧, ಪಂಡಿತ ನಿವಾಸ, ಪಾದರ್. (ಬಿ. ಬಿ. ಎಂಡ್ ಸಿ. ಐ.) ಬೊಂಬಾಯಿ.

## ಮಡಿಕೇರಿಯ ಪತ್ರ

ಮಂಗಳೂರಿನಲ್ಲಿ ಬಹಳ ವರ್ಷಗಳಿಂದ "ದಿ ಬೋಂಬೇ ರೆಸ್ಟೋರೆಂಟ್" ಎಂಬ ಹೆಸರುವಾಸಿಯಾಗಿದ್ದ ಕಾಫಿ ಹೊಟೇಲಿನ ಮೂಲಕರಾದ ಶ್ರೀ. ವಾಮನ ರಾಯರು ಈಗ ಮಡಿಕೇರಿಯಲ್ಲಿ ಒಂದು ಹೊಟೇಲನ್ನು ತೆರೆಯಲು ನಿಶ್ಚಯ ಮಾಡಿದ್ದು ಇದನ್ನು ತೆರೆಯುವ ಸಮಾರಂಭವು ಸೆಂಟ್ರಲ್ ಹೈಸ್ಕೂಲಿನ ಹೋಲಿನಲ್ಲಿ ತಾ. ೧೯—೧೨—'೩೫ರಲ್ಲಿ ಇಲ್ಲಿನ ಸುಪ್ರಸಿದ್ಧ ವಕೀಲರೂ ನಗರಸಭಾಧ್ಯಕ್ಷರೂ ಆದ ಐ. ಸಿ. ಸುಬ್ಬಯ್ಯನವರಿಂದ ನಡೆಸಲ್ಪಟ್ಟಿತು. ಈ ಸ್ಥಳದ ಸರಕಾರಿ ಉದ್ಯೋಗಸ್ಥರನ್ನೂ ಇನ್ನಿತರ ಪದ್ಧೃಹಸ್ಥರನ್ನೂ ಈ ಸಂದರ್ಭದಲ್ಲಿ ಶ್ರೀಯುತ ವಾಮನ ರಾಯರು ಚಿಕ್ಕದೊಂದು ಫಲಾಹಾರ ಕೂಟಕ್ಕೆ ಆಮಂತ್ರಿಸಿದ್ದರು.

ಇದೇ ತಿಂಗಳಿನ ೨೨ನೆಯ ತಾರೀಕಿನಲ್ಲಿ ಎಂಟನೆಯ ಕೊಡಗು ಪ್ರಾಂತಿಕ ಸಹಕಾರಿ ಸಮ್ಮೇಳನವು ಜರುಗಿತು. ಮೈಸೂರಿನ ಸಹಕಾರಿ ಸಂಘಗಳ ರಿಜಿಸ್ಟ್ರಾರರಾದ ಮಾ। ರಾ। ಯಮ್. ಜಿ. ಮೆಹ್ಕ್ರಿ, ಬಿ. ಎ., ಯಲ್.ಯಲ್. ಬಿ.ಯವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಈ ಸಮ್ಮೇಳನದ ಸಂದರ್ಭದಲ್ಲಿ ಕೆಳವು ಭಾಷಣಗಳ, ನಾಟಕಾದಿ ವಿನೋದ ಗಳ ಏರ್ಪಾಡಿತ್ತು.

ಬೊಂಬಾಯಿ ಜೀವವಿಮಾ ಸಂಘದ ಡೈರೆಕ್ಟರುಗಳಲ್ಲೊಬ್ಬರಾದ ಭಾಸ್ಕರ್ ರಾವ್ ಮೆಹತ ಮತ್ತು ಸಂಘದ ವ್ಯವಸ್ಥಾಪಕರಾದ ಜ್ಯೋತೀಂದ್ರ ಎಲ್. ಮೆಹತರು ಸದ್ಯದಲ್ಲಿಯೇ ಕೊಡಗಿಗೆ ಬರಲಿರುವರು. ಈ ಸಂದರ್ಭದಲ್ಲಿ ಸೆಂಟ್ರಲ್ ಹೈಸ್ಕೂಲಿನ ಹೋಲಿನಲ್ಲಿ ಒಂದು ಸಾರ್ವಜನಿಕ ಕೂಟವು ಏರ್ಪಡಿಸಲ್ಪಡುವುದೆಂದೂ, ತಿಂಡಿತೀರ್ಥಗಳ ವ್ಯವಸ್ಥೆ ಮಾಡಲಾಗುವುದೆಂದೂ ತಿಳಿದುಬರುತ್ತದೆ.

ಈ ತಿಂಗಳಿನ ಅಂತ್ಯದಲ್ಲಿ ಊಟಿಯಿಂದ ಒಂದು "ಕ್ರಿಕೇಟ್ ಟೀಮ್" ಇಲ್ಲಿಗೆ ಬಂದು ಸ್ಥಳೀಕ ಟೀಮುಗಳೊಂದಿಗೆ ಆಟವಾಡಲಿರುವುದು. ಇತ್ತೀಚೆಗೆ ಕೊಡಗಿಗೆ ಪರಸ್ಥಳಗಳಿಂದ ಆಟಗಾರರು ಬರುವುದೂ ಇಲ್ಲಿಂದ ಆಟಗಾರರ ಪಂಗಡಗಳು ಪರಸ್ಥಳಕ್ಕೆ ಹೋಗಿ ತಮ್ಮ ಕ್ರೀಡಾ ಕೌಶಲ್ಯವನ್ನು ಪ್ರದರ್ಶಿಸುವುದೂ ಹೆಚ್ಚುತ್ತಿದೆಯೆನ್ನಬಹುದು.


ಎಚ್ಚರಿಕೆ! ಮೋಸಗಾರರ ವಿಷಯದಲ್ಲಿ ಎಚ್ಚರದಿಂದಿರಿ!!

(100 ರೂಪಾಯಿಗಳ ಬಹುಮಾನ.)

ಗುಪ್ತ ಪಶೀಕರಣ ಯಂತ್ರ.

ಈ 'ಯಂತ್ರ'ವನ್ನು ಒಬ್ಬನು ತನ್ನ ಸ್ವಾಧೀನವಿರಿಸಿಕೊಂಡ ಮಾತ್ರ ದಿಂದಲೇ, ಅತ್ಯಂತ ಕಷ್ಟತರವಾದ ಉದ್ದೇಶವಾದರೂ ನೆರವೇರುವುದು. ಇದರಿಂದ ಕೆಟ್ಟ ಗ್ರಹಗಳ ಬಾಧೆ ತೊಲಗುವುದು; ಶತ್ರುಗಳ ಮೇಲೆ ಜಯಲಾಭ ದೊರಕುವುದು; ನಿಮಗೆ ಬೇಕಾದಾಕೆ ನಿಮ್ಮ ಹಿಡಿತದೊಳಗೆ ಬರುವಂತಾಗುವುದು. ಪರೀಕ್ಷೆ, ವ್ಯಾಪಾರ, ವ್ಯಾಜ್ಯ ಮೊಕದ್ದಮೆಗಳಲ್ಲಿಯೂ ಕುದುರೆಗಳ ಜೂಜು, ಸೋಡ್ತಿ, ನೌಕರಿಗಳಲ್ಲಿಯೂ, ಪುತ್ರ ಮತ್ತೂ ಆಸ್ತಿಯ ಸಂಪತ್ತಿನ ಪ್ರಾಪ್ತಿಯಲ್ಲಿಯೂ, ಋಣ ಪರಿಹಾರ, ಅಪಾಯಕಾರಕ ರೋಗನಿವಾರಣೆಯಲ್ಲಿಯೂ ನಿಮಗೆ ಜಯಲಾಭವು ಸಿಕ್ಕುವುದು. ಇದು ನಿಮ್ಮನ್ನು ಅದೃಷ್ಟಶಾಲಿಯಾಗಿ ಮಾಡುವುದು. ಯಾರು ಇದನ್ನು ಸುಳ್ಳೆಂದು ರುಜುವಾತು ಮಾಡಿಕೊಡುವರೋ ಅವರಿಗೆ ಬಹುಮಾನ ರೂ. 100. ಬೆಲೆ ರೂ. 2. ಬೆಳ್ಳಿಯ ಮುಚ್ಚಳದಕ್ಕೆ ರೂ. 8—4; ಚಿನ್ನದ ಮುಚ್ಚಳದಕ್ಕೆ ರೂ. 12.

Mahashakti Mantra Ashram,
No. 10, P. O. Parabalpore, Patna.

## ಇಪ್ಪತ್ತೊಂದನೆಯ ಕನ್ನಡ ಸಾಹಿತ್ಯ ಸಮ್ಮೇಳನ

ಮಹಾಶಯರೆ,

೨೧ನೆಯ ಕರ್ನಾಟಕ ಸಾಹಿತ್ಯ ಸಮ್ಮೇಳನವು ಬೊಂಬಾಯಿ ಮುಂ. ಪಟ್ಟಣದಲ್ಲಿ (ಪ್ರಸಿದ್ಧವಾದ ಸರ್ ಕಾವಸ್ಜಿ ಜಹಾಂಗೀರ್ ಸಭಾಮಂಟಿರದಲ್ಲಿ) ೧೯೩೬ನೆಯ ಡಿಸೆಂಬರ್ ೨೬ನೆಯ ತಾರೀಕು ಗುರುವಾರ ಮಧ್ಯಾಹ್ನ ನಂತರ ೩ ಘಂಟೆಗೆ ಪ್ರಾರಂಭವಾಗಿ, ೨೭, ೨೮ನೆಯ ತಾರೀಕುಗಳಲ್ಲಿ ಸಹ ನಡೆಯುವಂತೆ ಏರ್ಪಾಟಾಗಿದೆ.

ಅಲ್ಲಿಯ ಸ್ವಾಗತ ಮಂಡಲಿಯು ಪ್ರಸಿದ್ಧ ವಕೀಲರಾದ ಶ್ರೀಮಾನ್ ರಂಗೋ ಆಪ್ಪಾಜಾಯ್ ಜಹಗೀರ್‌ದಾರ್, ಎಂ.ಎ., ಎಲ್.ಎಲ್.ಬಿ., ಅವರ ನೇತೃತ್ವದಲ್ಲಿ ಸಮ್ಮೇಳನಕ್ಕೆ ಬೇಕಾದ ಅನುಕೂಲತೆಗಳನ್ನು ಸಿದ್ಧ ಗೊಳಿಸುತ್ತಿದೆ.

ಘನ ವಿದ್ವಾಂಸರೂ ಮೈಸೂರು ಸರಕಾರದ ವಿದ್ಯಾ ಶಾಖೆಯ ಮುಖ್ಯಾಧಿಕಾರಿಗಳೂ ಆದ ಶ್ರೀಮಾನ್ ಎನ್. ಎಸ್. ಸುಬ್ಬರಾವ್, ಎಂ.ಎ.(ಕೆಂಟಾಬ್), ಬ್ಯಾರಿಸ್ಟರ್-ಆಟ್-ಲಾ, ಅವರು ಅಧ್ಯಕ್ಷಸ್ಥಾನವನ್ನು ವಹಿಸಲು ದಯವಿಟ್ಟು ಒಪ್ಪಿರುತ್ತಾರೆ.

ಸಮ್ಮೇಳನದ ಅಂಗಗಳಾಗಿ, ಕವಿಗೋಷ್ಠಿಯು ಶ್ರೀಮಾನ್ ದ. ರಾ. ಬೇಂದ್ರೆ, ಎಂ.ಎ., ಅವರ ಅಧ್ಯಕ್ಷತೆಯಲ್ಲಿಯೂ, ಸಂಶೋಧಕ ಗೋಷ್ಠಿಯು ಶ್ರೀಮಾನ್ ನಾ. ಶ್ರೀ. ರಾಜಪುರೋಹಿತರ ಅಧ್ಯಕ್ಷತೆಯಲ್ಲಿಯೂ ನಡೆಯುವುವು.

ಸಮ್ಮೇಳನದ ಪ್ರಾರಂಭೋತ್ಸವವನ್ನು ಬೊಂಬಾಯಿ ಸರಕಾರದ ವಿದ್ಯಾ ಸಚಿವರಾದ ದಿವಾನ್ ಬಹದ್ದೂರ್ ಶ್ರೀಮಾನ್ ಎಸ್. ಟಿ. ಕಂಬಳಿ, ಬಿ.ಎ., ಎಲ್.ಎಲ್.ಬಿ., ಅವರು ಆಗ ಮಾಡಿಸಲು ಒಪ್ಪಿರುತ್ತಾರೆ.

ಸಮ್ಮೇಳನ ಕಾಲದಲ್ಲಿ ಉಪನ್ಯಾಸಗಳು, ಕಾವ್ಯ ವಾಚನ, ನಾಟಕ ಪ್ರದರ್ಶನ ಮೊದಲಾದ ಸಾಹಿತ್ಯ ಕಾರ್ಯಗಳೂ ಭಾಷಾ ಸಾಹಿತ್ಯಗಳಿಗೆ ಸಂಬಂಧಪಟ್ಟ ಪ್ರಶ್ನೆಗಳ ಚರ್ಚೆಗಳೂ ಸ್ವಾರಸ್ಯ ರೀತಿಯಲ್ಲಿ ನಡೆಯುವು ವೆಂದು ನಿರೀಕ್ಷಿಸಲ್ಪಟ್ಟಿದೆ. ಮತ್ತು ಕರ್ನಾಟಕ ಕಲಾ ಸಾಹಿತ್ಯ ವಸ್ತು ಪ್ರದರ್ಶನವೊಂದು ನಡೆಯುವಂತೆ ಏರ್ಪಾಟಾಗಿದೆ.

ತಾವು ದಯಮಾಡಿ ಬೊಂಬಯಿಗೆ ಬಂದು, ಸಮ್ಮೇಳನದಲ್ಲಿ ಸಹಕರಿಸಿ, ಸ್ವಾಗತ ಮಂಡಲಿ ಪರಿಷತ್ತುಗಳೊಡನೆ ದೇಶಭಾಷಾ ಸೇವೆಯಲ್ಲಿ ಭಾಗವಹಿಸಬೇಕೆಂದು ಬೇಡುತ್ತೇವೆ. ತಮ್ಮ ವಿಧೇಯರು,
ಸಿ. ಕೆ. ವೆಂಕಟರಾಮಯ್ಯ, ಗೌ॥ ಕಾರ್ಯದರ್ಶಿ, ಕರ್ನಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು. ಜಿ. ಕೆ. ಬೆಟಗೇರಿ, ಎ. ಶೇಷನ್, ದಿನಕರ ದೇಸಾಯಿ, ಉಚ್ಚಿಲ ಶ್ರೀನಿವಾಸ, ಎಚ್. ಎಸ್. ಕಲ್ಲಾಡ, ಗೌ॥ ಕಾರ್ಯದರ್ಶಿಗಳು, ಸ್ವಾಗತ ಮಂಡಲಿ, ಬೊಂಬಾಯಿ.

## ಕನ್ನಡ ಸಾಹಿತ್ಯ ಸಮ್ಮೇಲನ.

### (೨೧ನೇ ಅಧಿವೇಶನ, ಮುಂಬಯಿ)

### ಸ್ವಾಗತ ಸಮಿತಿ.

### ಕೊನೆಯ ಸಮಾಚಾರ ಪತ್ರಿಕೆ.

ಸಮ್ಮೇಲನದ ಬಗ್ಗೆ ಯಾವತ್ತೂ ಸಿದ್ಧತೆಗಳು ಸಂಪೂರ್ಣವಾಗಿಆಗುತ್ತವೆಂದು ಅರುಹಲಿಕ್ಕೆ ಸಂತೋಷವಾಗುತ್ತದೆ. ಸಮ್ಮೇಲನದ ಮೂರು ದಿವಸಗಳ ಕಾರ್ಯಕ್ರಮ ವಿವರಗಳು ಕನ್ನಡಿಗರೆಲ್ಲ ಇಲ್ಲಿಗೆ ಬಂಡ ನಂತರ ತಿಳಿಸಲ್ಪಡುವವು. ಪ್ರತಿನಿಧಿಗಳಿಗೆ ಉಳಕೊಳ್ಳಲಿಕ್ಕೆ ಎಂಪಾಯರ ಇಮಾರತಿನಲ್ಲಿ ವ್ಯವಸ್ಥೆ ಮಾಡಿದೆ ಎಂದು ಈ ಮೊದಲೇ ತಿಳಿಸಿದೆ. ಇದು ವಿಶೇಷ ಹಣ ಕೊಟ್ಟು ಉಳಿದುಕೊಳ್ಳುವ ಪ್ರತಿನಿಧಿಗಳ ಬಗ್ಗೆ ಆದೆ. ಆದರೆ ಅನೇಕ ಬಡಜನರು ಸಮ್ಮೇಲನಕ್ಕೆ ಬರುವ ಆಶ್ವಾಸನವನ್ನಿತ್ತದ್ದರಿಂದ ಆವರಿಗೆ ಕಡಿಮೆ ವೆಚ್ಚದಲ್ಲಿ ಉಳಿದುಕೊಳ್ಳುವ ಹಾಗೂ ಊಟ ಮಾಡುವ ಬಗ್ಗೆ ಪ್ರತಿನಿಧಿಗಳ ಎರಡನೇ ಬಿಡಾರವೆಂದು ಇಲ್ಲಿ ಗಿರಗಾವದಲ್ಲಿ, ಮುರಾಠಾ ಹಾಯ್‌ಸ್ಕೂಲಿನ ಭವ್ಯ ಇಮಾರತಿನಲ್ಲಿ ವ್ಯವಸ್ಥೆ ಮಾಡಲಾಗಿದೆ. ಒಂದು ವಾರದ ವರೆಗೆ ಎಷ್ಟೇ ದಿವಸ ವಿದ್ದರೂ ಆ ಅವಧಿಗೆ ಪ್ರತಿಯೊಬ್ಬರಿಗೆ ೧—೮—೦, ಹಾಗೂ ಊಟಿ ಉಪಹಾರಗಳ ಬಗ್ಗೆ ಪ್ರತಿ ದಿವಸಕ್ಕೆ ಪ್ರತಿಯೊಬ್ಬರಿಗೆ ೦—೧೨—೦ ಆಣೆಯಂತೆ ಆಕರಿಸುವದನ್ನು ನಿಶ್ಚಯಿಸಲಾಗಿದೆ. ಈ ಸ್ಥಳದಲ್ಲಿ ವಿಶೇಷ ಅನುಕೂಲತೆಗಳು ಅಂದರೆ 

## ಇಟೆಲಿಯವರ ನಾಗರಿಕತನ ಎಲ್ಲಿಗೆ ಬಂದಿದೆ?

ರೆಡ್ ಕ್ರಾಸಿಗೆ ಸಂಬಂಧಿಸಿದ ಏಳು ಮಂದಿ ಡಾಕ್ಟರರು ಡೇಸಿಯ ಆಸ್ಪತ್ರೆಯ ಕಟ್ಟಡಗಳ ಮೇಲೆ, ಇಟೆಲಿಯವರು, ಬಾಂಬ್ ಹಾಕಿರಿಸಿದುದು ನಿಜವೆಂದು ಒಂದು ಪ್ರಕಟಣೆ ಹೊರಡಿಸಿದ್ದಾರೆ. ಅಲ್ಲಿ ರೆಡ್ ಕ್ರಾಸಿನವರ ಚಿಹ್ನೆಗಳು ಧಾರಾಳಸಂಖ್ಯೆಯಿಂದ ಇವೆ; ಅವು ಚೆನ್ನಾಗಿ ಗೋಚರಕ್ಕೆ ಬರುತ್ತಿವೆ; ಹೀಗಿದ್ದೂ ಇವರು ಇಂತಹ ಅಕೃತ್ಯವನ್ನು ನಡೆಸಿರುವರೆಂದು ಆ ಡಾಕ್ಟರುಗಳು ಜನಾಂಗಸಂಘಕ್ಕೂ, ಧಾರ್ಮಿಕ ಆಚಾರ್ಯಪುರುಷರಿಗೂ ದೂರು ಕೊಟ್ಟಿದ್ದಾರೆ. ಈ ಬಾಂಬಿನ ಏಟುಗಳಿಂದ ಸತ್ತವರಲ್ಲಿ ಗಾಯಗೊಂಡವರಲ್ಲಿ ಹೆಂಗಸರೂ ಮಕ್ಕಳೂ ನರಸುಗಳೂ ಧಾರಾಳ ಸಂಖ್ಯೆಯಿಂದ ಇರುತ್ತಾರೆ. ಈ ನಿರಪರಾಧಿಗಳಿಗೆ, ಇಟೆಲಿಯವರು, ಈ ರೀತಿಯ ಘಾತವನ್ನು ಉಂಟು ಮಾಡಿದುದು ಯಾವ ನ್ಯಾಯ? ಈ ನ್ಯಾಯದ ತೀರ್ಮಾನ ವೆಂದು? ಯಾವ ರೀತಿಯಲ್ಲಿ? ಇಟೆಲಿಯವರು, ಹೀಗೆಯೇ, ಉದ್ದೇಶಪೂರ್ವಕವಾಗಿ ಮುಖವೋರೆ ನೋಡದೆ, ಬಾಂಬ್ ಎಸೆಯುತ್ತಲೇ ಬಂದರೆ, ಅವರ ಕೈ ತಡೆಯುವವರು ಯಾರು? ಮುಂದಿನ ಸ್ಥಿತಿ ಏನು? ಒಂದೂ ತಿಳಿಯದು!

ಇಟೆಲಿ ದಿಗ್ವಿಜಯದ ಭರ ಅಥವಾ ಪರಾಜಯದ ನಿರಾಶೆಗಳಿಂದ ನಾಗರಿಕತನದ ಯುದ್ಧಪ್ರಕರಣದ ಎಲ್ಲ ಕ್ರಮನಿಬಂಧನೆಗಳನ್ನೂ ಮುರಿದುಹಾಕಿದಂತೆ ತೋರುತ್ತದೆ. ಮಾತಿತ್ತಿದರೆ, ಅದೆಲ್ಲವೂ ಸುಳ್ಳು; ಡೇಸಿಯ ಅಮೆರಿಕದ ಆಸ್ಪತ್ರೆಗಳ ಮೇಲೆ ನಾವು ಬಾಂಬ್ ಹಾಕಿದುದೇ ಇಲ್ಲವೆಂದು ಇಟೆಲಿಯನರ ಸಾಧನೆ. ಅದು ಸಹಜ! ಸುಳ್ಳಿನ ಪರ್ವತಗಳನ್ನೇ ಹೊತ್ತು ತಂದಿಡದೆ, ಈಗಿನ ನಾಗರಿಕತನದ ಯುದ್ಧಗಳು ಮುಗಿಯುವುದಿಲ್ಲ. ಕಂಡ ಕಂಡ ಸುಳ್ಳು ಹೇಳುವುದೂ ಆ ಶಾಸ್ತ್ರವನ್ನು ಶಾಸ್ತ್ರೀಯವಾಗಿ ಅಭ್ಯಸಿಸುವುದೂ, ಈಗಿನ ಯುದ್ಧಗಳಲ್ಲಿ, ಪ್ರಧಾನವಾದ ಒಂದು ಯುದ್ಧಸಾಮಗ್ರಿಯಾಗಿಯೇ ಪರಿಣಮಿಸಿದೆ. ನಾವು ಇನ್ನು ನಮ್ಮಲ್ಲಿನ ಅಕ್ಕಸಾಲಿಗರನ್ನು, ದರ್ಜಿಗಳನ್ನು, ಇತರ ಕಸಬುದಾರರನ್ನು ಏಂದೂ ದೂರುವುದಲ್ಲ. ಯುದ್ಧರಂಗಗಳ ಕಡೆಗೆ ತಿರುಗಿ ನೋಡಿದರೇ ಸಾಕು; ಹೊಟ್ಟೆ ತುಂಬುತ್ತದೆ. ನಾಗರಿಕತನದ 'ಸ್ವದೇಶೀ ಸುಳ್ಳಿನ ಕಾರ್ಖಾನೆ' ಗಳೆಷ್ಟೋ ಅಲ್ಲಲ್ಲಿಯೇ ಸ್ಥಾಪಿಸಲ್ಪಟ್ಟಿವೆ! ಸುಳ್ಳಿನ ಗೋಣಿಗಳಲ್ಲಿಗೆ ಪರದೇಶಗಳಿಂದ ಸಾಗಬೇಕಾಗಿಲ್ಲ. ಆದ್ದರಿಂದಲೇ ಅವುಗಳ ಕುರಿತು 'ಸ್ಯಾಂಕ್ಷನ್'ನ ವಿಚಾರವಿಲ್ಲ. ಆದರೆ, ಇಲ್ಲಿ ಇಟೆಲಿಯ ಹೇಳಿಕೆಯ ಸತ್ಯಾಂಶವನ್ನು ಕಂಡುಹಿಡಿಯುವುದು ಕಷ್ಟವಲ್ಲ. ಅಬಿಸೀನಿಯದವರಾದರೂ, ಶತ್ರು ಪಕ್ಷದವರು; ಇಟೆಲಿಯವರ ಮೇಲಿನ ದ್ವೇಷದಿಂದ ಏನೋ ಹೇಳಿದರು ಎನ್ನ ಬಹುದಾದರೂ, ಅಮೆರಿಕದವರು ಇಟೆಲಿಯರ ಕುರಿತು ಸುಳ್ಳು ಹೇಳಬೇಕಾದ ಆವಶ್ಯಕತೆ ಏನು? ನಾಗರಿಕರಾದ ಬಿಳಿಯನವರು, ನಾಗರಿಕರಾದ ಬಿಳಿಯವರ ಮೇಲೆ, ಕರಿಯವರಿಗಾಗಿ, ಸುಳ್ಳು ಆರೋಪಗಳನ್ನು ಎಂದಾದರೂ ಹೊರಿಸುವ ಸಂಭವನವಿದೆಯೇ? ಇರಲಾರದು; ಇರಲಾರದು.

ಇದರಲ್ಲಿ ಆಶ್ಚರ್ಯವೆಂದರೆ, ಜನಾಂಗಸಂಘದ ಪ್ರಮುಖ ರಾಷ್ಟ್ರಗಳು, ಈ ಅತ್ಯಾಚಾರದ ಶೀಘ್ರತೀರ್ಮಾನಕ್ಕಾಗಿ ಪ್ರಯತ್ನ ಪಡದೆ, ಅಬಿಸೀನಿಯಕ್ಕೆ ಖರ್ಚು ಬರೆದು ಇಟೆಲಿಗೆ ಅನುಕೂಲವಾದ 'ರಾಜಿ'ಗಾಗಿ ಕೈಕಾಲು ಆಡಿಸುತ್ತಿರುವುದೇ. ಇಟೆಲಿಗೆ ಎಣ್ಣೆ ಕಳುಹಿಸಬಾರದೆಂದರು. ಕಳುಹಿಸುವವರು ಕಂಟ್ರಾಕ್ಟೇ ಮಾಡಿಕೊಂಡರು. 'ಸ್ಯಾಂಕ್ಷನ್' ಅಂದರು. ಮೊಳ ಉದ್ದ ನಾಲಿಗೆ ಚಾಚಿ, ಹೊಗಳಿಕೊಂಡುದೇ ಲಾಭವಾಯಿತು. ಸ್ಯಾಂಕ್ಷನ್'ನ ವರವು ವಾರದಿಂದ ವಾರಕ್ಕೆ, ತಿಂಗಳಿಂದ ತಿಂಗಳಿಗೆ ಗಾಳಿಪಟದಂತೆ ಮುಂದೆ ಹಾರುತ್ತಾ ಇದೆ. ಜ್ಯಾರಿಗೆ ಬರಲಿಕ್ಕೆ ಸರಿಯಾದ ಮುಹೂರ್ತವೇ ಬರಲಿಲ್ಲ. ಒಂದು ವೇಳೆ ಹೀಗೆ ವಿಳಂಬ ಮಾಡಿ, ಇಟೆಲಿ ಅಬಿಸೀನಿಯವನ್ನು ನುಂಗಿಬಿಟ್ಟರೆ, ಆ ಮೇಲೆ ರಗಳೆಯೇ ಇಲ್ಲವೆಂದು ಬುದ್ಧಿವಂತರ ದೀರ್ಘಲೋಚನೆ ಇರಬಹುದೇ? ಅಥವಾ ರಾಜಿ ಮಾಡುವುದಿದ್ದರೂ, ಇಟೆಲಿಯ ದರ್ಪಕ್ಕೆ ಸರಿಹೋಗದ, ಅಬಿಸೀನಿಯದ ಮಾನಕ್ಕೆ ಚ್ಯುತಿಯನ್ನು ತರತಕ್ಕ ಅಂತಹ ರಾಜಿಗೆ ಇತರರು ಪ್ರಯತ್ನಪಟ್ಟೂ ಯಾವ ಪುರುಷಾರ್ಥ? ಜನಾಂಗಸಂಘದ ಪ್ರಮುಖ ರಾಷ್ಟ್ರಗಳು ಅಬಿಸೀನಿಯವನ್ನು ಆಹುತಿಯಾಗಿ ಕೊಟ್ಟ ಆ ರಾಜಿಗಾಗಿ ಇಟೆಲಿಗೆ ದವ್ಮಯ್ಯ ಹಾಕಿದಷ್ಟೂ ಇಟೆಲಿ ಆಕಾಶಕ್ಕೇರುವುದೆಂದ ಬಳಿಕ, ಆ ರಾಜಿಯ ಮಾತನ್ನು ಬಿಡಬಾರದೆ? ಅತ್ತ ರಾಜಿಯೂ ಇಲ್ಲ; ಇತ್ತ 'ಸ್ಯಾಂಕ್ಷನೂ' ಇಲ್ಲ. ಮಧ್ಯೇ, ಇಂತಹ ಅತ್ಯಾಚಾರಗಳ ನಿರ್ಣಯವೂ ಇಲ್ಲ. ಇಟೆಲಿಯ ಘೋರ ಅನ್ಯಾಯವೆನ್ನುವವರು ಅಬಿಸೀನಿಯಕ್ಕೆ ಇಂತಹ ತ್ರಿಶಂಕುಸ್ವರ್ಗವನ್ನು ಕಲ್ಪಿಸಿಡಬಹುದೆ? ಇದೆಂತಹ 'ಡೆಪ್ಲೊಮೆಸಿ'!

ಇಟೆಲಿಗೆ ಇನ್ನು ಅಬಿಸೀನಿಯದಲ್ಲಿ ಬಾಂಬ್ ಹಾಕುವು ದೊಂದೇ ಉಪಾಯ. ಅಲ್ಲಿ ಗುಡ್ಡಪರ್ವತಗಳ ಪ್ರವಾಸ ಕಷ್ಟ; ದೇಶೀಯ ಜನಗಳ ಅನಾದರದಿಂದ ಅನ್ನಾಹಾರ, ನೀರು ಬೇಕಾದಷ್ಟು ಒದಗುವುದಿಲ್ಲ. ಹೀಗಾಗಿ ವಿಮಾನಬಲದ ಅತ್ಯಾಚಾರವೇ ಕಾಯಿದೆ—ಕಾನೂನು! ಅಬಿಸೀನಿಯಕ್ಕೆ ನಾಗರಿಕತನವನ್ನು ಕಲಿಸಲು ಹೊರಟ ಇಟೆಲಿಯವರ ಗುರುತನದ ನಾಗರಿಕತನವು ಈಗ ಇಷ್ಟಕ್ಕೆ ಇಳಿದಿದೆ! 'ಆಪತ್ಕಾಲೇ ನಾಸ್ತಿ ಮರ್ಯಾದಾ' ಎಂಬಂತೆ. ಇನ್ನು ಎಷ್ಟು ಮಂದಿ ನಿರಪರಾಧಿಗಳ ಬಲಿ ಬಾಂಬಿನ ಸುರಿಮಳೆಗಾಗಬೇಕೋ ತಿಳಿಯದು. ಅಂತೂ ಯುದ್ಧವು ಸಾಗುತ್ತಿದೆ. 'ಸ್ಯಾಂಕ್ಷನಿನ' ಮಾತು ಕೇಳುತ್ತಿದೆ. ರಾಜಿಯ ಪ್ರಸ್ತಾವವು, ಮಾತಿನ ಗೆಜ್ಜೆ ಕಟ್ಟಿಕೊಂಡು ಅತ್ತಿತ್ತ ಕುಣಿದಾಡುತ್ತಿದೆ. ಯಾವುದು ಏನಾದೀತೆಂದು ಹೇಳಲಾಗುವುದಿಲ್ಲ.. ಈ ಪರಿಸ್ಥಿತಿ ಜನಾಂಗ ಸಂಘದ ಅಸ್ತಿತ್ವಕ್ಕೆ ಕೀರ್ತಿ ತರತಕ್ಕುದೇ? ಅದರ ಉದ್ದೇಶವನ್ನು ಸಾರ್ಥಕಗೊಳಿಸ ತಕ್ಕುದೇ? ಬಲ್ಲವರು ಯೋಚಿಸಲಾರದೇ?

## ಡಿ॥ ಬೋರ್ಡ್, ಕಾಂಗ್ರೆಸ್ ಮೆಂಬರರೂ.

(ಬರೆದು ಬಂದುದು)

ಈ ಸಲದ ಬೋರ್ಡ್ ಚುನಾವಣೆಯಲ್ಲಿ, 'ನಾವು, ಕಾಂಗ್ರೆಸಿನವರೇ ಗೆದ್ದು ಬಂದೆವೆ'ಂಬ ಹೊಗಳಿಕೆಯುಂಟು. ಈ ಈ ಕಾಂಗ್ರೆಸಿನವರೆಂಬವರಲ್ಲಿ, ಮುಕ್ಕಾಲು ಮೂರು ವೀಸ ಪಾಲು, ಕಾಂಗ್ರೆಸಿನಲ್ಲಿ ಭಕ್ತಿವಿಶ್ವಾಸಗಳಿಲ್ಲದೆ, ಕೇವಲ ಡಿ॥ ಬೋರ್ಡಿನ ಮೆಂಬರಿಕೆಗಾಗಿಯೇ, ಕಾಂಗ್ರೆಸಿನ ಚೀಟನ್ನು ಅಂಟಿಸಿಕೊಂಡವರೂ ಉಂಟು. ಈ ಸಂಗತಿ ನಮ್ಮ ಮತದಾರರಿಗೂ ಗೊತ್ತುಂಟು. ನಿಜವಾಗಿಯೂ ಈ ಮತದಾರರಲ್ಲಿ ಬಹು ಮಂದಿ, ಉಮೇದುವಾರರ ಚತುರೋಪಾಯಗಳಿಗೆ ಮರುಳಾಗಿ ಓಟು ಕೊಟ್ಟವರೇ ಹೌದು, 'ಕಾಂಗ್ರೆಸಿನವರಿಗಾಗಿ' ಎಂದು ಕೊಟ್ಟವರ ಸಂಖ್ಯೆ ತೀರಾ ಕಡಿಮೆಯೇ. ಅಲ್ಲದಿದ್ದರೆ ಕೆಲವು ಮಂದಿ ಕಾಂಗ್ರೆಸ್ ಉಮೇದುವಾರರು ಮುಖ್ಯವಾಗಿ ಕಾಂ॥ ಜಿ॥ ಸೆಕ್ರಟರಿಗಳೇ ಈ ಚುನಾವಣೆಯಲ್ಲಿ ಸೋತು ಬೀಳುತ್ತಿರಲಿಲ್ಲ. ಅದಂತಿರಲಿ!

ಅನೇಕ ಮಂದಿ 'ಕಾಂಗ್ರೆಸ್' ಮೆಂಬರರು ಈಗ ಹೇಗೂ ಬೋರ್ಡ್ ಹೊಕ್ಕರು ಎಂದಾಯಿತು. ಇನ್ನು ಈ ಪಾರ್ಟಿಯವರ ಬೋರ್ಡಿನ ಕಾರ್ಯಕ್ರಮವೇನೆಂದು ಯಾರಾದರೂ ಹೇಳಬಲ್ಲರೇ? ಕಾಂಗ್ರೆಸಿಗಾಗಿ ಚೆನ್ನಾಗಿ ದುಡಿಯುತ್ತಿದ್ದ, ಸಮಗ್ರ ಭಾರತದ ಕೀರ್ತಿಯೆನ್ನೇ ಸಂಪಾದಿಸಿದ್ದ ನಮ್ಮಲ್ಲಿನ ಒಬ್ಬಿಬ್ಬರು ಕಾಂಗ್ರೆಸ್ ಮುಖಂಡರು, ಯಾವ ಕಾರಣದಿಂದಲೋ ಈ 'ಕಾಂಗ್ರೆಸಿನ ಸಹವಾಸ'ದಿಂದ ಸರಿದರೂ, ನಿಷ್ಕ್ರವಂತರಾದರೂ ಈ ಪ್ರೋಗ್ರಾಮಿನ ಕುರಿತು ಆಲೋಚಿಸಿದುದಿಲ್ಲವೆ? ಇತರ ಪಾರ್ಟಿಯ ಸದಸ್ಯರುಗಳಿಗಿಂತ ತಾವೇ ಶ್ರೇಷ್ಠರೆಂದು ತೋರಿಸಿಕೊಳ್ಳುವ ಈ ಮಹನೀಯರಿಗೆ ಆ ಕುರಿತು ಆಲೋಚಿಸಲು ಇನ್ನೂ ಮುಹೂರ್ತ ಒದಗಿಲ್ಲವೇಕೆ? ಹಿಂದೆ ನಮ್ಮ ಓಟು ಕೇಳಿ, ಪಡೆದು, ಎಸೆಂಬ್ಲಿಯಲ್ಲಿ, ಕೌನ್ಸಿಲಿನಲ್ಲಿ ಕಾಂಗ್ರೆಸಿನ ಮೆಂಬರರಾಗಿ ಹೋಗಿ, ಇದುವರೆಗೆ ಅಲ್ಲಿ ಮಾಡಿರುವುದನ್ನೆಲ್ಲ ಎಲ್ಲರೂ ಕಂಡಿದ್ದಾಯಿತು. ಇನ್ನು ಈ ಕಾಂಗ್ರೆಸ್ ಮೆಂಬರರೂ, ಊರಿಗಾಗಿ ಮಾಡುವ ಉಪಕಾರವಾದರೂ ಆ ರೀತಿಯದೇ ಆಗಿರಬಹುದೇ? ಆಗಿರಲಾರದೇ?

ಇನ್ನೊಂದು ಮಾತು. ಕಾಂಗ್ರೆಸಿಗೆ ಜಾತಿಭೇದವಿಲ್ಲ ಎನ್ನುವುದನ್ನೆಲ್ಲರೂ ಬಲ್ಲರು. ಹಾಗಾದರೆ, ವರ್ಷಗಟ್ಟಲೆಯಿಂದ ಈ ಬೋರ್ಡಿನ ಆಡಳಿತವನ್ನು ನೋಡುತ್ತ ಬರುವ ಆ ಸಮಾಜದಿಂದಲೇ, ಈ ಬಾರಿಯೂ ಪ್ರೆಸಿಡೆಂಟರ ಚುನಾವಣೆಯಾಗದಿದ್ದರೆ, ಸಮುದ್ರಕ್ಕೆ ಬೆಂಕಿ ಬಿದ್ದೀತೇ? ಈಗಿನ ಕಾಂಗ್ರೆಸ್ ಮೆಂಬರುಗಳಲ್ಲಿಯೇ ಪ್ರೆಸಿಡೆಂಟರ ಸ್ಥಾನಕ್ಕೆ ಯೋಗ್ಯರಾದವರು ಬೇರೆ ಸಮಾಜದವರಿಲ್ಲವೇ? ಕಾಂಗ್ರೆಸಿನ ಹೆಸರಿಟ್ಟುಕೊಂಡು, ಸ್ವಜಾತಿವಾತ್ಸಲ್ಯಕ್ಕೆ ಮನಕೊಟ್ಟು, ಬಹುಮತದ ಬಲದಿಂದ, ಬಹುಮತವಿರುವ ಸಮಾಜದಿಂದಲೇ ಈ ಬಾರಿಯೂ ಪ್ರೆಸಿಡೆಂಟರ ಚುನಾವಣೆ ನಡೆದರೆ, ಈ ಬಹುಮತದ ಸಮಾಜದ ಆಡಳಿತ ಹಿಡಿತದಿಂದ, ಅಲ್ಪಮತದ ಸಮಾಜಗಳ ಪ್ರಾತಿನಿಧ್ಯಕ್ಕೆ ಹಾನಿ ಬರದಂತೆ, ಅವುಗಳ ಹಿತರಕ್ಷಣೆಯೂ ಆಗಿ, ಅವು ಬದುಕಿಕೊಳ್ಳುವಂತೆ, ಸಾರಿ ದೂರಿಕೊಳ್ಳುವ ಅಂತಹ ಕಾಲವೊಂದು, ಈ ಕಾಂಗ್ರೆಸಿನವರದೆಂಬ ರಾಜ್ಯಭಾರದಲ್ಲಿ ಬಾರದಂತೆ, ಅವರನ್ನೂ ಇತರರನ್ನೂ ದೇವರು ಕಾಪಾಡಬೇಕು.

## ವಿಚಾರಣೀಯ ವಿಷಯಗಳು.

(ಎಸ್. ಎ. ಇವರಿಂದ)

(೧) ಡಿ॥ ಬೋ॥ನ ಕೈಕೆಳಗಿರುವ ಹಲವು ಗ್ರಾಮ ಶಾಲೆಗಳ ಬಗ್ಗೆ ಅನೇಕ 'ದರ್ಶಕರ ಪುಸ್ತಕ'ಗಳು (visitors books) ಅಚ್ಚಾಗಿವೆ ಎಂಬುದು ಹೌದಾದರೆ, ಆಯಾ ಶಾಲೆಗಳ ದರ್ಶಕರು ಅದರಲ್ಲಿ ಏನೇನು ರಿವ್ಯೂ ಬರೆದಿರುವರೆಂದು ತಿಳಿಯಬಹುದೇ? (೨) ಡಿ॥ ಬೋರ್ಡಿನಲ್ಲಿ ಕೃತಕ (Bogus) ಶಾಲೆಗಳಿಷ್ಟಿವೆ? ಶಾಲೆಗಳ ಉಪಾಧ್ಯಾಯರಿಗೆ ಸಂಬಳ ಸರಿಯಾಗಿ ಸಲ್ಲುತ್ತಿದೆಯೇ? (೩) ಕಾಯಂ ಸಿಬಂದಿ ಇರುತ್ತ ಅದರೊಡನೆ ಎಷ್ಟು ಮಂದಿ ಹಂಗಾಮಿ ಓವರ್‌ಸೀಯರನ್ನೂ, ಅಸಿಸ್ಟೆಂಟ್ ಇಂಜಿನಿಯರನ್ನೂ ನೇಮಿಸಲಾಗಿದೆ? ಬೋರ್ಡಿನ ಆರ್ಥಿಕ ದುಃಸ್ಥಿತಿಯಲ್ಲಿ ಇಂತಹ ವಿಪರ್ಯಾಡು ಅಗತ್ಯವೋ? ಮೊದಲು ದಿವಾನ್ ಬಹದೂರರು ಆಡಳಿತ ನಡೆಸುತ್ತಿದ್ದಾಗ, ಹೆಚ್ಚಿನ ವೆಚ್ಚದ ಕಾಮುಗಾರಿಗಳೂ ನಡೆಯುತ್ತಿದ್ದಾಗ ಆಗ ಈಗಿನಂತೆ ಹಂಗಾಮಿ ಕೈಗಳಿದ್ದವೋ?(೪) ಚುನಾವಣೆಯಲ್ಲಿ ಕೆಲಸ ಮಾಡಿದ ಪಟೇಲ, ಶ್ಯಾನುಭೋಗ, ವ ಇತರ ಅಧಿಕಾರಿಗಳೆಷ್ಟು ಮಂದಿ? (೫) ಪ್ರೆಸಿಡೆಂಟರು, ಈ ಚುನಾವಣೆಗೆ ಮೊದಲು, ಪ್ರತಿಸ್ಪರ್ಧಿ ಇದ್ದ ಹಲವು ಚುನಾವಣೆ ಸೆಂಟರುಗಳಲ್ಲಿ ಸರ್ಕೀಟು ಬೆಳಸಿ, ಡಿ॥ ಬೋ॥ ಕಂಟ್ರಾಕ್ಟರ್‌ಗಳು, ಉಪಾಧ್ಯಾಯರು ಮತ್ತೂ ಇತರ ಅಧೀನರನ್ನು 'ತನ್ನ ಪಾರ್ಟಿಯವರಿಗಾಗಿ ಕೆಲಸ ಮಾಡಿ' ಎಂದು ಸ್ವತಃ ಪ್ರೇರೇಪಿಸಿದರೆಂಬುದು ನಿಜವೇ? ಈ ಸರ್ಕೀಟಿಗಾಗಿ ಇವರು ಛತ್ರಿಯನ್ನು ತೆಗೆದುಕೊಂಡಿರುವರೇ? ಇವರು ಸರ್ಕೀಟ್ ಬೆಳಸಿದ ಸೆಂಟರುಗಳು ಯಾವುವು? ಇವರು ಮಾಬುಕಳ ಹೊಳೆ ದಾಟಿ ಆಚೆಗೆ ಹೋಗಲಿಲ್ಲವೇಕೆ? ಕುಂದಾಪುರ ತಾಲೂಕಿಗೆ ಹೋಗ ತಪ್ಪಿಸಿಕೊಂಡುದುದೇಕೆ? (೬) ವೋಟಾರು ಕಂಪೆನಿಯ ಹೈಕ್ವರರಲ್ಲಿ ಕೆಲವರು ಕಾಂಗ್ರೆಸ್ ಪಕ್ಷದ ಉಮೇದುವಾರರಾಗಿ ಮುಂದೆ ಬಂದದ್ದು ನಿಜವೇ? ಇವರು ಬೇರೆ ಉಮೇದುವಾರರ ಶಕ್ತಿಕ್ಷಯವಾಗುವಂತೆ ನಾನಾ ರೀತಿ ಕೆಲಸ ನಡೆಸಿದುದು ಸತ್ಯವೇ? ಕಂಬ್ಯಾಂಡ್ ಬಸ್ಸುಗಳೂ, ೭ ಸೀಟರಿನ ಟ್ಯಾಕ್ಸಿಗಳೂ ಸಾರ್ವಜನಿಕರ ಉಪಯೋಗಕ್ಕಾಗಿ ದೊರಕದುದು ಹೌದೇ? (೭) ತಾಲೂಕು ಬೋರ್ಡುಗಳು ರದ್ದಾದ ಲಾಗಾಯಿತು, ಕಳೆದ ೨ ವರ್ಷಗಳಲ್ಲಿ ಡಿ॥ ಬೋ॥ನವರು ಮುದ್ರಣಕ್ಕಾಗಿ ಮಾಡಿದ ಒಟ್ಟು ವೆಚ್ಚವೆಷ್ಟು? ಸಂಬಂಧಪಟ್ಟವರು ಈ ವಿಷಯದಲ್ಲಿ ಚೆನ್ನಾಗಿ ಪರಿಶೋಧಿಸಿ, ಅದರ ಆಮೂಲಾಗ್ರವೇನೆಂದು ಕಂಡುಕೊಳ್ಳುವರೇ? ಡಿ. ಬೋ. ಎಜ್ಯುಕೇಶನಲ್ ಆಫೀಸರರು ಮುಂಜೂರು ಮಾಡಲು ಹಿಂಜರಿದ ನಾಲ್ಕು ಅಂಕೆಯ ಮುದ್ರಣದ ಬೀಲುಗಳು ಡಿ. ಬೋ. ಪ್ರೆಸಿಡೆಂಟರೇ ಖುದ್ದು ಪ್ಯಾಸು ಮಾಡಿದುದಿದೆಯೇ?

ಮದ್ರಾಸಿನ ಮೊಡರ್ನ್ ಕೇಫೆಯಲ್ಲಿ
ಶ್ರೀಮನ್ಮಹಿಸೂರು ಮಹಾರಾಜರವರ ಭಾವಚಿತ್ರ ಅನಾವರಣ ಸಮಾರಂಭ ಕಾಲದಲ್ಲಿ ತೆಗೆಯಲಾದ ಚಿತ್ರವಿದು.

# ಭಾರತೀಯ ದೇಶಭಕ್ತರು.



ದಿ. ವಿಠಲಭಾಯ್ ಪಟೇಲ್.

ದಿ. ಜೆ. ಎಮ್. ಸೇನಗುಪ್ತ.

ಮೌಲಾನಾ ಶೌಕತಾಲಿ.

ಆಚಾರ್ಯ ಪ್ರಫುಲ್ಲಚಂದ್ರ ರಾಯ್.

ಶ್ರೀ. ಸರಲಾದೇವಿ ಚೌಧುರಾಣಿ.



ಶ್ರೀ. ಸುಭಾಶ್ಚಂದ್ರ ಬೋಸ್.

ಡಾ. ಬಿ. ಎಸ್. ಮೂಂಜೆ.

ವಿಶ್ವಕವಿವರ ರವೀಂದ್ರನಾಥ ಠಾಗೋರ್.



ಶ್ರೀ. ಗಂಗಾಧರರಾವ್ ದೇಶಪಾಂಡೆ.


ಕರ್ನಾಟಕ ವಿಮಾಮಂಡಲದ ಕೀರ್ತಿಜ್ಯೋತಿ!

**ಪ್ರಥಮ ವರ್ಷದಲ್ಲೇ ಆದರ್ಶ ಉದ್ಯಮ!! ನಿಖಿಲ ಕರ್ನಾಟಕಕ್ಕೇ ಪ್ರಥಮ ಸ್ಥಾನ!!!**

ಕರ್ನಾಟಕದಲ್ಲಿ ಸ್ಥಾಪಿತವಾದ ವಿಮಾ ಕಂಪೆನಿಗಳಲ್ಲಿ ಪ್ರಥಮ ವರ್ಷದಲ್ಲೇ ಯಾವುದೂ ಈ ಕಂಪೆನಿಯಷ್ಟು ಕಾರ್ಯ ನಡೆಸಿಲ್ಲ.

**ಕನ್ನಡಿಗರ ಒಲವಿನ ಬೆಳಕು ಯಾವುದು?**

## ಮೈಸೂರು ಜೀವವಿಮಾ ಕಂಪೆನಿ, ಬೆಂಗಳೂರು.

ಇದು ಕನ್ನಡನಾಡಿನ ಕೌತುಕ! ಕನ್ನಡಿಗರ ಸಾಹಸದ ಕನ್ನಡಿ!! ಕನ್ನಡಿಗರ ಭಾಗ್ಯದ ನಿಧಿ!!!

ಮುಂಬೆಳಗೇ ದಿನದ ಕುರುಹು!
ಇಂದಿನ ಪ್ರಗತಿಯೇ ಮುಂದಿನ ಭದ್ರತೆಯ ಹೆಗ್ಗುರುತು!!

**1 ಲಕ್ಷ ರೂ.ಗಳ ಷೇರುಗಳು ಮುಗಿದು ಹೋದುವು. 6½ ಲಕ್ಷ ರೂ.ಗಳ ವಿಮಾ ದರಖಾಸ್ತುಗಳು ಬಂದಿವೆ.**

ನಮ್ಮ ವೈದ್ಯಪರೀಕ್ಷೆಯಿಲ್ಲದ ಪದ್ಧತಿಗಳು ವಿಮಾಲೋಕಕ್ಕೇ ನೂತನ ಆದರ್ಶ!
ಸರ್ವರ ಅನುಕೂಲ, ಆವಶ್ಯಕತೆಗಳಿಗೆ ಸರಿಹೊಂದುವ ಮತ್ತು ನವೀನ ವೈದ್ಯಪರೀಕ್ಷೆಯಿರುವ ವೈದ್ಯಪರೀಕ್ಷೆಯಿಲ್ಲದಿರುವ ವಿಮಾಪದ್ಧತಿಗಳು.

**ಸ್ತ್ರೀಯರೂ ವಿಮೆ ಮಾಡಬಹುದು!**

ತಿಂಗಳಿಗೆ 200 ರೂಪಾಯಿಗಳನ್ನು ಸಂಪಾದಿಸಬೇಕೆಂಬ ಆಶೆ ನಿಮಗಿದೆಯೇ?

ಹಾಗಾದರೆ ನಮ್ಮ ಏಜಂಟರಾಗಿ! ವೇತನದ ಮೇಲೂ ಕೆಲಸ ಮಾಡಲು ಅವಕಾಶವಿದೆ.

ಹೆಚ್ಚು ಮಾಹಿತಿಗೆ:—

**ಮೈಸೂರು ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,**
**ಶ್ರೀ ನರಸಿಂಹರಾಜ ರೋಡು, ಬೆಂಗಳೂರು ಸಿಟಿ.**

**ಕಂಠೀರವ ಮತ್ತು ಕಂಪೆನಿ,**
**ಶ್ರೀ ವಿಜಯ್.**


## ಸ್ವೀಕಾರ

**ಸೇನಾಪತಿ ಡಾ. ಹರಡೀಕರರು:**— ಬರೆದವರು ರಾ. ಕರಗುದರಿ. ಮುದ್ರಕರು—ಶ್ರೀ. ಬಳವಂತ ನಾರಾಯಣ ಬಾಗಲವಾ ವೋಹನ ಮುದ್ರಣಾಲಯ, ಧಾರವಾಡ. ಪ್ರಕಾಶಕರು:—ಗೋ. ಮುಂಗಳೂರ ಸಾಹಿತ್ಯ ಭಂಡಾರ, ಹುಬ್ಬಳ್ಳಿ. ತಮ್ಮ ಉಜ್ವಲ ಕರ್ತೃ ಶಕ್ತಿಯಿಂದ ರಾಷ್ಟ್ರನಿರ್ಮಾಣಕರ್ತರಲ್ಲೊಬ್ಬರಾಗಿ ಕರ್ನಾಟಕಕ್ಕೂಂ ಯಲ್ಲದೆ ಭಾರತಕ್ಕೂ ಭೂಷಣರಾದ ಡಾ. ಹರಡೀಕ ಚರಿತ್ರೆಯಿದು. ಜೀವನದ ಗುರಿಯ ಗೊತ್ತುಮಾಡಿ, ಸಾಧನೆಯನ ತಿಳಿದು ಮುಂದರಿಯುವ ಗುಣಗಳನ್ನುಳವಡಿಸಿ ಬಡತನದಲ್ಲಿಯ ಮುಂದರಿದು ಕಷ್ಟಗಳೆಂದರೇನು ಎಂಬುದನರಿತು ಜೀವನದ ಗುರಿಯನ ನೆರವೇರಿಸಲು ಹೆಗಲಿರುಳೂ ಹವಣಿಸುತ್ತಿರುವ ದೇಶ ಉದ್ಧಾರದ ಭ ದೇಶಸೇವೆಯನ್ನು ಮಾಡಿ ಕನ್ನಡಿಗರಿಗೆ ಆದರ್ಶರಾಗಿರುವ ಮಹ ಯರ ಆದರ್ಶಜೀವನದ ಚರಿತ್ರೆ. ತಾಯಿತಂದೆಗಳನ್ನು ಚಿಕ್ಕಂದಿನ ಕಳೆದುಕೊಂಡು, ಪರದೇಶಿಯಾಗಿ, ದಾರಿದ್ರ್ಯಸಾಗರದಲ್ಲಿ ಮುಳ ಮುಳುಗಿ ಏಳುವ ತಾಯಿನಾಡಿಗೆ ಮುಡಿಯಾಗಿರುವ ಇವರು ಹುಟ್ಟಿ ಸೇವಾದಲದ ಸೇನಾನಾಯಕರಿವರು. ಇಂಥವರ ಜೀವನಚರಿತ್ರೆಯನ ಪ್ರತಿ ಕನ್ನಡಿಗನೂ ಓದತಕ್ಕದ್ದಾಗಿದೆ. ಬರಹಗಾರರ ಪ್ರಥಮ ಪ್ರಯ ವಾದರೂ ಸ್ತುತ್ಯ.

# ರಾಷ್ಟ್ರೀಯ ಶಿಕ್ಷಣದ ಸಂಕ್ಷಿಪ್ತ ಇತಿಹಾಸ.

(ಶ್ರೀ। ಗುರುನಾಥ ಜೋಶಿ, ಹಿಂದೀ ಜ್ಞಾನಯಾತ್ರೀ ಮಂಡಲ, ಬೆಂಗಳೂರು.)

ವಿದ್ಯಾರ್ಥಿಗಳಲ್ಲಿ ಕೆಲವೊಂದು ವಿಶಿಷ್ಟ ಗುಣಗಳು ಬೀಜ ರೂಪದಲ್ಲಿರುತ್ತವೆ. ಅವನ್ನು ಕಂಡುಹಿಡಿದು ಅರಳಿಸುವುದು ಮತ್ತು ಅವು ಅರಳಿದ ಮೇಲೆ ಅವನ್ನು ಮತ್ತಿಷ್ಟು ಶಕ್ತಿವಂತ ಮಾಡುವುದು ಶಿಕ್ಷಣದ ಮುಖ್ಯವಾದ ಉದ್ದೇಶವು. ಇದನ್ನೇ ತಮ್ಮ ಆದರ್ಶವನ್ನಾಗಿಟ್ಟುಕೊಂಡ ಗುರುಕುಲಗಳಿಗೆ ನಮ್ಮ ಪೂರ್ವಜರು ತಮ್ಮ ಮಕ್ಕಳನ್ನು ಕಳಿಸಿ ಅವರ ಮಾನಸಿಕ, ಶಾರೀರಿಕ, ಆತ್ಮಿಕ ಉನ್ನತಿಯನ್ನು ಬೆಳೆಸುವಂತಹ ಶಿಕ್ಷಣವನ್ನು ಕೊಡಿಸುತ್ತಿದ್ದರು. ಇದರಿಂದ ಅವರು ತಮ್ಮ ಇಹಲೋಕದ ಯಾತ್ರೆಯನ್ನು ಸುಖವಾಗಿ ಮುಗಿಸಿಕೊಂಡು ಸಾನಂದದಿಂದ ಸಾಯುಜ್ಯವನ್ನು ಪಡೆಯುತ್ತಿದ್ದರು. 'ಯಾ ವಿದ್ಯಾ ಸಾ ವಿಮುಕ್ತಯೇ' ಅಳಿದು ಹೋಗಲಾರಂಭಿಸಿತು. ಇದಾವ ಕಾರಣ ದಿಂದ ಹೋಯಿತೆನ್ನುವದನ್ನು ಹೇಳುವುದು ಕಠಿನವಾದುದು. ಆದರೂ ಸಂಸ್ಕೃತ ಶಿಕ್ಷಣವಪದ್ಧತಿಯೇ ಅದಕ್ಕೆ ಒಂದು ಮುಖ್ಯ ವಾದ ಕಾರಣವೆಂದು ಹೇಳಬಹುದು. ಏಕೆಂದರೆ ಅದರಿಂದ ಬುದ್ಧಿಯ ವಿಕಾಸವಾಗದೆ ಹೆಚ್ಚು ಹೆಚ್ಚಾಗಿ ಮನಸ್ಸಿನ ಸಂಕೀರ್ಣತೆಯು ಬೆಳೆಯಲಾರಂಭಿಸಿತು. ಪಂಡಿತರು ನ್ಯಾಯ ವ್ಯಾಕರಣಗಳಲ್ಲಿಯೇ ತಮ್ಮ ಸಮಯವನ್ನೆಲ್ಲ ಕಳೆಯಲಾರಂಭಿಸಿದರು. ವಿದ್ಯಾರ್ಥಿಗಳ ದೃಷ್ಟಿಯು ಸಾಹಿತ್ಯದೊಳಗಿನ ಅನೂಲ್ಯ ರತ್ನಗಳ ಕಡೆಗೆ ಹರಿಯಲಾರದಂತಾಯಿತು. ಧಾರ್ಮಿಕ, ಸಾಮಾಜಿಕ ಜೀವನದ ಮೇಲಿದ್ದ ನಿಜವಾದ ಭಾರತೀಯ ಸಂಸ್ಕೃತಿಯ ಮುದ್ರೆಯು ದಿನದಿನಕ್ಕೆ ಸವೆದು ಮಾಸಲಾರಂಭಿಸಿತು; ಮತ್ತು ಜನರಲ್ಲಿ ತಮ್ಮ ಸಂಸ್ಕೃತಿಯ ದುರಭಿಮಾನವೊಂದು ಉಳಿದುಕೊಂಡು ಬಿಟ್ಟಿತು. ಸುಮಾರು ನೂರು ವರ್ಷಗಳ ಹಿಂದೆ ಇದ್ದ ಈ ತರದ ಪರಿಸ್ಥಿತಿಯು ಹೋಗಬೇಕಾದರೆ ಶಿಕ್ಷಣ ಕ್ರಮದಲ್ಲಿ ಸುಧಾರಣೆಯಾಗಲೇಬೇಕು ಎಂದು ತೀರ್ಮಾನಿಸಿ ಸದ್ಯದ ರಾಷ್ಟ್ರೀಯ ಜಾಗೃತಿಯ ಅಧಿದೇವತೆಯಾದ ಶ್ರೀ. ರಾಜಾ ರಾಮಮೋಹನ ರಾಯರು ಭಾರತೀಯರಿಗೆ ಇಂಗ್ಲೀಷು ಶಿಕ್ಷಣವನ್ನು ಕೊಡಿಸುವ ಉದ್ಯೋಗಕ್ಕೆ ಕೈಹಾಕಿದರು. ಇದರಲ್ಲಿ ಅವರ ಉದ್ದೇಶವು ಇಷ್ಟೇ ಇತ್ತು. ಪರದೇಶಗಳಲ್ಲಿ ಉದ್ಭವಿಸುತ್ತಿದ್ದ ಹೊಸ ಹೊಸ ವಿಚಾರಗಳ, ಸಾಮಾಜಿಕ ಸುಧಾರಣೆಗಳ ಪರಿಚಯವು ಭಾರತೀಯರಿಗೆ ಆಗುವುದು. ತಾವಷ್ಟೇ ಬುದ್ಧಿವಂತರೂ ಸುಸಂಸ್ಕೃತರೂ ಇರುವದಿಲ್ಲ ವೆಂಬುದರ ಅರಿವು ಅವರಿಗಾಗಿ ಅವರ ಋಣ ಅಭಿಮಾನವು ಪೂರಾಗಿ ಅವರಲ್ಲಿ ಹೊಸ ಹುರುಪು ಬರುವುದು, ನವಜೀವನವು ನಲಿದಾಡಲಾರಂಭಿಸುವುದು. ಆಗ ಅವರು ನಿಜವಾದ ಶಿಕ್ಷಣದ ಕಡೆಗೆ ಗಮನಕೊಟ್ಟು ಸನ್ಮಾರ್ಗವನ್ನು ಹಿಡಿಯುವರು. ಇಷ್ಟರಿಂದಲೇ ಅವರು ಸಂಸ್ಕೃತ ಶಿಕ್ಷಣದ ವಿರೋಧಿಗಳಿದ್ದಾರೆಂದು ಯಾರೂ ಭಾವಿಸಬಾರದು. ಅವರು ಸಂಸ್ಕೃತದಲ್ಲಿಯೂ ಪಾರಸಿಯಲ್ಲಿಯೂ ಪಾಂಡಿತ್ಯವನ್ನು ಪಡೆದವರಾಗಿದ್ದರು. ನಮ್ಮ ಪ್ರಾಚೀನ ಆದರ್ಶಗಳಿಗೆ ವ್ಯಾವಹಾರಿಕ ಸ್ವರೂಪವನ್ನು ಕೊಡುವದಿಷ್ಟೇ ಅವರ ಉದ್ದೇಶವಿತ್ತು. ಇವರ ಪ್ರಯತ್ನದಿಂದಲೇ ೨೦ನೇ ಜನವರಿ ೧೮೧೭ರಲ್ಲಿ ಕಲಕತ್ತಾ ನಗರದಲ್ಲಿ ಮೊಟ್ಟಮೊದಲು **ಹಿಂದೂ ಕಾಲೇಜಿನ** ಸ್ಥಾಪನೆಯಾಯಿತು.

ಕ್ರೈಸ್ತ ಧರ್ಮೋಪದೇಶಕರು ನಮ್ಮ ದೇಶದಲ್ಲಿ ತಮ್ಮ ಧರ್ಮದ ಪ್ರಚಾರವನ್ನು ಮಾಡಬೇಕೆನ್ನುತ್ತಿದ್ದರು. ಅದನ್ನು ಹೇಗೆ ಮಾಡಬೇಕೆನ್ನುವುದು ತಿಳಿಯಲಾರದಾಗಿತ್ತು. ಇಂಗ್ಲೀಷು ಶಿಕ್ಷಣವೇ ಇದಕ್ಕೆ ಹಾದಿಯೆಂದು ಅವರಿಗೆ ತೋರಲಾರಂಭಿಸಿತ್ತು. ಇಂಥ ಸಮಯದಲ್ಲಿ ರಾಜಾ ರಾಮಮೋಹನ ರಾಯರು ಮಾಡಿದ ಪ್ರಯತ್ನವನ್ನು ನೋಡಿ ಅವರಿಗೆ ಅಪಾರ ಹರ್ಷವಾಯಿತು. ಅವರ ಕಾರ್ಯಕ್ಕೆ ಇವರು ಹೆಚ್ಚಾಗಿ ನೆರವಾಗಲಾರಂಭಿಸಿದರು. ಇದರಲ್ಲಿ ಅವರ ಮುಖ್ಯ ಉದ್ದೇಶವು ಭಾರತೀಯರ ಮುಂದೆ ತಮ್ಮ ದೇಶದವರನ್ನು ಹೊಗಳುವುದು ಮತ್ತು, ಹಿಂದೂ ಸಮಾಜದಲ್ಲಿದ್ದ ಕುರೀತಿಗಳನ್ನು ತೋರಿಸಿ ಭಾರತೀಯರನ್ನು ತಮ್ಮ ಮತಕ್ಕೆ ಸೇರಿಸಿಕೊಳ್ಳುವುದು ಇಷ್ಟೇ ಆಗಿತ್ತು.

ಕೊನೆಗೆ ಸರಕಾರವು ಸಂಪೂರ್ಣ ವಿಚಾರ ಮಾಡಿ ಈ ಶಿಕ್ಷಣಕ್ಷೇತ್ರದಲ್ಲಿ ಕೈಹಾಕಿತು. ಮೊದಮೊದಲು ಇದರಲ್ಲಿ ಕೈಹಾಕಲು ಭಯವುಂಟಾಗುತ್ತಿತ್ತು. ಇದರಿಂದ ತಮ್ಮ ಧರ್ಮವನ್ನು ಹಾಳುಮಾಡಲಿಕ್ಕೆ ಇಂಗ್ಲೀಷರು ಬಂದಿರುವರು ಎಂದು ತಿಳಿದು ಭಾರತೀಯರು ಎಲ್ಲಿ ಕ್ರಾಂತಿಯನ್ನೆಬ್ಬಿಸುವರೊ! ತಮ್ಮ ರಾಜ್ಯಕ್ಕೆ ಎಲ್ಲಿ ಧಕ್ಕೆ ಬರುವುದೊ! ಎಂಬ ಭೀತಿಯಿತ್ತು. ಆದರೆ ರಾಜಾ ರಾಮಮೋಹನ ರಾಯರು ಮತ್ತು ಮಿಶನರಿಗಳು ಮಾಡಿದ ಪ್ರಯತ್ನವನ್ನು ನೋಡಿ ಅದರ ಭಯವು ದೂರಾಯಿತು. ಶಿಕ್ಷಣವಾರ್ಗದಿಂದ ತನ್ನ ಬೆಳೆಯುವ ರಾಜ್ಯವನ್ನು ಭದ್ರ ಪಡಿಸಿಕೊಳ್ಳಲು ಯತ್ನಿಸಲಾರಂಭಿಸಿತು. ಇಂಗ್ಲೀಷು ಶಿಕ್ಷಣ ಪ್ರಸಾರದಲ್ಲಿ ಸರಕಾರದ ಉದ್ದೇಶವು ಇಷ್ಟೇ ಇತ್ತು—'ನಾವು ನಮ್ಮ ಮತ್ತು ನಮ್ಮ ಲಕ್ಷಗಟ್ಟಿ ಪ್ರಜೆಗಳ ನಡುವೆ ದುಬಾಷಿಗಳ ಕಾರ್ಯ ಮಾಡುವಂಥ ಜನರನ್ನು ತಯಾರಿಸಿಕೊಳ್ಳಬೇಕು, ಅರ್ಥಾತ್ ಆವರು ರಕ್ತ ಮತ್ತು ಬಣ್ಣದಿಂದ ಭಾರತೀಯರೇ ಆಗಿದ್ದುಕೊಂಡು ರುಚಿ, ವಿಚಾರ, ನೀತಿ ಮತ್ತು ಬುದ್ಧಿಯಲ್ಲಿ ಇಂಗ್ಲೀಷರೇ ಆಗಿರಬೇಕು.' ಈ ಉದ್ದೇಶದಿಂದಲೇ ಸರಕಾರವು ಶಿಕ್ಷಣದಲ್ಲಿ ಕೈಹಾಕಿತೆನ್ನುವುದಕ್ಕೆ ಪಾರ್ಲಿಮೆಂಟಿನಿಂದ ಆಗಾಗ್ಗೆ ಕಂಪನೀ ಸರಕಾರಕ್ಕೆ ದೊರೆಯುತ್ತಿದ್ದ ಚಾರ್ಟರುಗಳಿಂದ ತಿಳಿದು ಬರುವದು. ಸರಕಾರೀ ಶಿಕ್ಷಣಕ್ರಮದಲ್ಲಿ ಆರ್ಥಿಕ, ಔದ್ಯೋಗಿಕ, ಶಾರೀರಿಕ ಶಿಕ್ಷಣದ ಕಡೆಗೆ ಅಷ್ಟೊಂದು ಗಮನವು ಕೊಡಲ್ಪಟ್ಟಿರುವುದಿಲ್ಲ. ಸಾಕಾದಷ್ಟು ಪ್ರಾಕೃತಿಕ ವಸ್ತುಗಳು ದೊರೆಯುತ್ತಿದ್ದರೂ ಅವನ್ನು ಉಪಯೋಗಿಸಿಕೊಳ್ಳಲು ಬರುವಂಥ ಉದ್ಯೋಗಮಂದಿರಗಳನ್ನು ಸ್ಥಾಪಿಸಿಲ್ಲ. ಹಿಂದುಸ್ಥಾನವು ಕೃಷಿಪ್ರಧಾನ ದೇಶವು. ಕೃಷಿವಿದ್ಯಾಲಯಗಳೂ ಸಾಕಷ್ಟು ಸ್ಥಾಪಿಸಲ್ಪಡಲಿಲ್ಲ. ಸ್ತ್ರೀಯರ ಶಿಕ್ಷಣದ ಕಡೆಗಂತೂ ಕಣ್ಣೆತ್ತಿ ನೋಡಿದಂತೆ ತೋರುವದಿಲ್ಲ. ಈ ದೇಶದ ಪುರುಷರ ಮತ್ತು ಸ್ತ್ರೀಯರ ಶಿಕ್ಷಣದಲ್ಲಿ ಇಂದು ದೊರೆಯುವಷ್ಟು ವೈಷಮ್ಯವು ಇನ್ನಾವ ರಾಷ್ಟ್ರದ ಶಿಕ್ಷಣಕ್ರಮದಲ್ಲಿಯೂ ದೊರೆಯಲಿಕ್ಕಿಲ್ಲ.

ರಾಜಾ ರಾಮಮೋಹನ ರಾಯರು ಯಾವ ಉದ್ದೇಶದಿಂದ ಇಂಗ್ಲೀಷು ಶಿಕ್ಷಣವನ್ನು ಹಿಂದುಸ್ಥಾನದಲ್ಲಿ ಪ್ರಾರಂಭಿಸಿದರೊ ಅವರ ಆ ಉದ್ದೇಶವು ಸಫಲವಾಗುವ ಸಮಯವೂ ಬಂದಿತು. ಜಗತ್ತಿನಲ್ಲಿಯೇ ೧೯ನೆಯ ಶತಮಾನದಲ್ಲಿ ಒಂದು ವಿಲಕ್ಷಣವಾದ ಜಾಗೃತಿಯು ಉಂಟಾಗತೊಡಗಿತು. ಶಿಕ್ಷಣ, ಸಾಹಿತ್ಯ, ವಿಜ್ಞಾನ, ಕಲೆ ಮುಂತಾದ ಕ್ಷೇತ್ರಗಳಲ್ಲಿ ಹೊಸ ಹೊಸ ಪ್ರಯೋಗಗಳು ಪ್ರಾರಂಭವಾದವು. ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿಯೂ ಹೊಸ ಹೊಸ ಸುಧಾರಣೆಗಳು ಆಗತೊಡಗಿದವು. ರಾಜಕಾರಣದಲ್ಲಿಯೂ ಆಶ್ಚರ್ಯಜನಕವಾದ ಬದಲಾವಣೆಗಳಾಗಲಾರಂಭಿಸಿದವು. ಇವೆಲ್ಲವುಗಳೊಡನೆ ಶಿಕ್ಷಣವದ್ಧತಿಯ ಸಂಬಂಧವು ಹೆಚ್ಚಾಗಿದ್ದಿತೆಂದು ಬೇರೆ ಹೇಳುವುದು ಅವಶ್ಯವಿಲ್ಲ. ಶಿಕ್ಷಣಕ್ರಮದಲ್ಲಿ ಅನೇಕ ಮಾರ್ಪಾಟುಗಳು ಆಗಲಾರಂಭಿಸಿದವು. ಜಗತ್ತಿನ ಸ್ವತಂತ್ರ ರಾಷ್ಟ್ರಗಳ ಶಿಕ್ಷಣ ಕ್ರಮದಲ್ಲಿ ಆಗುತ್ತಿದ್ದ ಮಾರ್ಪಾಟು ಮತ್ತು ಭಾರತದ ಶಿಕ್ಷಣ ಕ್ರಮದಲ್ಲಿ ಆಗುತ್ತಿದ್ದ ಮಾರ್ಪಾಟಿನಲ್ಲಿ ಭೂಮ್ಯಾಕಾಶದಷ್ಟು ಅಂತರವಿದೆ. ಭಾರತವು ಪರಾಧೀನವಾದ ರಾಷ್ಟ್ರವು. ಶಿಕ್ಷಣವೂ ಸರಕಾರದವರ-ಪರದೇಶೀಯರ ಕೈಗೆ ಸಿಕ್ಕಿದ್ದರಿಂದ ಸ್ವತಂತ್ರವಾಗಿ ಹೊಸ ಹೊಸ ಪ್ರಯೋಗಗಳನ್ನು ಮಾಡಲು ಅದಕ್ಕೆ ಅನುಕೂಲತೆಗಳು ಒದಗಿಸಲ್ಪಡಲಿಲ್ಲ. ಆದುದರಿಂದಲೇ ಮೊಟ್ಟಮೊದಲು ಸರಕಾರೀ ವಿದ್ಯಾನಿಲಯಗಳ ಪಾಠಕ್ರಮವನ್ನೇ ಇಟ್ಟುಕೊಂಡು ಭಾರತೀಯರ ನೀತಿ ನಡಾವಳಿ ಆಚಾರ-ವ್ಯವಹಾರ, ಧಾರ್ಮಿಕ ಶಿಕ್ಷಣವನ್ನೂ ಕೊಡುವಂತಹ ಸಂಸ್ಥೆಗಳು ಹುಟ್ಟಿದವು. ಸರಕಾರದ ಅಧೀನದಲ್ಲಿದ್ದುಕೊಂಡು ಸಾಕಷ್ಟು ಸುಧಾರಣೆಯನ್ನೂ ಮಾಡುವುದು ಅಸಾಧ್ಯವೆನಿಸಿದ್ದರಿಂದ ಆ ಮೇಲೆ ಸರಕಾರದ ನಿಯಂತ್ರಣದಿಂದ ಸ್ವತಂತ್ರವಾಗಿರುವ ಸಂಸ್ಥೆಗಳು ಜನ್ಮವೆತ್ತಿದವು. ಕೊನೆಗೆ ರಾಷ್ಟ್ರೀಯ ಶಕ್ತಿಯು ಮತ್ತು ರಾಷ್ಟ್ರೀಯ ಭಾವನೆಗಳು ಬೆಳೆಯುತ್ತ ಹೋದ ಹೋದಂತೆ ರಾಷ್ಟ್ರೀಯ ಶಿಕ್ಷಣವೂ ಕೊಡಲ್ಪಡಲಾರಂಭಿಸಲ್ಪಟ್ಟಿತು. ಹೀಗೆ ರಾಷ್ಟ್ರೀಯ ವಿದ್ಯಾಲಯಗಳು ಉತ್ಪನ್ನವಾದವು.

ಈ ರಾಷ್ಟ್ರೀಯ ಶಿಕ್ಷಣದ ಇತಿಹಾಸವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಸನ್ ೧೮೫೭ರಿಂದ ೧೯೦೦ ವರೆಗೆ ೧೯೦೦ರಿಂದ ೧೯೨೦ರ ವರೆಗೆ ೧೯೨೦ರಿಂದ ಇತ್ತೀಚೆಗೆ.

ಮೊದಲಿನ ಕಾಲದಲ್ಲಿ ಉತ್ಪನ್ನವಾದ ಶಿಕ್ಷಣಸಂಸ್ಥೆಗಳಲ್ಲಿ ಸರಕಾರದವರ ಅಧೀನದಲ್ಲಿದ್ದುಕೊಂಡು ಶಿಕ್ಷಣ ಕ್ರಮದಲ್ಲಿ ಎಷ್ಟು ಸುಧಾರಣೆ ಮಾಡುವದಕ್ಕೆ ಆಗುತ್ತಿತ್ತೋ ಅಷ್ಟು ಸುಧಾರಣೆ ಮಾಡುವ ಪ್ರಯತ್ನವು ಮಾಡಲ್ಪಟ್ಟಿತು. ಈ ಕಾಲದಲ್ಲಿ ಮುಖ್ಯವಾಗಿ ಈ ಸಂಸ್ಥೆಗಳು ಕ್ರಮವಾಗಿ ಜನ್ಮತಾಳಿದವು. ಸರ್ ಸಯ್ಯದ ಅಹಮ್ಮದರವರ ಪ್ರಯತ್ನದಿಂದ ಅಲ್ಲೀಗಡದಲ್ಲಿ **ಮಹಮ್ಮಡನ್ ಎಂಗ್ಲೋ-ಓರಿಯಂಟಲ್ ಕಾಲೇಜು,** ಪುಣೆಯಲ್ಲಿ ಶ್ರೀ. ವಿಷ್ಣು ಶಾಸ್ತ್ರಿ ಚಿಪಳೂಣಕರ ಮತ್ತು ಲೋಕಮಾನ್ಯ ತಿಲಕರ ಸತತ ಪ್ರಯತ್ನದಿಂದ **ನ್ಯೂ ಇಂಗ್ಲೀಷ್ ಸ್ಕೂಲು** ಮತ್ತು **ಡೆಕ್ಕನ ಎಜ್ಯುಕೇಶನಲ್ ಸೊಸ್ಯಾಟಿಯೂ,** ಲಾಹೋರದಲ್ಲಿ ಆರ್ಯಸಮಾಜ ಧರ್ಮದ ಸ್ಥಾಪಕರಾದ ಶ್ರೀ ದಯಾನಂದ ಸರಸ್ವತಿಯವರ ಉಪದೇಶದ ಪ್ರೇರಣೆಯಿಂದ ಶ್ರೀ ಲಾಲಾ ಹಂಸರಾಜರ ಪರಿಶ್ರಮದಿಂದ **ದಯಾನಂದ**

(೨೩ನೇ ಪುಟಕ್ಕೆ ಮುಂದರಿಸಿಯಜೆ.)


# THE BANK OF MANGALORE, LTD.,

Head Office:—SRI LAXMINARAYAN BLDGS., CAR ST: MANGALORE. Branch:—MOODABIDRI.

## ದಿ ಬೇಂಕ್ ಆಫ್ ಮಂಗಳೂರು, ಲಿಮಿಟೆಡ್, ಮಂಗಳೂರು.

Authorised Capital ಅಧಿಕೃತ ಮೂಲಧನ } Rs. 2,00,000. Subscribed Capital ಚಂದಾ ಅರ್ಪಿಸಿದ್ದು } Rs. 28,325. Paid-up Capital ತೆತ್ತು ಬಂದದ್ದು } Rs. 6,025.

STATEMENT OF AFFAIRS AS ON 30TH JUNE 1935.

| | | | | | |
|---|---|---|---|---|---|
| Capital ಹಾಲು ವ್ಯೂಲಿಕರಿಂದ ಪಸೂಲಾದ ಧನ | ರೂ. | 6,025— 0— 0 | Furniture and Safe ಪೈಜರಿ ವಗೈರೆ | ರೂ. | 1,050— 0— 0 |
| Reserve Fund ಕ್ಷೇಮ ನಿಧಿ | ರೂ. | 500— 0— 0 | Authorised Investments ಚಿನ್ನಾಭರಣ, ವ ಇತರ ಜವಾಬ್ದಾರಿಯ ಮೇಲೆ | ರೂ. | 94,325—14— 6 |
| Deposits, Fixed, Current, etc. ನಿರಖು, ಚಾಲ್ತಿ ಇತ್ಯಾದಿ ಠೇವಣಾತಿಗಳು | ರೂ. | 74,707— 0— 9 | Bills per contra ಬಿಲ್ಸ್ ಜಮಾ ಇರುವಂತೆ ಬ್ಹಾ | ರೂ. | 16,037— 9— 2 |
| Due to Bankers ಬೇಂಕರರಿಗೆ ಸಲ್ಲತಕ್ಕದ್ದು | ರೂ. | 16,582— 1—10 | Sundries ಸಾಮಿಲವಾರು. | ರೂ. | 1,827— 6— 5 |
| Bills for Collection ಜಮಾ ಮಾಡುವರೆ ಇರುವ ಬೀಲುಗಳು | ರೂ. | 16,037— 9— 2 | Cash in hand and with Bankers at call ಕೈಯಲ್ಲಿ ಇರತಕ್ಕ ವ, ಬೇಂಕರರಲ್ಲಿರತಕ್ಕ ನಗದಿ ಶಿಲ್ಕು | ರೂ. | 4,130— 1— 7 |
| Sundries ಸಾದಿಲವಾರು | ರೂ. | 3,519— 3—11 | | | |
| | ರೂ. | 117,370—15— 8 | | ರೂ. | 117,370—15— 8 |

**Fixed Deposits ನಿರಖು ಠೇವಣಾತಿ.**

For 2 years 6½% ಎರಡು ವರ್ಷ ವ್ಯಾದೆಯವುಗಳಿಗೆ. For 6 months 5% ಆರು ತಿಂಗಳ ವ್ಯಾದೆಯವುಗಳಿಗೆ.

For 1 year 6% ಒಂದು ವರ್ಷ „ For 3 months 4½% ಮೂರು ತಿಂಗಳ „

Current, Savings Bank, Cumulative Deposits are accepted at most favourable rates. ಚಾಲ್ತಿ, ಸೇವಿಂಗ್ಸ್ ಬ್ಯಾಂಕ್, ಕ್ಯುಮುಲೇಟಿವ್ ಎಂಬ ಸಂಚಯದ ಠೇವಣಾತಿಗಳು ಸ್ವೀಕರಿಸೋಣಾಗುವವು. Drafts on Madras, Bombay, Calicut and Bangalore issued. Bills for collections received. ಮದ್ರಾಸು, ಮುಂಬಯಿ, ಕಲಿಕೋಟಿ, ಮತ್ತು ಬೆಂಗಳೂರುಗಳಿಗೆ ಡ್ರೆಫ್ಟ್‌ಗಳು ಕೊಡಲಾಗುವವು. ಚಕ್ಸ್ ಮತ್ತು ಬಿಲ್ಸ್ ಒಫ್ ಎಕ್ಸ್‌ಚೆಂಜ್ ಹಿಂದೂಸ್ಥಾನದಲ್ಲೆಲ್ಲಾ ಕಡೆಗಳದ್ದು ವಸೂಲು ಮಾಡಿ ಯಾ, ವಟಾಯಿಸಿಕೊಡಲಾಗುವುವು. Savings Bank Deposits-Interest allowed on daily balances at 4—6—0% ಸೇವಿಂಗ್ಸ್ ಬ್ಯಾಂಕ್ ಡಿಪೊಜಿಟಿನ ದಿವಸಂಪ್ರತಿ ಶಿಲ್ಕಿನ ಮೇಲೆ 4—6—0% ಬಡ್ಡಿ ಕೊಡಲ್ಪಡುವುದು.

ALL KINDS OF BANKING BUSINESS UNDERTAKEN.

A FEW SHARES ARE STILL AVAILABLE AT PAR.

*APPLY FOR PARTICULARS.*

ಸಾಮಾನ್ಯ ಬೇಂಕಿನ ಎಲ್ಲಾ ತರದ ವಹಿವಾಟುಗಳು ನಡಿಸಲ್ಪಡುವುವು.

ಮೂಲಬೆಲೆಗೇ ಕೆಲವು ಪಾಲುಗಳೂ ಮಾರಾಟಕ್ಕಿವೆ.

ವಿಶೇಷ ಮಾಹಿತಿ ಬಗ್ಗೆ ಆಫೀಸಿಗೆ ಬರಕೊಳ್ಳುವುದು.

# GREAT ANNUAL SALE!

# AT ROCK-BOTTOM PRICES

## 17th Dec. to Continue till 7th Jan.

### (Exculsive of 22nd, 25th Dec., 1st & 5th Jan.)

GENERAL BOOKS
DICTIONARIES
MAPS
STATIONERIES
FOUNTAIN PENS
MUSICAL INSTRUMENTS
THERMOS BOTTLES
TIME-PIECES
CALENDARS



OLYMPIA TYPEWRITERS
KIRLOSKAR PUMPS
SPRING COTS
PROVISIONS
HOUSEHOLD ARTICLES
SCOUT WHISTLES
XMAS CARDS
MITHRA TOILET SOAPS
CUTLERIES ETC.



ADLER CAR

We invite the public to avail themselves of the big opportunity which was not offered before. Please come & see at our premises B. M. Bookshop Compound, near Maidan, Mission Street A General REDUCTION in all articles to make room for fresh goods.

## POHOLATUM PAIN BALM

(MADE IN GERMANY)

A Home Remedy for Rheumatism, Asthma Sciatica, Lumbago, Wounds, Cuts, Piles, Headache, Colds, Sprains etc.
Replace your Medicine chest with this FAMOUS BALM.
As. 3 for ¼ Ounz Tin. As. 12 for 1 Ounz Jar.

# THE MODERN ENCYCLOPEDIA for CHILDREN.

DO YOU DREAM OF A GREAT FUTURE FOR YOUR CHILDREN?
DO YOU SEE THEM AS LAWYERS, AS DOCTORS, AS GREAT TEACHERS, AS AUTHORS OF FINE BOOKS, AS LEADERS OF INDUSTRY?
YOU CAN REALISE YOUR DREAM BY GIVING THIS BOOK TO YOUR CHILDREN AND ANSWER THEM THEIR SEVERAL QUESTIONS BY THE HELP OF THIS WONDERFUL NEW WORK. PRICE RS. 5/-

## ವರ್ಷಾಂತ್ಯದ ಪ್ರಚಂಡ ಮಾರಾಟ

ದಶಂಬರ 17ರಿಂದ ಜನವರಿ 7ರ ವರೆಗೆ.

ಎಲ್ಲಾ ತರದ ಪುಸ್ತಕಗಳು, ಡಿಕ್ಷನೆರಿಗಳು, ಮಿತ್ರ ಸಾಬೂನುಗಳು, ಕೈಪಂಪುಗಳು, ಸ್ಪ್ರಿಂಗ್‌ಮಂಚಗಳು, ಟೈಮ್‌ಪೀಸುಗಳು, ಫೌಂಟನ್‌ಪೇನುಗಳು, ಕೊಡೆಗಳು——ಇತ್ಯಾದಿ, ಇತ್ಯಾದಿ.

ಬಂದು ನೋಡಿ ಈ ಸಂದರ್ಭವನ್ನು ಪ್ರಯೋಗಿಸಿಕೊಳ್ಳಿರಿ.

## ಬಾಸೆಲ್ ಮಿಶನ್ ಬುಕ್ ಶಾಪ್,
ಮೈದಾನ್ ರೋಡ್, ಮಂಗಳೂರು, ಡ. ಕ.

(೨೦ನೇ ಪುಟದಿಂದ ಮುಂದರಿಸಿಯದೆ.)

**ಎಂಗ್ಲೋ-ವೈದಿಕ ಕಾಲೇಜು ಇನ್ಸ್ಟಿಟ್ಯೂಶನ್ನು** ಮತ್ತು ಕಾಶಿಯಲ್ಲಿ ಡಾಕ್ಟರ ಆನಿಬಿಸೆಂಟ ಮತ್ತು ಥಿಯಾಸಫಿಕಲ್ **ಸೊಸಾಯಿಟಿಯ** ಸದಸ್ಯರ ಪ್ರಯತ್ನದಿಂದ **ಸೆಂಟ್ರಲ್ ಹಿಂದೂ ಕಾಲೇಜುಗಳು** ಸ್ಥಾಪಿಸಲ್ಪಟ್ಟವು.

ಇದೇ ಕಾಲದಲ್ಲಿ ಜಾಲಂಧರದಲ್ಲಿ **ಕನ್ಯಾ ಮಹಾ ವಿದ್ಯಾಲಯವೂ,** ಪೂಣೆಯ ಬಳಿ ಹೀಂಗಣಿಯಲ್ಲಿ **ಅನಾಥ ಬಾಲಿಕಾಶ್ರಮವೂ** ಹುಟ್ಟಿತು. ಅನಾಥ ಬಾಲಿಕಾಶ್ರಮದ ವಿಠಾಟ್ ಸ್ವರೂಪವೇ ಈಗಿನ ಪೂಣೆಯ **ಶ್ರೀಮತಿ ನಾಥೀ ಬಾಯಿ ದಾವೋದರ ಥ್ಯಾಕರಸಿ ಭಾರತೀಯ ಮಹಿಲಾ ವಿದ್ಯಾಪೀಠವು.** ಈ ಸಂಸ್ಥೆಗಳಲ್ಲಿಯೂ ಸರಕಾರೀ ಪಾಠ ಕ್ರಮದ ಹೊರತಾಗಿ ಧಾರ್ಮಿಕ, ನೈತಿಕ, ಔದ್ಯೋಗಿಕ ಶಿಕ್ಷಣ ಕೊಡುವ ವ್ಯವಸ್ಥೆಯು ಮಾಡಲ್ಪಟ್ಟಿದೆ.

ಈ ಕಾಲದಲ್ಲಿ ಬಂಗಾಲ ಮತ್ತು ದಕ್ಷಿಣ ಭಾರತದಲ್ಲಿ ಈ ತರದ ಒಂದೂ ಸಂಸ್ಥೆಯು ಹುಟ್ಟಲಿಲ್ಲ. ಇದಕ್ಕೆ ಎರಡು ಕಾರಣಗಳು. ಬಂಗಾಳದಲ್ಲಿ ನಡೆದ ಧಾರ್ಮಿಕ ಚಳವಳಿಯು ಉಳಿದ ಪ್ರಾಂತಗಳಲ್ಲಿ ನಡೆದ ಧಾರ್ಮಿಕ ಚಳವಳಿಗಿಂತ ತೀರ ಭಿನ್ನಪ್ರಕಾರವಾದದ್ದಿತ್ತು. ಬ್ರಹ್ಮಸಮಾಜದಿಂದ ಸಮಾಜ ಸುಧಾರಣೆಯು ನಡೆದೇ ಇತ್ತು, ಮತ್ತು ಕಲಕತ್ತಾ ವಿಶ್ವ ವಿದ್ಯಾನಿಲಯದಲ್ಲಿ ಬೇಕಾದ ಸುಧಾರಣೆಗಳನ್ನು ಮಾಡಿಕೊಳ್ಳಲು ಬರುವಂತಿತ್ತು. ದಕ್ಷಿಣ ಭಾರತದಲ್ಲಿ ಇಂಗ್ಲೀಷು ಶಿಕ್ಷಣದ ದುಷ್ಪರಿಣಾಮವು ಅಷ್ಟೊಂದು ಆಗಿರಲಿಲ್ಲ. ಆದ್ದರಿಂದ ಯಾರಿಗೂ ಧಾರ್ಮಿಕ ಶಿಕ್ಷಣಸಂಸ್ಥೆಗಳ ಆವಶ್ಯಕತೆಯೂ ಕಂಡುಬರಲಿಲ್ಲ. ಕ್ರೈಸ್ತ ಧರ್ಮೋಪದೇಶಕರು ತಮ್ಮ ಚಳವಳಿಯನ್ನು ಸಾಗಿಸಿದರೂ ಅತ್ತ ಯಾರ ಲಕ್ಷ್ಯವೂ ಹೋಗಲಿಲ್ಲ. ಹೀಗಾಗಿ ೧೯೨೦ರ ವರೆಗೆ ಯಾವ ಶಿಕ್ಷಣಾಲಯಗಳೂ ಉತ್ಪನ್ನವಾಗಲಿಲ್ಲ.

ಎರಡನೇ ಕಾಲದಲ್ಲಿ ಸರಕಾರದ ಅಧೀನದಲ್ಲಿದ್ದುಕೊಂಡು ಹೆಚ್ಚು ಸುಧಾರಣೆಗಳನ್ನು ಮಾಡಲಿಕ್ಕಾಗುವದಿಲ್ಲವೆಂದು ಮನಗಂಡು ಬಂದದ್ದರಿಂದ ಸ್ವತಂತ್ರ ಸಂಸ್ಥೆಗಳು ಉಂಟಾದವು. ಅಲ್ಲದೆ ರಾಷ್ಟ್ರೀಯ ಚಳವಳಿಯು ದಿನದಿನಕ್ಕೆ ಬೆಳೆಯ ತೊಡಗಿದ್ದರಿಂದ ಅದರ ಪ್ರಭಾವವೂ ಆ ಶಿಕ್ಷಣಸಂಸ್ಥೆಗಳ ಮೇಲೆ ಬಿದ್ದಿತು. ರಾಷ್ಟ್ರೀಯ ಭಾವನೆಯಿಂದ ಪ್ರೇರಿತವಾಗಿ ಹುಟ್ಟಿದ ಸಂಸ್ಥೆಗಳು ಚಳವಳಿಯು ನಿಂತಕೂಡಲೆ ಮುಚ್ಚಿಹೋದವು. ಕೇವಲ ಶಿಕ್ಷಣಪದ್ಧತಿಯಲ್ಲಿಯೇ ಸುಧಾರಣೆ ಮಾಡುವದಕ್ಕಾಗಿ ಹೊರಟ ಸಂಸ್ಥೆಗಳು ಮಾತ್ರ ಉಳಿದುಕೊಂಡವು. ಕವೀಂದ್ರ ರವೀಂದ್ರನಾಥರ **ಶಾಂತಿನಿಕೇತನ** ಮತ್ತು **ವಿಶ್ವಭಾರತಿ; ಗುರುಕುಲ, ಕಾಂಗಡಿ; ಗುರುಕುಲ, ವೃಂದಾವನ; ಮಹಾ ವಿದ್ಯಾಲಯ, ಜ್ವಾಲಾಪುರ; ನ್ಯಾಶನಲ್ ಕೌನ್ಸಿಲ್ ಆಫ್ ಎಜ್ಯುಕೇಶನ್, ಬಂಗಾಲ; ಪ್ರೇಮ ಮಹಾ ವಿದ್ಯಾಲಯ, ವೃಂದಾವನ;** ಮತ್ತು **ಆಂಧ್ರ ಜಾತೀಯ ಕಲಾಶಾಲೆ** ಗಳೇ ಈ ಕಾಲದಲ್ಲಿ ಜನಿಸಿದ ಮುಖ್ಯವಾದ ಸಂಸ್ಥೆಗಳು. ಇವುಗಳಲ್ಲಿ ಮಾನಸಿಕ, ಶಾರೀರಿಕ, ನೈತಿಕ ಶಕ್ತಿಯನ್ನು ಬೆಳೆಯಿಸಿಕೊಳ್ಳಲು ಬರುವಂಥ ಶಿಕ್ಷಣವು ಕೊಡಲ್ಪಡುತ್ತಿತ್ತು. ಆದರೆ ಪ್ರೇಮ ಮಹಾ ವಿದ್ಯಾಲಯದಲ್ಲಿ ಹೆಚ್ಚಾಗಿ ಉದ್ಯೋಗ ಶಿಕ್ಷಣದ ಕಡೆಗೆ ಗಮನವು ಕೊಡಲ್ಪಟ್ಟಿತು.

ಸನ್ ೧೯೨೦ರಲ್ಲಿ ಭಾರತೀಯರಲ್ಲಿ ರಾಷ್ಟ್ರೀಯ ಭಾವನೆಯು ತುಂಬಿ ತುಳುಕಲಾರಂಭಿಸಿತು. ಹೊಸ ಹೊಸ ವಿಚಾರಗಳಿಗೆ, ರಾಷ್ಟ್ರೀಯ ಭಾವನೆಗೆ ಸರಕಾರೀ ವಿದ್ಯಾಲಯಗಳಲ್ಲಿ ಸ್ಥಾನವಿಲ್ಲದ್ದು ಕಂಡುಬಂದಾಗ, ರಾಷ್ಟ್ರೀಯ ಶಾಲೆಗಳು ಬೇಕೆಂದು ಮುಖಂಡರಿಗೆ ಎನಿಸತೊಡಗಿತು. ಅವರು ರಾಷ್ಟ್ರೀಯ ಶಿಕ್ಷಣವನ್ನು ಕುರಿತು ಚರ್ಚೆಯನ್ನೂ ಮಾಡಲಾರಂಭಿಸಿದರು. ಮಹಾತ್ಮಾ ಗಾಂಧೀಜೀಯವರೂ ಈ ಬಗ್ಗೆ ವಿಚಾರ ಮಾಡತೊಡಗಿದ್ದರು. ಅವರು ಪ್ರಾರಂಭಿಸಿದ ಅಸಹಕಾರದ ಚಳವಳಿಯಲ್ಲಿ ಭಾರತೀಯರಲ್ಲಿ ಪ್ರಚಂಡ ಉತ್ಸಾಹವೂ ಜಾಗೃತಿಯೂ ಹುಟ್ಟಿತು. ಭಾರತೀಯರು ಸರ್ವಪ್ರಕಾರದ ತಮ್ಮ ಏಳಿಗೆಯ ಮಾರ್ಗದಲ್ಲಿ ಅಡ್ಡ ಬರುವ ಬಂಧನಗಳನ್ನು ಕಡಿದೊಗೆಯಲು ಕಂಕಣಬದ್ಧರಾದರು. ೧೯೨೦ರಲ್ಲಿ ಕಲಕತ್ತಾ ನಗರದಲ್ಲಿ ನೆರೆದ ಕಾಂಗ್ರೆಸಿನಲ್ಲಿ ಅಸಹಕಾರದ ಗೊತ್ತುವಳಿಯು ಪಾಸಾಯಿತು. ಆಗ ರಾಷ್ಟ್ರೀಯ ಶಿಕ್ಷಣದ ವಿಷಯವಾಗಿಯೂ ಈ ತರದ ಗೊತ್ತುವಳಿಯಾಯಿತು. 'ಸರಕಾರವು ತನ್ನ ಅಧೀನದಲ್ಲಿದ್ದ ಶಾಲೆಗಳಿಂದ ತನ್ನ ಶಕ್ತಿಯನ್ನು ಬೆಳೆಸಿಕೊಳ್ಳುತ್ತದೆ. ಆದ್ದರಿಂದ ಇಂಥ ಸರಕಾರೀ ಮತ್ತು ಸರಕಾರದ ಸಹಾಯವನ್ನು ಪಡೆಯುತ್ತಿರುವ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳಿಸಬಾರದು. ಅಲ್ಲಲ್ಲಿ ರಾಷ್ಟ್ರೀಯ ಸ್ಕೂಲು ಕಾಲೇಜುಗಳನ್ನು ಸ್ಥಾಪಿಸಿ ತಮ್ಮ ಮಕ್ಕಳ ಶಿಕ್ಷಣದ ವ್ಯವಸ್ಥೆ ಮಾಡಿಕೊಳ್ಳಬೇಕು. ಈ ಗೊತ್ತುವಳಿಗೇ ನಾಗಪೂರ ಕಾಂಗ್ರೆಸ್ಸಿನಲ್ಲಿಯೂ ಹೆಚ್ಚು ಜೋರು ಕೊಡಲ್ಪಟ್ಟಿತು. ಈ ಗೊತ್ತುವಳಿಯನ್ನು ವಿದ್ಯಾರ್ಥಿಗಳು ಅತ್ಯಂತ ಉತ್ಸಾಹದಿಂದ ಅನುಲಿನಲ್ಲಿ ತಂದರು. ಶಾಲೆ ಕಾಲೇಜುಗಳನ್ನು ಬಿಟ್ಟು ಹೊರಬಿದ್ದು ಬಂದರು, ಅವರಿಗಾಗಿ ದೇಶದಲ್ಲಿ ಅಲ್ಲಲ್ಲಿ ರಾಷ್ಟ್ರೀಯ ಶಿಕ್ಷಣಸಂಸ್ಥೆಗಳು ತೆರೆಯಲ್ಪಟ್ಟವು. ಅವುಗಳಲ್ಲಿ ಮುಖ್ಯವಾದವು—**ಗುಜರಾತ್ ವಿದ್ಯಾಪೀಠ** (ಅಹಮದಾಬಾದ), **ಜಾಮಿಯಾ ಮಿಲ್ಲಿಯಾ ಇಸ್ಲಾಮಿಯಾ** (ಅಲೀಗಡ), **ತಿಲಕ ಮಹಾವಿದ್ಯಾಲಯ** (ಪುಣೆ), **ಬಿಹಾರ ವಿದ್ಯಾಪೀಠ** (ಪಾಟಣಾ), **ಕಾಶೀ ವಿದ್ಯಾಪೀಠ** (ಕಾಶೀ), **ಕರ್ನಾಟಕ ಮಹಾವಿದ್ಯಾಲಯ** (ಧಾರವಾಡ), **ಪ್ರಯಾಗ ಮಹಿಳಾ ವಿದ್ಯಾಪೀಠ** (ಅಲಾಹಾಬಾದ).

ಇವುಗಳಲ್ಲದೆ ಇನ್ನೂ ಎಷ್ಟೋ ಚಿಕ್ಕ ಪುಟ್ಟ ವಿದ್ಯಾಲಯಗಳು ಸ್ಥಾಪಿಸಲ್ಪಟ್ಟರೂ, ಚಳವಳಿಯು ಶಾಂತವಾದ ಮೇಲೆ ಅವು ನಿಂತು ಹೋದುವು. ಈಗ ಸುಮಾರು ೬೦ ವಿದ್ಯಾಲಯಗಳು ಜೀವಿತವಿರುವವೆಂದು ಹೇಳಬಹುದು.

ಮೊದಲಿನ ಕಾಲದಲ್ಲಿ ಹುಟ್ಟಿದ ವಿದ್ಯಾಲಯಗಳ ಪಾಠ ಕ್ರಮದಲ್ಲಿ ವಿಶೇಷ ಬದಲಾವಣೆಗಳೇನೂ ಆಗಲಿಲ್ಲ. ಎರಡನೆಯ ಕಾಲದಲ್ಲಿ ಹುಟ್ಟಿದ ವಿದ್ಯಾಲಯಗಳಲ್ಲಿ ಮಾತೃಭಾಷೆಯ—ಪ್ರಾಂತೀಯ ಭಾಷೆಯ ಮೂಲಕ ಶಿಕ್ಷಣವು ಕೊಡಲಾರಂಭಿಸಲ್ಪಟ್ಟಿತು. ನಿಜವಾದ ಸಂಗತಿಗಳನ್ನೊಳಗೊಂಡ, ಭಾರತೀಯರ ಸರ್ವಾಂಗಸುಂದರ ಉನ್ನತಿಯ ಮಾರ್ಗವನ್ನು ತೋರಿಸುವಂಥ ಪಠ್ಯ ಪುಸ್ತಕಗಳು ಓದಿಸಲ್ಪಡಲಾರಂಭಿಸಿದವು. ಈ ಸುಧಾರಣೆಯು ಮೂರನೆಯ ಕಾಲದಲ್ಲಿ ಹುಟ್ಟಿದ ಶಿಕ್ಷಣಸಂಸ್ಥೆಗಳಲ್ಲಿಯೂ ಇದ್ದೇ ಇತ್ತು. ಇದರೊಡನೆ ಇವುಗಳಲ್ಲಿ ಶಿಕ್ಷಣವು ನಿಃಶುಲ್ಕವಾಗಿ ಕೊಡಲಾರಂಭಿಸಲ್ಪಟ್ಟಿತು. ವಿದ್ಯಾರ್ಥಿಗಳ ಸಾದಾ ಮತ್ತು ಪವಿತ್ರ ಜೀವನ, ಚರಿತ್ರದ ಕಡೆಗೆ ವಿಶೇಷ ಗಮನವು ಕೊಡಲ್ಪಡಲಾರಂಭಿಸಿತು. ಉದ್ಯೋಗಗಳು ಕಲಿಸಲ್ಪಡಲಾರಂಭಿಸಿದವು. ರಾಜನೀತಿಯೂ ಕಲಿಸಲ್ಪಡಲಾರಂಭಿಸಿತು. ಕವಾಯಿತಿನ ಶಿಕ್ಷಣವೂ ಪ್ರಾರಂಭಿಸಲ್ಪಟ್ಟಿತು. ಮೂರನೇ ಕಾಲದಲ್ಲಿನ ಶಿಕ್ಷಣಸಂಸ್ಥೆಗಳಲ್ಲೆಲ್ಲ ಪಾಠಕ್ರಮವು ಒಂದೇ ಬಗೆಯದಾಗಿದ್ದರೂ ಒಂದೊಂದು ವಿದ್ಯಾಲಯದ ವೈಶಿಷ್ಟ್ಯವು ಒಂದೊಂದು ಪ್ರಕಾರದ್ದಿದೆ. ಇವೆಲ್ಲವುಗಳಲ್ಲಿಯೂ ಏಕಸೂತ್ರತೆಯನ್ನು ತರುವುದು ಅತ್ಯವಶ್ಯಕವಾಗಿರುವುದು. ಈ ದಿಶೆಯಲ್ಲಿ ಕಾಶೀ ವಿದ್ಯಾಪೀಠವು ಪ್ರಯತ್ನಿಸುತ್ತಿದೆ. ಒಂದು ರಾಷ್ಟ್ರೀಯ ಶಿಕ್ಷಣ ಪರಿಷತ್ತನ್ನು ಕರೆಯಬೇಕೆಂದು ಆಲೋಚಿಸುತ್ತಿದೆ. ಇರಲಿ.

ಸನ್ ೧೯೨೪ರಲ್ಲಿ ಬೆಳಗಾವಿಯಲ್ಲಿ ನೆರೆದ ಕಾಂಗ್ರೆಸಿನಲ್ಲಿ ರಾಷ್ಟ್ರೀಯ ಶಿಕ್ಷಣಸಂಸ್ಥೆಗಳ ವಿಷಯವಾಗಿ ಒಂದು ಗೊತ್ತುವಳಿಯೂ ಪಾಸಾಯಿತು. ಅದರ ಸಾರಾಂಶವು ಇಷ್ಟೇ—ಯಾವ ಸಂಸ್ಥೆಗಳಲ್ಲಿ ಶಿಕ್ಷಣದ ಮಾಧ್ಯಮ ಯಾವುದಾದರೂ ಭಾರತೀಯ ಭಾಷೆ ಇರುವುದಿಲ್ಲವೋ, ಯಾವದು ಹಿಂದೂ-ಮುಸಲ್ಮಾನರ ಐಕ್ಯಕ್ಕಾಗಿ ಪ್ರಯತ್ನ ಮಾಡುವುದಿಲ್ಲವೋ, ಅಸ್ಪೃಶ್ಯತಾ ನಿವಾರಣೆ ಮತ್ತು ಅವರಲ್ಲಿ ಶಿಕ್ಷಣಪ್ರಚಾರದ ಕೆಲಸವನ್ನು ಮಾಡಲು ಯತ್ನಿಸುವುದಿಲ್ಲವೋ, ಯಾವ ಸಂಸ್ಥೆಗಳಲ್ಲಿ ನೂಲುವದು, ಹತ್ತಿ ಹಿಂಜುವದು ಆವಶ್ಯಕ ವಿಷಯದಂತೆ ಕಲಿಸಲ್ಪಡುವದಿಲ್ಲವೋ, ಶಾರೀರಿಕ ವ್ಯಾಯಾಮ ಮತ್ತು ಆತ್ಮರಕ್ಷಣೆಯ ಶಿಕ್ಷಣವು ಕೊಡಲ್ಪಡುವದಿಲ್ಲವೋ, ೧೫ ವರ್ಷಕ್ಕೆ ಮೇಲ್ಪಟ್ಟ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ದಿನಾಲೂ ಅರ್ಧ ಗಂಟೆಯಾದರೂ ನೂಲುವದಿಲ್ಲವೋ, ಮತ್ತು ಖಾದಿಯನ್ನು ಧರಿಸುವದಿಲ್ಲವೋ, ಅವು ರಾಷ್ಟ್ರೀಯ ಶಿಕ್ಷಣಸಂಸ್ಥೆಗಳಲ್ಲ. ಈ ಗೊತ್ತುವಳಿಗೆ ಅನುಸಾರವಾಗಿಯೇ ಎಲ್ಲ ರಾಷ್ಟ್ರೀಯ ಶಾಲೆಗಳಲ್ಲಿಯೂ ಕಾಲೇಜುಗಳಲ್ಲಿಯೂ ಪಾಠಕ್ರಮವಿದೆಯೆಂದು ಎದೆ ತಟ್ಟಿ ಹೇಳಬಹುದು.

ರಾಷ್ಟ್ರೀಯ ಶಿಕ್ಷಣದಿಂದ ರಾಷ್ಟ್ರೀಯ ಸಂಸ್ಕೃತಿಯನ್ನು ಸುಸಂಪನ್ನ ಮಾಡುವದು ಮತ್ತು ರಾಷ್ಟ್ರೀಯ ಸಾಹಿತ್ಯದ ಸರ್ವಾಂಗೀಣ ಉನ್ನತಿಯನ್ನು ಮಾಡುವದು ರಾಷ್ಟ್ರೀಯ ಶಿಕ್ಷಣದ ಉದ್ದೇಶವು. ಭಾರತೀಯ ಸಾಹಿತ್ಯಕ್ಕೆ ಹಾನಿ ತಟ್ಟಿಸದ ಹಾಗೆ ಎಲ್ಲಿಯವರೆಗೆ ಅನ್ಯ ಭಾಷೆಗಳಲ್ಲಿದ್ದ ಸಾಹಿತ್ಯ, ಸಂಸ್ಕೃತಿಯ ಸಹಾಯವನ್ನು ಪಡೆಯಲಿಕ್ಕಾಗುವುದೋ ಅಲ್ಲಿಯವರೆಗೆ ಅದರ ಸಹಾಯವನ್ನು ಪಡೆಯಬಹುದು. ಈಗಿನ ಪರಿಸ್ಥಿತಿಯಲ್ಲಿ ಭಾರತೀಯರ ಪಾರತಂತ್ರ್ಯವನ್ನು ದೂರ ಮಾಡುವಂಥ ಶಿಕ್ಷಣ ಕೊಡುವುದೂ ರಾಷ್ಟ್ರೀಯ ಶಿಕ್ಷಣದ ಒಂದು ಉದ್ದೇಶವು ಎಂದು ಹೇಳಬಹುದು. ಎಲ್ಲಿಯವರೆಗೆ ಭಾರತದಲ್ಲಿ ಜಾತಿ ಮತ ಮತಾಂತರಗಳ ಗೋಡೆಗಳು ಎದ್ದುನಿಂತು ಮನುಷ್ಯಮನುಷ್ಯರಲ್ಲಿ ಭೇದವನ್ನುಂಟುಮಾಡಿರುವವೋ, ಹೊಟ್ಟೆಕಿಚ್ಚು ಮತ್ತು ದ್ವೇಷವನ್ನು ಬೆಳೆಸುತ್ತಿರುವವೋ, ಧರ್ಮ ಮತ್ತು ಜಾತಿಯ ಭೇದಭಾವನೆಯು ಇರುವದೋ ಅಲ್ಲಿಯವರೆಗೆ ಅವನ್ನು ದೂರವಾಡುವಂಥ ವಿದ್ಯೆಯನ್ನು ಕಲಿಸುವುದೂ ಒಂದು ರಾಷ್ಟ್ರೀಯ ಶಿಕ್ಷಣದ ಮುಖ್ಯವಾದ ಉದ್ದೇಶವಾಗಿರುವುದು. ಒಟ್ಟಿನಲ್ಲಿ ಈ ಆದರ್ಶವನ್ನು ಮುಂದಿಟ್ಟುಕೊಂಡು ಮಾನಸಿಕ ಮತ್ತು ಶಾರೀರಿಕ ಶಕ್ತಿಗಳ ಸರ್ವಾಂಗೀಣ ವಿಕಾಸವನ್ನು ಮಾಡಲು ಪ್ರಯತ್ನಿಸುವುದೇ ರಾಷ್ಟ್ರೀಯ ಶಿಕ್ಷಣದ ಉದ್ದೇಶವು. ಈ ಉದ್ದೇಶಗಳ ಪೂರ್ತಿಗಾಗಿ ಹುಟ್ಟುವ ಸಂಸ್ಥೆಗಳೇ ರಾಷ್ಟ್ರೀಯ ಶಿಕ್ಷಣಸಂಸ್ಥೆಗಳು. ಇಂಥ ಶಿಕ್ಷಣಸಂಸ್ಥೆಗಳು ಈಗ ಹಿಂದುಸ್ಥಾನದಲ್ಲಿ ಬಹಳ ಕಡಿಮೆಯಾಗಿವೆ. ರಾಷ್ಟ್ರೋನ್ನತಿಗೆ ಇಂಥ ಸಂಸ್ಥೆಗಳು ಅತ್ಯಂತ ಆವಶ್ಯಕವಾಗಿವೆ. ಇಂಥ ಸಂಸ್ಥೆಗಳು ಎಷ್ಟೆಷ್ಟು ಹುಟ್ಟುವುವೋ ಅಷ್ಟಷ್ಟೂ ರಾಷ್ಟ್ರವು ಮುಂದುವರಿಯುವುದು. ಕರ್ನಾಟಕದಲ್ಲಿ ಇಂಥ ದೊಂದು ಸಂಸ್ಥೆಯಿದ್ದರೂ ಅದು ಕೆಲವು ಕಾರಣಗಳಿಂದ ನಿಂತು ಹೋಯಿತು. ಇತ್ತ ಪುನಃ ರಾಷ್ಟ್ರೀಯಶಿಕ್ಷಣಪ್ರೇಮಿಗಳು ಆ ಕರ್ನಾಟಕ ಮಹಾವಿದ್ಯಾಲಯದ ಪುನರುದ್ಧಾರಕ್ಕೆ ಮುಂಡೆ ಬಂದು ರಾಷ್ಟ್ರೋನ್ನತಿಗೆ ನೆರವಾಗುವರೆಂದು ನಂಬಿದ್ದೇವೆ.


Ford

ANNOUNCING

FOUR SEATER

10 H. P.

TOURING CARS



THE HOOD WHEN LOWERED FITS ITSELF FLUSH WITH THE BODY.

U. SUBRAYA NAYAK,

*FORD DEALER.*

SHIMOGA & MANGALORE.

# The Kanara Enterprise Ltd., Puttur.

Estd: 1920] [1920ರಲ್ಲು ಸ್ಥಾಪಿತವಾಯಿತು.

## ದಿ ಕೆನರಾ ಎಂಟರ್‌ಪ್ರೈಸ್ ಲಿಮಿಟೆಡ್, ಪುತ್ತೂರು.

**ಠೇವಣಾತಿಗಳ ದರ.**

**ನಿರಖು ಠೇವಣಾತಿಗಳು.** 3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ.

**'ಸೇವಿಂಗ್ಸ್ ಬೇಂಕ್'** ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ.

**'ಚಾಲ್ತಿ ಠೇವಣಾತಿಗಳು'** ಶೇಕಡಾ 2½ರಂತೆ.

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು.

**ಹೆಚ್ಚಿನ ಮಾಹಿತಿ ಬಗ್ಯೆ ಬೇಂಕಿಗೆ ಬರಕೊಳ್ಳುವುದು.**

ಬೇಂಕಿನ ಆಫೀಸು,
ಪುತ್ತೂರು.
ತಾ. 10—4—1935.

G. N. LAKSHMAN PAI,
ಸೆಕ್ರಟರಿ.



ಡಾಕ್ಟರ್ ಜಿ. ಬಿ. ಇವರ

# ಸುಗಂಧ ನಸ್ಯದ ಪುಡಿ

?

ನೀವು ಯಾರು? ಉಪಾಧ್ಯಾಯರೆ? ವರ್ತಕರೆ? ಆರಂಬಗಾರರೆ? ಅಥವ ಚದುರಂಗ ಆಡುವವರೆ? ನೀವು ಯಾರಾದರೂ ಸರಿ-ನಿಮಗೆ ಬೇಸರಿಕೆಯುಂಟಾಗಿ, ಕೆಲಸದಲ್ಲಿ ಆಸಕ್ತಿ ತಪ್ಪಿದಾಗ, ಡಾಕ್ಟರ್ ಜಿ. ಬಿ. ಇವರ ಸುಗಂಧ ನಸ್ಯದ ಪುಡಿಯನ್ನು ಉಫಯೋಗಿಸಿ. ಆಗ ನಿಮ್ಮಲ್ಲಿ ನವಚೇತನವುಂಟಾಗಿ, ಉತ್ಸಾಹವೂ, ಸ್ಫೂರ್ತಿಯೂ ತೋರಿಬರುವುದು.

**ಬೆಲೆ: ಬುಡ್ಡಿ ಒಂದಕ್ಕೆ ನಾಲ್ಕಾಣೆ.** (ಟಪ್ಪಾಲು ಖರ್ಚು ಪ್ರತ್ಯೇಕ)

ಗುರುಬಸವ ಅಂಡ್ ಕಂಪೆನಿ, ಲಿಮಿಟೆಡ್,
ಪೋಸ್ಟು ಬಾಕ್ಸು ನಂಬರು ೫೧೦, ಪಾರ್ಕು ಟೌನ್, ಮದರಾಸು.



# Hail and Co

**70/4, Chickpet, BANGALORE CITY.**

**Illustrate Your Announcements and Double Their Effectiveness.**

## THE LEADING BLOCK MAKERS

FOR OVER 18 YEARS' EXPERIENCE ARE NOW AT YOUR SERVICE.

Line and Half-tone Blocks on Zinc or Copper for

BOOK ILLUSTRATIONS, MAGAZINES & NEWSPAPERS,
ART LABELS, ETC., ETC.

***We specialize in designing and Cinema Slides.***



**The Zandu Pharmaceutical Works, Ltd., Bombay.**

ದಿ ಝಾಂಡೂ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಯಿ.

ಇವರ

# ಕೇಸರೀ ಜೀವನ

